
ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ

ಸಂಪುಟ 26 ಸಂಚಿಕೆ 47 ನವೆಂಬರ್ 21, 2004 ಬೆಲೆ ರೂ. 3.00




ಬುಶ್ ಗೆದ್ದಿದ್ದು ಹೇಗಪ್ಪಾ?

ಬಿಜೆಪಿಯೊಳಗಿನ ವಿವಾದಗಳ ಅಂತರಾಳ





ಪೆಟ್ರೋಲಿಯಂ - ಗ್ಯಾಸ್ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ



ಉದ್ಯೋಗ ಭರವಸೆ ಕಾಯ್ದೆಗಾಗಿ ಕೂಲಿಕಾರರ ಸಮ್ಮೇಳನ

- ಬಿ.ಎ.ಇ. ಕಾಲೇಜಿನ ವಂಚನೆಗಳು
- ಜನಾದೇಶ ಪಾಲಿಸಿ ಯುಪಿಎಗೆ ಆಗ್ರಹ
- ಜಾತಿ ವ್ಯವಸ್ಥೆಯ ಮೂಲ

ಕರ್ನಾಟಕದಲ್ಲಿ ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಮಿತಿಯಿಲ್ಲ. ಬೆಂಗಳೂರಿನಂತಹ ಹೈಟೆಕ್ ಸಿಟಿಯಲ್ಲಿಯೇ ಸೌಲಭ್ಯಗಳ ಕೊರತೆಯಿಂದ ನರಳುತ್ತಿರುವ, ಆದರೆ ಡೊನೇಷನ್ ಸುಲಿಗೆಯಲ್ಲಿ ಖ್ಯಾತರಾಗಿರುವ ಸಂಸ್ಥೆಗಳು ಅನೇಕ. ಅದರಲ್ಲಿ 'ವಿದ್ಯಾದಾನ' ಮಾಡುವ ದಂಧೆಗಾರರು ಇದ್ದಾರೆ. ಆ ಅವ್ಯವಸ್ಥೆ ವಿರುದ್ಧ ವಿದ್ಯಾರ್ಥಿಗಳು ಹೋರಾಟಕ್ಕಿಳಿದ ವರದಿಯಿಲ್ಲಿದೆ

ಆಡಳಿತ ಮಂಡಳಿಯ ವಂಚನೆಯ ವಿರುದ್ಧ ಸಂಘರ್ಷಕ್ಕಿಳಿದ ವಿದ್ಯಾರ್ಥಿಗಳು

ಬಿ.ಎ.ಇ., ಬೆಂಗಳೂರಿನಲ್ಲಿರುವ ಹಲವು ಇಂಜನಿಯರಿಂಗ್ ಕಾಲೇಜುಗಳಲ್ಲಿ ಇದೂ ಒಂದು. 'ಬೇಲಿಮಠ ಮಹಾಸಂಸ್ಥಾನ ಎಜುಕೇಷನ್ ಟ್ರಸ್ಟ್' ಸುಪರ್ದಿಗೆ ಬರುವ ಈ ಕಾಲೇಜಿನ ಪೂರ್ಣ ಹೆಸರು 'ಬಸವ ಅಕಾಡೆಮಿ ಆಫ್ ಇಂಜನಿಯರಿಂಗ್' ಕಾಲೇಜು, ಬೆಂಗಳೂರಿನ ಹೊರವಲಯದಲ್ಲಿಯ ಈ ಕಾಲೇಜಿನ ವಿಳಾಸ ಗುರುತಿಸುವುದೂ ಕಷ್ಟದ ಕೆಲಸವೆ.

ಸುಮಾರು 2002-2003ರಲ್ಲಿ ಪ್ರಾರಂಭವಾದ ಬಿ.ಎ.ಇ. ಕಾಲೇಜು ಅಂದಿನಿಂದ (ಪ್ರಸಕ್ತ ಶೈಕ್ಷಣಿಕ ವರ್ಷವೂ ಸೇರಿದಂತೆ) ಸಿ.ಇ.ಟಿ. ಮುಖಾಂತರ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತಾ ಬಂದಿದೆ. ಹೀಗಾಗಿ ಸುಮಾರು 180 ವಿದ್ಯಾರ್ಥಿಗಳು ಈ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಆದರೆ ಬಿ.ಎ.ಇ. ಆಡಳಿತ ಮಂಡಳಿಯ ಶಿಕ್ಷಣ ದ್ರೋಹಿ ನೀತಿಯಿಂದಾಗಿ ಈ ಎಲ್ಲಾ ವಿದ್ಯಾರ್ಥಿಗಳು ಇಂದು ಹೋರಾಟಕ್ಕೆ ಇಳಿದಿದ್ದಾರೆ. ಕಾಲೇಜು ಆರಂಭವಾದಾಗಿನಿಂದ ಇಲ್ಲಿಯವರೆಗೆ ಯಾವುದೇ ರೀತಿಯ ಕನಿಷ್ಟ ಸೌಲಭ್ಯ ನೀಡದೆ ವಂಚಿಸಲಾಗಿದೆ. ಕಾಲೇಜಿನಲ್ಲಿ ಪಾಠ ಮಾಡುವ ಅಧ್ಯಾಪಕರುಗಳಿಂದ ಹಿಡಿದು, ಸಣ್ಣ ಮೂಲಭೂತ ಸೌಕರ್ಯದವರೆಗೆ ಯಾವುದೇ ರೀತಿಯ ಸೌಲಭ್ಯಗಳಿಲ್ಲದೆ, ಶಿಕ್ಷಣಕ್ಕೆ ಪೂರಕವಾದ ವಾತಾವರಣವಿಲ್ಲದೆ, ಈ ವಿದ್ಯಾರ್ಥಿಗಳ ಭವಿಷ್ಯ ಮಣ್ಣು ಪಾಲಾಗುತ್ತಿದೆ.

ಕನಿಷ್ಠ ಇಂಜನಿಯರಿಂಗ್ ಕಾಲೇಜಿನಲ್ಲಿ ಇರಬೇಕಾದಂತಹ ಅರ್ಹ ಅಧ್ಯಾಪಕರುಗಳು ಬಿ.ಎ.ಇ. ಕಾಲೇಜಿನಲ್ಲಿ ಇಲ್ಲ. ಎಂ.ಇ., ಎಂ.ಟೆಕ್., ಮಾಡಿರುವಂತ ಅಧ್ಯಾಪಕರುಗಳ ಬದಲಿಗೆ ಡಿಪ್ಲೊಮೊ ಮಾಡಿರುವ, ಬಿ.ಇ., ಎಂ.ಇ. ನಲ್ಲಿ ಅನುತ್ತೀರ್ಣರಾದಂತವರೂ ಇಲ್ಲಿ ಅಧ್ಯಾಪಕರಾಗಿರುವುದು, ಇಲ್ಲಿನ ಶಿಕ್ಷಣದ ಗುಣಮಟ್ಟಕ್ಕೆ ಹಿಡಿದ ಕನ್ನಡಿಯಾಗಿದೆ. ಹಾಗೆಯೇ ಸಲಕರಣೆಗಳೇ ಇಲ್ಲದ ಪ್ರಯೋಗಾಲಯ, (ವಿದ್ಯಾರ್ಥಿಗಳಿಂದ ತಲಾ ಒಂದು ಸಾವಿರ ರೂ. ಹಣ ಪಡೆದೂ), ಅಂತರ್‌ಜಾಲ(ಇಂಟರ್‌ನೆಟ್) ವ್ಯವಸ್ಥೆ ಇಲ್ಲದ, ನಕಲಿ ಸಾಫ್ಟ್‌ವೇರ್ ಹೊಂದಿರುವ ಗಣಕಯಂತ್ರಗಳು, ಹೊಸ ಪುಸ್ತಕಗಳನ್ನು ಕಾಣದ ಗ್ರಂಥಾಲಯ, ಇವುಗಳಾವುವು ವಿದ್ಯಾರ್ಥಿಗಳಿಗೆ ಪ್ರಯೋಜನಕ್ಕೆ ಬಾರದಂತಾಗಿವೆ. ಇನ್ನು ಕಳಪೆ ಕಾಮಗಾರಿಯ ಕಟ್ಟಡವಂತೂ ಈಗಾಗಲೇ ಬಿರುಕು ಬಿಟ್ಟಿದ್ದು ಗೋಡೆಯಿಂದ ಮಣ್ಣು ಉದುರುತ್ತಿದೆ. ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಸ್ವಚ್ಛತೆ ಇದಾವುದೂ ಇಲ್ಲವೇ ಇಲ್ಲ. ಕಾಲೇಜಿನ ಹಿಂಬದಿಗೆ ಕಣ್ಣು ಹಾಯಿಸಿದರೆ ಬೆಂಗಳೂರು ನಗರದ ಕಸದ ರಾಶಿ ಕಣ್ತುಂಬ! ಇನ್ನು ಶುದ್ಧ ಗಾಳಿಯ ಮಾತೆಲ್ಲಿ? ಇಂತಹ ಅವ್ಯವಸ್ಥೆಯ ಆಗರದಲ್ಲಿ ವಿದ್ಯಾರ್ಥಿಗಳ ಸ್ಥಿತಿ ನರಕವಾಗಿದೆ. ಸೆಮಿಸ್ಟರ್ ಪರೀಕ್ಷೆಗೆ ಒಂದು ತಿಂಗಳಿದ್ದರೂ ವಿದ್ಯಾರ್ಥಿಗಳಿಗೆ ಓದಲು ಸಾಧ್ಯವಾಗುತ್ತಿಲ್ಲ.


ಕ್ರಮವಹಿಸಿ ಎಂದು ಆಗ್ರಹಿಸಿದ ವಿದ್ಯಾರ್ಥಿಗಳು

ಸಿಇಟಿ ಘಟಕದ ಮೂಲಕವೂ ವಂಚನೆ

ಸಿಇಟಿ ಘಟಕದ ವಿಳಾಸ ವಿವರಣೆಯಲ್ಲಿ ಕಾಲೇಜಿನ ನಿಜ ನಾಮವಾದ ಬಿ.ಎ.ಇ(ಬಸವ ಅಕಾಡೆಮಿ ಆಫ್ ಇಂಜನಿಯರಿಂಗ್) ಎಂದು ಹೆಸರು ನೀಡದೆ ಬಿ.ಸಿ.ಇ. ಎಂದು ನೀಡಿದೆ. ಬಿ.ಸಿ.ಇ. (ಬೆಂಗಳೂರ್ ಕಾಲೇಜ್ ಆಫ್ ಇಂಜೀನಿಯರಿಂಗ್) ಎಂಬ ಪರಿಚಿತ ಕಾಲೇಜೊಂದಿದೆ. ಸಿಇಟಿ ಘಟಕದಲ್ಲಿ ಪೂರ್ಣ ವಿಳಾಸವಿಲ್ಲದ ಕಾರಣ ವಿದ್ಯಾರ್ಥಿಗಳು ಬಿ.ಸಿ.ಇ. ಎಂದು ಆಯ್ಕೆ ಮಾಡಿಕೊಂಡಿದ್ದಾರೆ. ಅದು ಬಸವ ಕಾಲೇಜ್ ಆಫ್ ಇಂಜನಿಯರಿಂಗ್(ಬಿ.ಸಿ.ಇ) ಆಗಿದೆ. ಇನ್ನು ಸಿಇಟಿ ಘಟಕದಲ್ಲಿರುವಂತೆ ಪ್ರಾಂಶುಪಾಲರ ಹೆಸರನ್ನು ಬಿಟ್ಟರೆ ಉಳಿದೆಲ್ಲಾ ಹೆಸರುಗಳೂ ನಕಲಿ. ಸಿಇಟಿ ಘಟಕದ ವಿವರಣೆಯಂತೆ ಯಾವುದೇ ಅಧ್ಯಾಪಕರುಗಳೂ ಬಿ.ಎ.ಇ. ಕಾಲೇಜಿನಲ್ಲಿ ಇಲ್ಲವಾಗಿದ್ದಾರೆ. ಸಿ.ಇ.ಟಿ. ಘಟಕಕ್ಕೆ ಬೇರೆ ಕಾಲೇಜಿನ ಅಧ್ಯಾಪಕರುಗಳ ಹೆಸರನ್ನು ನೀಡಿರುವುದು ಬಯಲಾಗಿದೆ. ಸಾಲದೆಂಬಂತೆ ಬಿ.ಎ.ಇ. ಆಡಳಿತ ಮಂಡಳಿಯು ತನ್ನ ಕಾಲೇಜು ಕೈಪಿಡಿಯಲ್ಲಿ ಬಹು ಅಂತಸ್ತಿನ ಐಷಾರಾಮಿ ಕಟ್ಟಡದ ಚಿತ್ರ ಮುದ್ರಿಸಿ ವಿತರಿಸಿದೆ. ಆದರೆ ಕಾಲೇಜು ಕಟ್ಟಡವು ಹಳೇ ಸರಕು ಗೋದಾಮಿನಂತಿದ್ದು, ಬೀಳುವ ಸ್ಥಿತಿಯಲ್ಲಿದೆ. ಇಷ್ಟೆಲ್ಲಾ ನಡೆದಿದ್ದರೂ ಸಿ.ಇ.ಟಿ. ಘಟಕವಾಗಲೀ ವಿ.ಟಿ.ಯು. ಆಡಳಿತ ಮಂಡಳಿಯಾಗಲೀ ಇದರ ವಿರುದ್ಧ ಕ್ರಮ ಕೈಗೊಳ್ಳದೆ ಅವಕಾಶ ಮಾಡಿಕೊಟ್ಟಿರುವುದು, ಅವರ ವಿದ್ಯಾರ್ಥಿ ವಿರೋಧಿ ಧೋರಣೆಯನ್ನು ಎತ್ತಿ ಹಿಡಿದಿದೆ.

ಸರ್ಕಾರದ ನೀತಿ

ಸಿಇಟಿ ಪ್ರವೇಶ ಪ್ರಕ್ರಿಯೆ ಸಂದರ್ಭದಲ್ಲಿ ಸರ್ಕಾರ ಹಾಗು ಆಡಳಿತ ಮಂಡಳಿಗಳ ಸುಲಿಗೆಕೋರ ನೀತಿಯಿಂದಾಗಿ ವಿದ್ಯಾರ್ಥಿಗಳು ಹಾಗು ಪೋಷಕರು ತತ್ತರಿಸಿ ಹೋಗಿದ್ದಾರೆ. ವಿದ್ಯಾರ್ಥಿಗಳ ಆತ್ಮಹತ್ಯೆಯೂ ನಡೆದು ಹೋಗಿದೆ. ಇಂತಹ ಅಮಾನವೀಯ ಘಟನೆಗಳ ನಡುವೆಯೇ ಬಿ.ಎ.ಇ. ಆಡಳಿತ ಮಂಡಳಿ ವಿದ್ಯಾರ್ಥಿಗಳಿಗೆ ವಂಚನೆ ಎಸಗಿರುವುದು, 'ಕೇವಲ ಹಣ ಮಾಡುವ ಒಂದೇ ಒಂದು ಉದ್ದೇಶದಿಂದ' ಖಾಸಗೀ ಆಡಳಿತ ಮಂಡಳಿಗಳು ಹುಟ್ಟಿಕೊಂಡಿರುವುದಕ್ಕೆ ಸಾಕ್ಷಿಯಾಗಿದೆ.

ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ನೀತಿಗಳ ಪ್ರಭಾವಕ್ಕೊಳಗಾಗಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕನಿಷ್ಟ ವೃತ್ತಿ ಶಿಕ್ಷಣ ಸಂಸ್ಥೆಗಳಿಗಿರಬೇಕಾದ ಮಾನದಂಡವನ್ನು ಕಡೆಗಣಿಸಿ, ರಾಜಕೀಯ ಹಿತಾಸಕ್ತಿಗೆ ಮಣಿದು, ಇಂಜನಿಯರಿಂಗ್ ಕಾಲೇಜುಗಳು ನಾಯಿ ಕೊಡೆಗಳಂತೆ ತಲೆ ಎತ್ತಲು ಅವಕಾಶ ಮಾಡಿಕೊಟ್ಟಿರುವುದು ಸ್ಪಷ್ಟವಾದಂತಾಗಿದೆ. ಇದರ ಪರಿಣಾಮವಾಗಿ ಇಂದು ವೃತ್ತಿ ಶಿಕ್ಷಣವು ಬಡ ವಿದ್ಯಾರ್ಥಿಗಳ ಕೈಗೆಟುಕದಂತಾಗಿದೆ. ಹಣ ಮಾಡುವ ಉದ್ದೇಶದಿಂದಲೇ ವೃತ್ತಿ ಶಿಕಷಣ ಸಂಸ್ಥೆಗಳನ್ನು ಆರಂಭಿಸಿರುವ ಖಾಸಗೀ ಆಡಳಿತ ಮಂಡಳಿಗಳು ಶಿಕ್ಷಣ ರಂಗವನ್ನು ವ್ಯಾಪಾರೋದ್ಯಮವನ್ನಾಗಿಸಿವೆ.

ಎಸ್.ಎಫ್.ಐ. ನೇತೃತ್ವದಲ್ಲಿ ವಿದ್ಯಾರ್ಥಿಗಳ ಸಂಘರ್ಷ

ಈ ವಿಷಯವಾಗಿ ಮಧ್ಯ ಪ್ರವೇಶಿಸಿದ ಎಸ್.ಎಫ್.ಐ. ವಿದ್ಯಾರ್ಥಿಗಳನ್ನು ಸಂಘಟಿಸಿ ಹೋರಾಟ ಪ್ರಾರಂಭಿಸಿತು. ಮೊದಲ ಕ್ರಮವಾಗಿ ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಿ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ಪ್ರತಿಭಟನೆ ಆರಂಭಿಸಿದಾಗ ವಿಚಲಿತರಾದ ಆಡಳಿತ ಮಂಡಳಿಯು ಮೂಲಭೂತ ಸಮಸ್ಯೆ ಬಗೆಹರಿಸದೆ, ಕೆಲವು ಪುಸ್ತಕ, ಪ್ರಯೋಗ ಸಾಮಗ್ರಿಗಳನ್ನು ತರಿಸಿ ವಿದ್ಯಾರ್ಥಿಗಳನ್ನು ಸಮಾಧಾನ ಮಾಡುವ ಪ್ರಯತ್ನ ನಡೆಸಿತು. ಆದರೆ ವಿದ್ಯಾರ್ಥಿಗಳು ಇದಕ್ಕೆ ಒಪ್ಪಲಿಲ್ಲ. ಆಶ್ಚರ್ಯವೆಂದರೆ ಈ ಸಂದರ್ಭದಲ್ಲಿ ಕಾಲೇಜಿಗೆ ಬಂದ ಬಸ್ಸು ಈಗಾಗಲೇ ಇಲ್ಲದಂತಾಗಿದೆ. ಇಂತಹ ಎಲ್ಲಾ ನಾಟಕಗಳನ್ನು ವಿದ್ಯಾರ್ಥಿಗಳು ಒಪ್ಪಲು ಸಿದ್ಧರಿರಲಿಲ್ಲ. ಇದರಿಂದ ಹತಾಷೆಗೊಂಡ ಆಡಳಿತ ಮಂಡಳಿಯು ಪತ್ರಿಕಾ ಪ್ರಚಾರ ನೀಡಿ ವಿದ್ಯಾರ್ಥಿಗಳ ಹೋರಾಟವನ್ನು ಹತ್ತಿಕ್ಕುವ ಪಿತೂರಿ ನಡೆಸಿತು. ಕಾಲೇಜಿನಲ್ಲಿ ಯಾವುದೇ ಮೂಲಭೂತ ಸಮಸ್ಯೆ ಇಲ್ಲ. ಆಡಳಿತ ಮಂಡಳಿಯ ಸೇವೆಯನ್ನು ಸಹಿಸದ ಕೆಲವು ಹಿತಾಸಕ್ತಿಗಳು ಈ ರೀತಿ ವಿದ್ಯಾರ್ಥಿಗಳನ್ನು ದಿಕ್ಕು ತಪ್ಪಿಸುತ್ತಿದ್ದಾರೆ, ಎಂದು ಪತ್ರಿಕಾ ಹೇಳಿಕೆ ನೀಡಿದರು, ಸಾಲದೆಂಬಂತೆ ವಿದ್ಯಾರ್ಥಿಗಳ ಮನೆಗೆ ಫೋನ್ ಮಾಡಿ, ಪೋಷಕರೊಂದಿಗೆ ದೂರಿ, ವಿದ್ಯಾರ್ಥಿಗಳನ್ನು ಹೆದರಿಸುವ ತಂತ್ರ ನಡೆಸಲಾಯಿತು. ಆದರೆ ವಿದ್ಯಾರ್ಥಿಗಳು ಇದಾವುದಕ್ಕೂ ಜಗ್ಗದೆ. ಸುಮಾರು 15 ದಿನಗಳಿಂದ ತರಗತಿ ಬಹಿಷ್ಕರಿಸಿ, 'ವಿದ್ಯಾರ್ಥಿಗಳನ್ನು ತಕ್ಷಣ ಬೇರೆ ಕಾಲೇಜಿಗೆ ವರ್ಗಾಯಿಸಿ, ಕಾಲೇಜನ್ನು ರದ್ದುಗೊಳಿಸಬೇಕೆಂದು' ಒತ್ತಾಯಿಸಿ ಹೋರಾಟ ನಡೆಸುತ್ತಿದಾರೆ. ಡಿ.ಟಿ.ಇ. ಕಛೇರಿ ಎದುರು ಹೋರಾಟ ನಡೆಸಿ. ಅಂದು ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಾದ ಶೋಭಾ ನಂಬಿಷನ್‌ರವರನ್ನು ಭೇಟಿ ಮಾಡಿ ಸಮಸ್ಯೆ ವಿವರಿಸಲಾಯಿತು. ಹಾಗೆಯೇ ಎ.ಐ.ಸಿ.ಟಿ.ಇ. ಕಛೇರಿಗೆ ಸುಮಾರು 3 ತಾಸುಗಳ ಕಾಲ ಮುತ್ತಿಗೆ ಹಾಕಿದಾಗ ಪೋಲೀಸರ ಸಹಾಯದೊಂದಿಗೆ ಎ.ಐ.ಸಿ.ಟಿ.ಇ.ನ ಪ್ರಾದೇಶಿಕ ನಿರ್ದೇಶಕರು ನಮ್ಮೊಂದಿಗೆ ಮಾತನಾಡಿ ಸಮಸ್ಯೆ ಬಗೆಹರಿಸುವುದಾಗಿ ಹೇಳಿದರು. ನಂತರ ದಿ. 04.11.04 ರಂದು ಉನ್ನತ ಶಿಕ್ಷಣ ಸಚಿವರ ಮನೆ ಮುಂದೆ ಪ್ರತಿಭಟನೆ ನಡೆಸಿದಾಗ ತಕ್ಷಣ ಆಗಮಿಸಿದ ಶಿಕ್ಷಣ ಸಚಿವರು ನಮ್ಮೊಂದಿಗೆ ಮಾತನಾಡಿ ಪರಿಹಾರ ಒದಗಿಸುವುದಾಗಿ ಹೇಳಿದರು. ಈ ಎಲ್ಲಾ ಹೋರಾಟಗಳ ಪರಿಣಾಮವಾಗಿ ಎ.ಐ.ಸಿ.ಟಿ.ನ ಅಖಿಲ ಭಾರತ ಮಟ್ಟದ ಅಧಿಕಾರಿಗಳು ವಿ.ಟಿ.ಯು, ಡಿ.ಟಿ.ಇ. ಹಾಗು ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಕಾಲೇಜಿಗೆ ಭೇಟಿ ನೀಟಿ ಪರಿಶೀಲಿಸಿದ್ದಾರೆ. ಅವರೇ ಹೇಳುವ ಹಾಗೆ ಈ ಕಾಲೇಜಿನಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳಿಲ್ಲ. ಆದ್ದರಿಂದ ಇದು ಕಾಲೇಜು ಎಂದು ಕರೆಸಿಕೊಳ್ಳಲು ನಾಲಾಯಕ್ ಎಂದು ಹೇಳಿದ್ದಾರೆ.

ಈ ಹೋರಾಟದ ಪರಿಣಾಮವಾಗಿ ಇದೇ ಆಡಳಿತ ಮಂಡಳಿಗೆ ಸೇರಿದ ನೆಲಮಂಗಲದ ಇನ್ನೊಂದು ಕಾಲೇಜಿನಲ್ಲಿಯೂ ಸಹ ವಿದ್ಯಾರ್ಥಿಗಳು ಸ್ವ ಪ್ರೇರಿತರಾಗಿ, ಮೂಲಭೂತ ಸೌಕರ್ಯಕ್ಕಾಗಿ ಪ್ರತಿಭಟನೆ ನಡೆಸಿದ್ದಾರೆ. ಅಷ್ಟೇ ಅಲ್ಲದೆ ಈ ಹೋರಾಟವು ಬೇರೆ ಎಲ್ಲಾ ಖಾಸಗೀ ಆಡಳಿತ ಮಂಡಳಿಗೆ ಎಚ್ಚರಿಕೆಯ ಘಂಟೆಯೂ ಆಗಿದೆ. ಅಲ್ಲದೆ ಸರ್ಕಾರ, ವಿ.ಟಿ.ಯು, ಎ.ಐ.ಸಿ.ಟಿ.ಯು, ಇವುಗಳೆಲ್ಲವೂ ಸೇರಿ ಖಾಸಗಿ ಕಾಲೇಜುಗಳ ಬಗ್ಗೆ ಕಟ್ಟು ನಿಟ್ಟಿನ ಕ್ರಮ ಅನುಸರಿಸುತ್ತಿಲ್ಲ. ಇಂದು ಖಾಸಗೀ ಆಡಳಿತ ಮಂಡಳಿಗಳೂ ಪ್ರಬಲವಾಗಿ ಬೆಳೆದಿದ್ದು, ಇಡೀ ಸರ್ಕಾರವನ್ನೇ ಅಲುಗಾಡಿಸುವ ಮಟ್ಟದಲ್ಲಿವೆ. ಹೀಗಾಗಿ ಸರ್ಕಾರ ಕೂಡ ಖಾಸಗೀ ಆಡಳಿತ ಮಂಡಳಿಗಳೊಂದಿಗೆ ಶಾಮೀಲಾಗಿದೆ. ಇದನ್ನು ತೀವ್ರವಾಗಿ ಖಂಡಿಸಿರುವ ಎಸ್.ಎಫ್.ಐ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ವರೆಗೆ ಹೋರಾಟ ರೂಪಿಸಿದೆ.

● ಯು.ಎಸ್. ಪ್ರಸಾದ್

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ನವೆಂಬರ್ 17,2004**
  ಮಹಿಳೆಯರಿಗೆ ರಾತ್ರಿ ಪಾಳಿ ಕೆಲಸ ನಿಷೇಧ, ಸಮಾನ ಕೂಲಿ - ಸಮಾನ ಅವಕಾಶಕ್ಕೆ ಒತ್ತಾಯಿಸಿ ದುಡಿಯುವ ಮಹಿಳೆಯರ ರ್‍ಯಾಲಿ - ನವದೆಹಲಿ
- **ನವೆಂಬರ್ 17-19, 2004**
  ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ 3ನೇ ರಾಜ್ಯ ಸಮ್ಮೇಳನ. ಉದ್ಘಾಟನೆ : ಕಾಂ. ತಪನ್ ಚಕ್ರವರ್ತಿ, ಆರೋಗ್ಯ ಮತ್ತು ಕೃಷಿ ಸಚಿವರು, ತ್ರಿಪುರಾ ಸರ್ಕಾರ.
  ಬಹಿರಂಗ ಸಭೆ 17 ರಂದು : ಸಿಲ್ವರ್ ಜ್ಯೂಬಿಲಿ ಪಾರ್ಕ್, ಮಂಡ್ಯ
- **ನವೆಂಬರ್ 18-21, 2004**
  ಎಐಡಿಡಬ್ಲ್ಯೂ ಅಖಿಲ ಭಾರತ ಸಮ್ಮೇಳನ, ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್ ರವರಿಂದ ಉದ್ಘಾಟನೆ, ಒರಿಸ್ಸಾದ ಭುವನೇಶ್ವರದಲ್ಲಿ
- **ನವೆಂಬರ್ 20, 2004**
  ಭಾರತ ಪರ ಜನವೇದಿಕೆ 'ಉದ್ಯೋಗ ಖಾತರಿ ಯೋಜನೆ' ಕುರಿತು ಸಮಾವೇಶ. ಮಧ್ಯಾಹ್ನ 2.30 ಕ್ಕೆ ಸೆನೆಟ್ ಸಭಾಂಗಣ, ಸೆಂಟ್ರಲ್ ಕಾಲೇಜು, ಬೆಂಗಳೂರು.
- **ನವೆಂಬರ್ 21-28, 2004**
  ಎಕೆಜಿ ಮತ್ತು ಬಿಟಿಆರ್ ಜನ್ಮ ಶತಾಬ್ದಿ ಆಚರಣೆ ಅಂಗವಾಗಿ ಸೈದ್ಧಾಂತಿಕ ಶಿಕ್ಷಣ ಸಪ್ತಾಹ ಸಿಪಿಐ(ಎಂ) ವತಿಯಿಂದ
- **ಡಿಸೆಂಬರ್ 2, 2004**
  ಸಿಇಟಿ ಕೇಂದ್ರೀಯ ಶಾಸನಕ್ಕೆ ಒತ್ತಾಯಿಸಿ ಎಸ್‌ಎಫ್‌ಐನಿಂದ ಸಂಸತ್ ಚಲೋ

ಬಿಜೆಪಿ ಅಧ್ಯಕ್ಷತೆಗೆ ಪೈಪೋಟಿ ?

ಸತತ 'ಭೂಕುಸಿತ'ವನ್ನು ಅನುಭವಿಸುತ್ತಿರುವ ಬಿಜೆಪಿ ಪಕ್ಷದ ಆಂತರಿಕ ಕಚ್ಚಾಟ ಬೀದಿ ರಂಪಾಟವಾಗಿದೆ. ಕಳೆದ ಚುನಾವಣೆಯ ಸೋಲಿನ ಬಗ್ಗೆ ಸತ್ಯನಿಷ್ಠ ವಿಮರ್ಶೆ ಮಾಡಿಕೊಂಡು, ಸರಿಹಾದಿ ಹಿಡಿಯಲು ಸಿದ್ಧವಿಲ್ಲದೆ ನೆಪಗಳನ್ನು ಹೇಳುತ್ತಾ, ಅವರಿವರ ಮೇಲೆ ಗೂಬೆ ಕೂರಿಸಿ, ಹಿಂದುತ್ವದ ಫ್ಯಾಸಿಸ್ಟ್ ರೂಪಕ್ಕೆ ಒತ್ತು ನೀಡಿದ್ದು ನೋಡಿಯಾಗಿದೆ. ಬಿಜೆಪಿಯ ಅಧ್ಯಕ್ಷರ ಬದಲಾವಣೆಯ ವರಸೆ ವಾಸನೆ ಹಿಡಿದ ಬಳಿಕ ಉಮಾಭಾರತಿ, ಸುಷ್ಮಸ್ವರಾಜ್ ರ ನಡುವೆ ಸ್ಪರ್ಧೆ, ಉಮಾಭಾರತಿ ತುರಂಗ ವಾಸ - ತಿರಂಗಾ ಯಾತ್ರೆಗಳು ಮುಗಿದವು. ರಾಜಕೀಯ ಸನ್ಯಾಸ ಪ್ರಕಟಿಸಿದ್ದು ಆಯ್ತು. ಮತ್ತೆ ಪುಸಲಾಯಿಸಿ ಅಡ್ವಾಣಿ ಅಧ್ಯಕ್ಷರಾದ ಬಳಿಕ ಉಮಾಭಾರತಿಯನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ, ಬಳಿಕ ಈಗ ಆ ಸ್ಥಾನದಿಂದಲೂ ವಜಾಗೊಂಡು, ಪ್ರಾಥಮಿಕ ಸದಸ್ಯತ್ವದಿಂದಲೂ ಅಮಾನತ್ತು ಮಾಡಲಾಗಿದೆ. ಅದು ಇನ್ನೂ ಆರದ ಬಿಸಿ.

ಅಡ್ವಾಣಿಯನ್ನು ಮತ್ತೆ ಅಧ್ಯಕ್ಷರನ್ನಾಗಿ ವಿಧಿಯಿಲ್ಲದೇ ಕಂಡುಕೊಂಡ ಬಿಜೆಪಿ ಈ ಲೋಹ ಪುರುಷನ ಕೈ ಬಲಪಡಿಸಲು ಹೊಸತಂಡ ರಚನೆಯ ಯತ್ನಕ್ಕೂ ಇಳಿದಿದೆ. ಕರ್ನಾಟಕದ ಮುಂದಿನ ಮುಖ್ಯಮಂತ್ರಿ ತಾನೇ ಎಂದು ಕನಸು ಕಂಡು ಕಲಸುಮೇಲೋಗರದ ರಾಜಕೀಯಕ್ಕೆ ಇಳಿದಿದ್ದ ಅನಂತಕುಮಾರ್‌ಗೆ ಅದು ಅಸಾಧ್ಯವೆಂದಾದಾಗ ವಿಧಾನಸೌಧದೊಳಗೆ ಕೂಗುವ ಕೆಲಸವನ್ನು ಯಡಿಯೂರಪ್ಪನವರಿಗೆ ಒಪ್ಪಿಸಿ, ಮತ್ತೇ ಮೆತ್ತಗೆ ದೆಹಲಿ ಹಾರಾಟದ ರಾಜಕೀಯಕ್ಕೆ ಮರಳಿದ್ದಾರೆ. ಅನಂತಕುಮಾರ್ ಪ್ರಧಾನ ಕಾರ್ಯದರ್ಶಿಯಲ್ಲೊಬ್ಬರಾದ್ದರಿಂದ ರಾಜ್ಯದ ಬಿಜೆಪಿಗೆ ಹೊಸ ಅಧ್ಯಕ್ಷನನ್ನು ಕಂಡುಕೊಳ್ಳಬೇಕಿದೆ. ಅದಕ್ಕಾಗಿ ದೆಹಲಿಯಲ್ಲಿ ಸರ್ಕಸ್ ಆರಂಭವಾಗರುವುದು ಬಿಜೆಪಿ ಪಾಳೆಯದಲ್ಲಿ ಈಗಿನ ಸಾರ್ವಜನಿಕ ಚಟುವಟಿಕೆ.

ಕರ್ನಾಟಕವನ್ನು ನೋಡಿಕೊಳ್ಳುತ್ತಿರುವ ದೆಹಲಿ ನಾಯಕ ವೇದಪ್ರಕಾಶ್ ಗೋಯಲ್ ಬಿಜೆಪಿ ಶಾಸಕರನ್ನು ಮಾತನಾಡಿಸುವ ಶಾಸ್ತ್ರ ಮುಗಿಸಿದ್ದಾರೆ. ಉಮಾಭಾರತಿಯ ಪ್ರಹಸನ ನಿಲ್ಲದಿದ್ದಲ್ಲಿ ಅಧ್ಯಕ್ಷನನ್ನು 'ನೇಮಿಸ'ಲಾಗುತ್ತಿತ್ತು. (ಗರ್ಭಗುಡಿ ಸಂಸ್ಕೃತಿಯಲ್ಲಿ ಆರಿಸುವುದಕ್ಕೆಲ್ಲಿ ಸ್ಥಾನ) ಈ ಅಧ್ಯಕ್ಷ ಸ್ಥಾನಕ್ಕೆ ಸಂಸದ ಸದಾನಂದಗೌಡ, ಎಸ್. ಬಂಗಾರಪ್ಪ, ಜಗದೀಶ್ ಶೆಟ್ಟರ್ ಹೆಸರುಗಳಿದ್ದು ಬಂಗಾರಪ್ಪ, ಶೆಟ್ಟರ್ ತೀವ್ರ ಪ್ರಯತ್ನದಲ್ಲಿದ್ದಾರೆಂದು ಸುದ್ದಿ. ಈ ಮೂವರು ತೀವ್ರ ಲಾಬಿ ನಡೆಸಲು ದೆಹಲಿಯಲ್ಲಿ ಠಿಕಾಣಿ ಹೂಡಿದ್ದಾರೆ. ಬಂಗಾರಪ್ಪನವರನ್ನು ಅಧ್ಯಕ್ಷರಾಗಿ ನೇಮಿಸಲು ಶಿವಮೊಗ್ಗೆಯಲ್ಲಿ ಉರುಳುಸೇವೆ ಮಾಡಿದ್ದಾರೆ. ಉರುಳುಸೇವೆ ಮಾಡಿದವರು ಬಿಜೆಪಿಯವರಲ್ಲ ಎಂದು ಡಿ.ಹೆಚ್.ಶಂಕರಮೂರ್ತಿ ಸ್ಪಷ್ಟನೆ ನೀಡಿರುವುದು ಬಂಗಾರಪ್ಪ ಬಿಜೆಪಿ ಅಲ್ಲ ಎಂದು ಹೇಳಿದಂತಿದೆ. ರಾಜ್ಯದ ಬಿಜೆಪಿಯೊಳಗಿನ ಒಳಜಗಳದ ಹೊರ ರೂಪ ಮಾತ್ರ.

ಬಿಜೆಪಿ ಅಧ್ಯಕ್ಷತೆಗೆ ಇಂತಹ ವರಸೆಗಳೇನೇ ನಡೆಯುತ್ತಿದ್ದರೂ ಆದರೆ ಇಲ್ಲಿ ಆರ್.ಎಸ್.ಎಸ್.ನ ನಿರ್ದೇಶನವೇ ಅಂತಿಮ. ಹೀಗಾಗಿ ಬಜರಂಗದಳದ ಕುಖ್ಯಾತರನ್ನು ನಾಚಿಸುವಂತಹ ಸಂಘ ಪರಿವಾರದ ಕಟ್ಟಾಳು ಸದಾನಂದಗೌಡರನ್ನೇ ಬಿಜೆಪಿ ಅಧ್ಯಕ್ಷರನ್ನಾಗಿಸಿದರೆ ಆಶ್ಚರ್ಯವಿಲ್ಲ. ಬಿಜೆಪಿಗೆ ಬೇಕಿರುವುದು ಹೇಳಿಕೊಳ್ಳುವಂತೆ ರಾಜ್ಯದ ಜನರ ಕಾಳಜಿಯಲ್ಲ. ಅತ್ಯುಗ್ರ ಹಿಂದುತ್ವದ ಫ್ಯಾಸಿಸ್ಟ್ ಅಜೆಂಡಾದ ಮುಂದೊತ್ತುವಿಕೆ, ಅದಕ್ಕೆ ಬೇಕಿರುವುದು ಸೌಹಾರ್ದಕರ್ನಾಟಕವಲ್ಲ, ... ಕಲಹ, ಕದನದ ಕೋಮುದಳ್ಳುರಿಯಲ್ಲಿ ಬೇಯುವ ಕರ್ನಾಟಕ!

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ವಿಭಜಕತೆಯ ಕೂಗು

ಕೊಡಗಿನ ನಾಚಪ್ಪನವರು ಮತ್ತೊಮ್ಮೆ ದೆಹಲಿಯಲ್ಲಿ ಮತಪ್ರದರ್ಶನ ನಡೆಸಿದ್ದಾರೆ. ಕೊಡಗು ಪ್ರತ್ಯೇಕ ರಾಜ್ಯಕ್ಕೆ ಆಗ್ರಹಿಸಿ ದೆಹಲಿ ಚಲೋ ನಡೆಸಿ 13 ವರ್ಷಗಳಾದ ನೆನಪಿನಲ್ಲಿ ಈ ಪ್ರದರ್ಶನ.


ಕೊಡಗು ಪ್ರತ್ಯೇಕ ರಾಷ್ಟ್ರದ ಬೇಡಿಕೆಯಿಂದ ನಾಚಪ್ಪನವರ 'ಪ್ರತ್ಯೇಕ ರಾಜ್ಯ' ತಲುಪಿದ್ದಾರೆ. ಕೊಡಗು ಲಿಬರೇಷನ್ ಫ್ರಂಟ್ - ನಿಂದ ಕೊಡವ ರಾಷ್ಟ್ರೀಯ ಮಂಡಳಿಯವರೆಗೂ ಬದಲಾಗಿದ್ದಾರೆ. ಅಲ್ಲಿನ ಜನಸಮುದಾಯವೇ ಪ್ರತ್ಯೇಕತೆಯ ಇಂತಹ ಬೇಡಿಕೆಯನ್ನು ಬೆಂಬಲಿಸದೇ, ತಿರಸ್ಕರಿಸುತ್ತಿರುವಾಗ ಪ್ರತ್ಯೇಕತೆಯ ಅಮಲಿನಿಂದ ಹೊರಬರಲು ಇಷ್ಟಪಡುತ್ತಿಲ್ಲ. ಅವರು ಸದ್ಯಕ್ಕೆ ಪ್ರತ್ಯೇಕತೆ ಚಳುವಳಿ ಕೂಗು ಕ್ಷೀಣವಾಗಿದ್ದರೂ, ಅದು ಸುರಸುರನೇ ಉರಿಯುವ ಅಪಾಯವಂತೂ ಇದ್ದೇ ಇದೆ. ಕೊಡಗು ನ್ಯಾಷನಲ್ ಕೌನ್ಸಿಲ್‌ನ 'ಪರಮೋಚ್ಚ' ನಾಯಕ(!) ನಾಚಪ್ಪನವರು ಸಡಿಲವಾಗಿ ನಿಂತರೂ, ರಾಜ್ಯದ ಉತ್ತರ ಕರ್ನಾಟಕ-ಹೈದ್ರಾಬಾದ್ ಕರ್ನಾಟಕದ ಕೆಲವರಿಗೆ ಫ್ಯಾಶನ್‌ನಂತಾಗಿರುವ ಪ್ರತ್ಯೇಕರಾಜ್ಯದ ಬೇಡಿಕೆಯು ಒಟ್ಟಿಗೆ ಹಾನಿ ಮಾಡುವ ವಿಭಜಕ



ಶಕ್ತಿ ಅಂತರ್ಗತವಾಗಿದೆ. ಇದೇ ಸಂದರ್ಭದಲ್ಲೇ ಕೊಡಗು ಮತ್ತಿತರೆಡೆಯಲ್ಲಿ ಎತ್ತಲಾದ ಕೆಲವು ಪ್ರಜಾಸತ್ತಾತ್ಮಕ ಬೇಡಿಕೆ-ಆಶಯಗಳಿಗೆ ಸ್ಪಂದಿಸುವುದು ಸರ್ಕಾರದ ಹೊಣೆಗಾರಿಕೆಯಾಗಿದೆ.

ಕಸಾಪ ಅಧ್ಯಕ್ಷರಾಗಿ 'ಚಂಪಾ' - ಹೊಸ ನಿರೀಕ್ಷೆಗಳು

ಹಿರಿಯ ಬಂಡಾಯ ಸಾಹಿತಿ ಚಂದ್ರಶೇಖರ ಪಾಟೀಲರು ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇದು ನಿರೀಕ್ಷಿತ ಗೆಲವು. ನಿಜ, ಆದರೆ ಅವರು ಪಡೆದ ಮತಗಳು ಅನಿರೀಕ್ಷಿತ. ಚಲಾವಣೆಗೊಂಡ 24,552 ಮತಗಳಲ್ಲಿ ಚಂಪಾರವರಿಗೆ ದೊರೆತದ್ದು 16,946. ಅವರ ಸಮೀಪದ ಪ್ರತಿಸ್ಪರ್ಧಿ ಡಾ. ನಲ್ಲೂರು ಪ್ರಸಾದ್ ಗೆ 4,646, ಅಂತರ 12,304. ಹೀಗಾಗಿ ಇದು ಪ್ರಚಂಡ ವಿಜಯ.



ಈ ಫಲಿತಾಂಶವೇ ಹೇಳುವಂತೆ ಮತ ನೀಡಿದವರು, ಮತ್ತು ಹೊರಗೆ ಬೆಂಬಲಿಸಿದವರು, ಒಟ್ಟಾರೆ ಎಲ್ಲರೂ 'ಚಂಪಾ'ರವರ ಮೇಲೆ ಅಭಿಮಾನ ತೋರಿದ್ದಾರೆ. ಅದಕ್ಕಿಂತಲೂ ಬಹಳಷ್ಟು ನಿರೀಕ್ಷಿಸಿದ್ದಾರೆ. ಈ ಒಂದಿನ ಸ್ಥಿತಿ-ವಿದ್ಯಮಾನಗಳಿಗೆ ಪ್ರತಿಕ್ರಿಯೆ ಎಂಬಂತೆ ಆದ್ದರಿಂದ ಭಿನ್ನ ಹಾದಿಯಲ್ಲಿ ಸಾಹಿತ್ಯ ಪರಿಷತ್ ನಡೆಯಬೇಕೆಂದು ಇಂಗಿತ ವ್ಯಕ್ತಪಡಿಸಿದ್ದಾರೆ. ಈ ನಿರೀಕ್ಷೆಗಳನ್ನು ಹುಸಿ ಮಾಡದ ವಿಶ್ವಾಸ ಚಂಪಾರ ಮೇಲೆ. ಸಾಹಿತ್ಯಕ್ಕೆ - ಸಾಹಿತ್ಯ ಪರಿಷತ್‌ಗೆ ಹೊಸ ಕಾಯಕಲ್ಪ ನೀಡಲು ಚಂಪಾ ಹಾಗೂ ತಂಡ ಕೆಲಸ ಮಾಡಲಿ ಎಂದು ಶುಭ ಹಾರೈಕೆ. ಪರಿಷತ್ ಜನರ ಹತ್ತಿರ ಹತ್ತಿರವಾಗಲಿ ಎಂಬ ಆಶಯ.

ಸಿಪಿಐ(ಎಂ)ನಿಂದ ಚಂಪಾಗೆ ಅಭಿನಂದನೆ

ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿ ಬಂಡಾಯ ಸಾಹಿತಿ ಪ್ರೊ. ಚಂದ್ರಶೇಖರ್ ಪಾಟೀಲರು ಆಯ್ಕೆಯಾಗಿರುವುದನ್ನು ಸ್ವಾಗತಿಸಿರುವ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು ಅವರನ್ನು ಹಾಗೂ ಮತದಾರರನ್ನು ಅಭಿನಂದಿಸಿದೆ.

ಇಂದಿನ ಸಂದರ್ಭದಲ್ಲಿ 'ಚಂಪಾ'ರವರ ಆಯ್ಕೆ ಮಹತ್ವದ್ದು. ಜಾಗತೀಕರಣ ಮತ್ತು ಕೋಮುವಾದದ ಧಾಳಿಯಿಂದಾಗಿ ಸಾಂಸ್ಕೃತಿಕ ವೈವಿಧ್ಯತೆ, ಭಾಷಾ ಉಳಿವಿಗೆ ಕುತ್ತು ಬಂದಿರುವಾಗ ಈ ಅಪಾಯಗಳ ಬಗ್ಗೆ ಅತ್ಯಂತ ಸ್ಪಷ್ಟ ಅಭಿಪ್ರಾಯವಿರುವ ಅವರ ಆಯ್ಕೆ ಸಕಾರಾತ್ಮಕ ಬೆಳವಣಿಗೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಬೆಳೆಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ್ನು ರೂಪಿಸುತ್ತಾರೆ ಎಂಬ ಆಶಯವನ್ನು ಸಿಪಿಐ(ಎಂ) ವ್ಯಕ್ತಪಡಿಸಿದೆ.

ಕನ್ನಡ ಭಾಷೆಯ ಉಳಿವು, ಬೆಳವಣಿಗೆಯಾಗಬೇಕಾದಲ್ಲಿ ಕನ್ನಡ ಕಲಿಕೆ ಹೆಚ್ಚಾಗಬೇಕು. ಹೀಗಾಗಲು ಕನ್ನಡ ಭಾಷಾ ಮಾಧ್ಯಮದಲ್ಲಿ ಕಲಿತವರಿಗೆ ಉದ್ಯೋಗ ಸಿಗುವಂತಾಗಬೇಕು. ಅದಕ್ಕಾಗಿ ಕರ್ನಾಟಕದ ಸಮಗ್ರ ಅಭಿವೃದ್ಧಿಯಾಗಬೇಕು. ಇಂತಹ ಅಭಿವೃದ್ಧಿಯ ಸಾಧನೆಯಲ್ಲಿ ರಾಜ್ಯಗಳಿಗೆ ಕೇಂದ್ರ ಸರ್ಕಾರದಿಂದ ಹೆಚ್ಚಿನ ಸಂಪನ್ಮೂಲ ಸಿಗಲೇಬೇಕಿರುವುದು ಅವಶ್ಯಕ ಅಂಶ. ಹೀಗಾಗಿ ರಾಜ್ಯಗಳಿಗೆ ಹೆಚ್ಚಿನ ಸಂಪನ್ಮೂಲ - ಸ್ವಾಯತ್ತತೆ ಪಡೆಯುವುದರೊಂದಿಗೆ, ದೇಶದ-ರಾಜ್ಯದ ಒಟ್ಟು ಅಭಿವೃದ್ಧಿಯಲ್ಲಿ ಭಾಷೆ-ಬದುಕಿನ ಬೆಳವಣಿಗೆಯೂ ಹೆಣೆದುಕೊಂಡಿದೆ ಎಂಬುದನ್ನು ಗಮನಿಸಿ ಅದಕ್ಕಾಗಿ ಶ್ರಮಿಸುವುದು ಅತ್ಯಗತ್ಯವೆಂದು ಸಿಪಿಐ(ಎಂ) ನಿರೀಕ್ಷಿಸಿದೆ.

ಈ ನಿಟ್ಟಿನಲ್ಲಿ ಭಾಷೆ -ಸಾಹಿತ್ಯ- ಸಾಂಸ್ಕೃತಿಕ ಬೆಳವಣಿಗೆಗಾಗಿ ಪ್ರಜಾಸತ್ತಾತ್ಮಕ, ಪ್ರಗತಿಪರ, ಸಮಗ್ರತೆಯ ಒಂದು ದೃಷ್ಟಿಕೋನದಿಂದ ಕನ್ನಡ ಸಾಹಿತ್ಯ ಪರಿಷತ್ ಪ್ರಜಾಪ್ರಭುತ್ವೀಕರಣಗೊಂಡು ಮುನ್ನಡೆಯುವಂತಾಗಲೀ ಎಂದು ಸಿಪಿಐ(ಎಂ) ಆಶಿಸಿದೆ ಎಂದು ಕಾರ್ಯದರ್ಶಿ ಜಿ.ಎನ್.ನಾಗರಾಜ್ ತಿಳಿಸಿದ್ದಾರೆ.

ಜನವಂಚಕರಿಗೆ ಕಡಿವಾಣ

ಇಬ್ಬರು ಸುಳ್ಳರು, ಜನವಂಚಕರು ಆದರೆ ಹೊರಗೆ ಭಾರಿ ವಿರೋಧಿಗಳು ಎಂಬಂತೆ ಕಾಣಿಸಿಕೊಳ್ಳಬಯಸುವವರು ಒಂದೇ ಜೈಲಿನಲ್ಲಿ ಅದೂ ಅಕ್ಕಪಕ್ಕದಲ್ಲೇ ಇರುವ ಸಂಗತಿ ಒಂದು ಶುಭಸುದ್ದಿಯೇ ಹೌದು, ಒಬ್ಬ ಮುತಾಲಿಕ, ಇನ್ನೊಬ್ಬ ಅಸ್ಲಂ ಬುರುಡೆಬಾಬಾ.

ಸದಾ ಅಲ್ಪಸಂಖ್ಯಾತರ ಮೇಲೆ, ಧರ್ಮನಿರಪೇಕ್ಷತೆ, ಪ್ರಜಾಪ್ರಭುತ್ವದ ವಿರುದ್ಧ ವಿಷಕಾರುತ್ತ, ಕೊಳ್ಳಿ ಹಿಡಿದು ನಾಡಿಗೆ ಕೋಮುದಳ್ಳುರಿ ಹಬ್ಬಿಸುತ್ತಾ ತಿರುಗುವ ಬಜರಂಗದಳದ ನಾಯಕ ಪ್ರಮೋದ್ ಮುತಾಲಿಕನನ್ನು ಜೈಲಿಗಟ್ಟಲಾಗಿದೆ. ಕಳೆದ ಎಸ್.ಎಂ.ಕೃಷ್ಣರವರ ಅವಧಿಯಲ್ಲಿ ತಾನೇ ಸಾರ್ವಭೌಮನೆಂಬಂತೆ ಯಾವುದೇ ಕಾನೂನು-ಕಟ್ಟಳೆಗಳ ಬಗ್ಗೆ ಕವಡೆ ಕಿಮ್ಮತ್ತಿಲ್ಲದೇ ಧಿಕ್ಕರಿಸುತ್ತಾ ಓಡಾಡುತ್ತಿದ್ದ ಮುತಾಲಿಕನನ್ನು ಸ್ವಲ್ಪವಾದರೂ ಹದ್ದುಬಸ್ತಿನಲ್ಲಿಡಲು ಈ ಸರ್ಕಾರ ಮನಸ್ಸು ಮಾಡಿದಂತಿದೆ.



ಕೆಲವೇ ವಾರಗಳ ಹಿಂದೆ ಶಾಸಕರೆಂಬುದನ್ನು ಮರೆತ ಬಜರಂಗದಳದ ವೈರಸ್‌ಗಳಾಗಿರುವ ಸಿಟಿ ರವಿ, ಸುನೀಲ್ ಕುಮಾರರ ಮೇಲೆ ಮೊಕದ್ದಮೆ ಹೂಡಿ ಜೈಲಿಗೆ ತಳ್ಳಲಾಗಿತ್ತು. ರಾಜ್ಯವೇ ಉರಿಯುವುದು ಎಂದು ಹೇಳಿಕೊಂಡರೂ ಅಂತಹದ್ದೇನೂ ಆಗಲಿಲ್ಲ. ಜಾಮೀನು ನೀಡಿ ಹೊರಬರಬೇಕಾಯ್ತು. ಹಾಗೆ ಅಂಜುದೀವ ವಿವಾದವೆಬ್ಬಿಸಿ ಬೆಂಕಿ ಕಾಯಿಸಲು ಹೋಗಿ ವಿಷ ಉಗುಳಿದ್ದ ಮುತಾಲಿಕನನ್ನು ಕಾರವಾರದಲ್ಲಿ ಮೊಕದ್ದಮೆ ಹೂಡಿ ಜೈಲಿಗೆ ದಬ್ಬಲಾಯಿತು. ಹೊರಬರಲು ಜಾಮೀನಿಗೆ ಮೊರೆಹೋಗಬೇಕಾಯ್ತು - ಬಳಿಕ ವಿಜಾಪುರದ ಆಡಳಿತವೂ ಬಿಗಿ ಕ್ರಮ ವಹಿಸಿ ಮತ್ತೆ ಮುತಾಲಿಕರನ್ನು ಜೈಲಿಗಟ್ಟಿದೆ. ಈಗಲೂ ರಾಜ್ಯ ಉರಿಯಲಿಲ್ಲ. ಜಾಮೀನು ಅಂಗೀಕಾರವಾಗಲಿಲ್ಲ.

ಇದಕ್ಕೆ ಕಾಯುತ್ತಿದ್ದವರಂತೆ ಬಜರಂಗಳ-ವಿಹೆಚ್‌ಪಿಗಳು ನಿತ್ಯ ಕಾರ್ಯಕ್ರಮ ಹಾಕಿಕೊಂಡು ಮುತಾಲಿಕ ಸ್ಮರಣೆ ಆರಂಭಿಸಿವೆ. ಅವರು ಕೋಪದಿಂದ ಎಷ್ಟೇ ಅರಚಾಟ ಮಾಡಿದರೂ ಸರ್ಕಾರ ಕೇರೇ ಮಾಡುತ್ತಿಲ್ಲ - ಅದಕ್ಕೇ ಮುಖ್ಯಮಂತ್ರಿ ಮನೆ ಬಳಿಗೇ ಹೋಗುವುದಾಗಿ ಹೇಳಿದ್ದಾರೆ, ಹೋಗಿಬರಲಿ.

ಸರ್ಕಾರ ಕೋಮುವಾದಿಗಳ ಅಬ್ಬರವನ್ನು ಕೊಂಚ ಗಮನಕ್ಕೆ ತೆಗೆದುಕೊಂಡಂತೆ ಕಾಣುತ್ತಿದೆ. ಆದರೆ ಇದನ್ನು ಕಾನೂನು- ಸುವ್ಯವಸ್ಥೆ ಪ್ರಶ್ನೆ ಎಂಬಂತೆ, ಅಥವಾ ಪೊಲೀಸರ ವ್ಯಾಪ್ತಿಗೆ ವಹಿಸಿ ಕೈ ಚೆಲ್ಲಿ ಕುಳಿತುಕೊಳ್ಳದೆ ರಾಜಕೀಯವಾಗಿಯೂ ಕ್ರಮ ವಹಿಸಲು ಕಾಂಗ್ರೆಸ್ ಮತ್ತು ಮೈತ್ರಿಕೂಟದ ಸರ್ಕಾರ ಮುಂದಾಗಬೇಕು. ಬಾಬಾಬುಡನ್ ಗಿರಿ ವಿವಾದ, ರಂಜಾನ್ - ದೀಪಾವಳಿ ಹಬ್ಬದ ಸಂದರ್ಭದಲ್ಲಿ ಸೌಹಾರ್ದತೆ ಕಾಯಲು ಮುಖ್ಯಮಂತ್ರಿಗಳು ಕರೆದ ಸರ್ವ ಪಕ್ಷಗಳ ಸಭೆ, ಈದ್ಗಾ ವಿವಾದ ಇತ್ಯರ್ಥಕ್ಕೆ ಯತ್ನಗಳು ಸ್ವಾಗತಾರ್ಹ. ಧರಂಸಿಂಗ್ ಸರ್ಕಾರ ಕೋಮುವಾದದ ಪ್ರಶ್ನೆಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿದೆ ಎಂಬುದರ ಸೂಚಕ. ಇದು ದೃಢವಾಗಿನಡೆಯಲಿ. ಜನರ ಸಮಸ್ಯೆಗಳನ್ನು ಪರಿಹರಿಸುತ್ತಾ ಒಗ್ಗಟ್ಟಿನಿಂದ ಸಮಗ್ರವಾಗಿ ಎದುರಿಸಲಿ.

ಪೆಟ್ರೋಲಿಯಂ ಬೆಲೆ ಏರಿಕೆ ವಿರುದ್ಧ ಎಲ್ಲೆಡೆ ಪ್ರತಿಭಟನೆ

ಕೇಂದ್ರದ ಯುಪಿಎ ಸರಕಾರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ತೀವ್ರವಾಗಿ ಹೆಚ್ಚಿಸಿರುವುದನ್ನು ವಿರೋಧಿಸಿ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಇದಕ್ಕೆ ತೀವ್ರವಾಗಿ ಪ್ರತಿಭಟಿಸಬೇಕೆಂದು ತನ್ನೆಲ್ಲ ಘಟಕಗಳಿಗೆ ಕರೆ ನೀಡಿತ್ತು. ಇದರ ಭಾಗವಾಗಿ ಸಿಪಿಐ(ಎಂ)ನ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ನವೆಂಬರ್ 12 ರಂದು ರಾಜ್ಯದೆಲ್ಲೆಡೆ ಧರಣಿ ಮತ್ತಿತರ ಪ್ರತಿಭಟನೆಗೆ ಕರೆ ನೀಡಿತ್ತು. ಇದಕ್ಕೆ ರಾಜ್ಯದಲ್ಲಿ ಉತ್ತಮ ಪ್ರತಿಕ್ರಿಯೆ ಬಂದಿದ್ದು, 20 ಕ್ಕೂ ಹೆಚ್ಚು ಕಡೆಗಳಲ್ಲಿ ಪ್ರತಿಭಟನೆಗಳು ನಡೆದ ವರದಿಯಾಗಿದೆ.ತಾವು ಅಧಿಕಾರದಲ್ಲಿದ್ದಾಗ ಬೆಲೆಗಳನ್ನು ಏರಿಸಿ, ಅಧಿಕಾರ ಕಳೆದುಕೊಂಡ ನಂತರ ಪ್ರತಿಭಟನೆಯ ನಾಟಕವನ್ನಾಡುತ್ತಿರುವ ಬಿಜೆಪಿಗೆ ಜನಮನ್ನಣೆ ದೊರೆಯಲಿಲ್ಲ.

ಬೆಂಗಳೂರು : ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆ ಹೆಚ್ಚಳದ ಸುದ್ದಿ ತಿಳಿಯುತ್ತಲೇ ತೀವ್ರವಾಗಿ ಪ್ರತಿಕ್ರಿಯಿಸಿದ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಕಾರ್ಯಕರ್ತರು ಮೈಸೂರು ಬ್ಯಾಂಕ್ ವೃತ್ತದಲ್ಲಿ ನವೆಂಬರ್ 8 ರಂದು ಪ್ರತಿಭಟನೆ ನಡೆಸಿದರು. ರಾಜ್ಯ ಕಾರ್ಯದರ್ಶಿ ಕೆ.ಎಸ್.ವಿಮಲಾ ಮತ್ತಿತರರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಹೆಚ್ಚಿಸಿದ ಬೆಲೆಗಳನ್ನು ಇಳಿಸುವಂತೆ ಒತ್ತಾಯಿಸಿದರು.

ನವೆಂಬರ್ 10 ರಂದು ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಅವರ ನೇತೃತ್ವದಲ್ಲಿ ಮೈಸೂರು, ಬ್ಯಾಂಕ್ ವೃತ್ತದಲ್ಲಿ ಧರಣಿ ನಡೆಸಿದ ಸಿಪಿಐ(ಎಂ) ಕಾರ್ಯಕರ್ತರು, ಕೇಂದ್ರ ಸರಕಾರವು ಏರಿಸಿದ ಬೆಲೆಗಳನ್ನು ಇಳಿಸದೆ ಹೋದಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಯ್ಯಾರೆಡ್ಡಿ ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಇಳಿಯುತ್ತಿರುವಾಗ ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆ ಹೆಚ್ಚಿಸುವುದು ಖಂಡನಾರ್ಹ ಎಂದು ಹೇಳಿದರಲ್ಲದೆ ಇದು ಹಣದುಬ್ಬರಕ್ಕೆ ಕಾರಣವಾಗಲಿದೆ ಎಂದರು.

ಉಡುಪಿ: ಜಿಲ್ಲಾ ಕೇಂದ್ರ ಉಡುಪಿ ಮತ್ತು ತಾಲ್ಲೂಕು ಕೇಂದ್ರ ಕುಂದಾಪುರಗಳಲ್ಲಿ ನವೆಂಬರ್ 10 ರಂದು ಪ್ರತಿಭಟನೆಗಳು ನಡೆದಿದ್ದು. ಉಡುಪಿಯ ಸಿಟಿ ಬಸ್ ನಿಲ್ದಾಣದಿಂದ ಮೆರವಣಿಗೆ ಹೊರಟ ಪ್ರತಿಭಟನಾಕಾರರು ತಾಲ್ಲೂಕು ಕಛೇರಿಗೆ ಬಂದು ತಹಶೀಲದಾರರ ಮೂಲಕ ಪ್ರಧಾನಿಯವರಿಗೆ ಮನವಿ ಸಲ್ಲಿಸಿದರು.

ಕುಂದಾಪುರದ ಶಾಸ್ತ್ರಿ ಸರ್ಕಲ್‌ನಿಂದ ಮೆರವಣಿಗೆ ಹೋರಾಟ 500 ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ತಾಲ್ಲೂಕು ಕಛೇರಿಗೆ ತೆರಳಿ ಪ್ರದಾನಿಯವರಿಗೆ ಮನವಿ ಸಲ್ಲಿಸಿದ್ದು ಮಾತ್ರವಲ್ಲದೆ, ಬೆಲೆ ಇಳಿಕೆಯಾಗದಿದ್ದಲ್ಲಿ ಹೋರಾಟವನ್ನು ಮುಂದುವರಿಸುವುದಾಗಿ ಎಚ್ಚರಿಕೆ ನೀಡಿದರು.

ಉಡುಪಿಯಲ್ಲಿ ಪ್ರತಿಭಟನೆಯ ನೇತೃತ್ವವನ್ನು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಡೇವಿಡ್ ಕರ್ಕಡ, ಮುಖಂಡರುಗಳಾದ ಸಾಧು ಅಮಿನ್, ದೋಗು ಸುವರ್ಣ ಮೊದಲಾದವರು ವಹಿಸಿದ್ದರು. ಕುಂದಾಪುರದಲ್ಲಿ ರಾಜ್ಯ ಸಮಿತಿ ಸದಸ್ಯ ಹಾಗೂ ಉಡುಪಿ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್, ರೈತಮುಖಂಡ ದಾಸಭಂಡಾರಿ, ಕಾರ್ಮಿಕ ಮುಖಂಡ ಸಿ.ನಾರಾಯಣ ಮೊದಲಾದವರು ನೇತೃತ್ವ ವಹಿಸಿದ್ದರು.


ಮಂಗಳೂರಿನಲ್ಲಿ ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡುತ್ತಿರುವ ಬಿ.ಮಾಧವರವರು


ಬೆಂಗಳೂರಿನಲ್ಲಿ ಪ್ರತಿಭಟನೆ

ಮಂಗಳೂರು : 'ಸಿಪಿಐ(ಎಂ) ಯುಪಿಎ ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡಿದ್ದು ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಆ ನೀತಿಗಳನ್ನು ಜ್ಯಾರಿ ಮಾಡುವ ಬದಲಾಗಿ ಜನ ವಿರೋಧಿ ನೀತಿ ಅನುಸರಿಸಿದರೆ ಸುಮ್ಮನೆ ಕೂರುವುದಿಲ್ಲ' ಎಂದು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್ ಕೇಂದ್ರ ಸರಕಾರವನ್ನು ಎಚ್ಚರಿಸಿದರು. ಅವರು ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ವಿರುದ್ಧ ಮಂಗಳೂರಿನಲ್ಲಿ ನಡೆದ ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಇದೇ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ.ಮಾಧವ ಮಾತನಾಡಿ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬೆಲೆ ಕಡಿಮೆಯಾಗುತ್ತಿರುವಾಗ ದರ ಹೆಚ್ಚಿಸುವ ಅಗತ್ಯವಿಲ್ಲ. ಸಿಪಿಐ(ಎಂ) ನಾಯಕತ್ವ ಸೂಚಿಸಿದಂತೆ ಅಬಕಾರಿ ಮತ್ತು ಆಮದು ಸುಂಕವನ್ನು ತಗ್ಗಿಸುವುದರ ಮೂಲಕ ಬೆಲೆ ಸಮತೋಲನ ಕಾಯ್ದುಕೊಳ್ಳಲು ಸಾಧ್ಯವಿದೆ' ಎಂದರು.

ಅವರು, ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ವಿರುದ್ಧ ಮಂಗಳೂರಿ ನಲ್ಲಿರುವ ದಕ್ಷಿಣ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪ್ರತಿಭಟನೆ ನಡೆಸುತ್ತಿದ್ದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಿ ದ್ದರು. ಪ್ರತಿಭಟನೆಯಲ್ಲಿ ರಾಜ್ಯಸಮಿತಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ, ರಾಮಚಂದ್ರ ಉಚ್ಚಿಲ್, ಹಿರಿಯ ಮುಖಂಡರಾದ ಅಬ್ರಹಾಂ ಕರ್ಕಡ, ಪುಷ್ಪ ಸಾಲಿಯಾನ್ ಮೊದಲಾದವರು ಭಾಗವಹಿಸಿದ್ದರು. ಕಳೆದ ಆರು ವರ್ಷಗಳಲ್ಲಿ ನಿರಂತರವಾಗಿ ಪೆಟ್ರೋಲಿಯಂ ಉತ್ಪನ್ನಗಳಿಗೆ ಬೆಲೆ ಹೆಚ್ಚಿಸಿದ ಬಿಜೆಪಿಗೆ, ಈಗ ಪ್ರತಿಭಟನೆ ಮಾಡುವ ಯಾವುದೇ ನೈತಿಕ ಹಕ್ಕು ಉಳಿದಿಲ್ಲ ಎಂದು ಪ್ರತಿಭಟನಾಕಾರರು ದೂಷಿಸಿದರು.

ಹಾಸನ : ಕುದುರೆ ಗಾಡಿಗೆ ಕಾರನ್ನು ಕಟ್ಟಿ ವಿಶೇಷ ರೀತಿಯಲ್ಲಿ ಪ್ರತಿಭಟನೆ ನಡೆಸಿದ ಕಾರ್ಯಕರ್ತರು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಅಲ್ಲಿನ ಟಿಪ್ಪು ಸಂಘರ್ಷ ಸಮಿತಿಯ ಸದಸ್ಯರೂ ಇದರಲ್ಲಿ ಭಾಗವಹಿಸಿದ್ದರು.


ಬೆಂಗಳೂರಿನಲ್ಲಿ ಮಹಿಳೆಯರ ಪ್ರತಿಭಟನೆ

ಕೋಲಾರ : ಕೋಲಾರ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗಾಂಧಿನಗರ ನಾರಾಯಣಸ್ವಾಮಿ ಮತ್ತಿತರರ ನೇತೃತ್ವದಲ್ಲಿ ಬಸ್ ನಿಲ್ದಾಣದ ಬಳಿ ಪ್ರತಿಭಟನೆ ನಡೆಸಿದ ಸಿಪಿಐ(ಎಂ) ಕಾರ್ಯಕರ್ತರು ಒಂದು ಗಂಟೆಗೂ ಅಧಿಕ ಕಾಲ ಬಸ್ ಸಂಚಾರವನ್ನು ತಡೆಗಟ್ಟಿದರು. ಬಸ್ ತಡೆ ಕಾರ್ಯಕ್ರಮಕ್ಕೆ ನೂರಾರು ರಿಕ್ಷಾ ಚಾಲಕರು ಸ್ವಯಂ ಪ್ರೇರಿತರಾಗಿ ಬೆಂಬಲಿಸಿ ದರು.

ಜಿಲ್ಲೆಯ ಇತರೆಡೆ ಗಳಲ್ಲಿ ಹಬ್ಬದ ನಂತರ ಪ್ರತಿಭಟನೆ ನಡೆಯಲಿದೆ.

ಗುಲ್ಬರ್ಗಾ: ಜಿಲ್ಲಾಧಿಕಾರಿ ಕಛೇರಿಯ ಎದುರಿನ ಪ್ರಮುಖ ಬೀದಿಯಲ್ಲಿ ರಸ್ತೆ ತಡೆ ನಡೆಸಿದ ಪ್ರತಿಭಟನಾಕಾರರು ನಂತರ ಧರಣಿ ನಡೆಸಿದರು. ಧರಣಿಯನ್ನು ಉದ್ದೇಶಿಸಿ ಮಾತನಾಡಿದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ ಮಾತನಾಡಿ, ಅಡುಗೆ ಗ್ಯಾಸ್‌ನ ಬೆಲೆ ಬೇರೆ ದೇಶಗಳಲ್ಲಿ ನಮ್ಮ ದೇಶದಲ್ಲಿರುವ ಬೆಲೆ ಹೆಚ್ಚಾಗಿದೆ ಎಂದು ಕೇಂದ್ರ ಸರಕಾರದವರು ಬೆಲೆ ಏರಿಕೆಯಲ್ಲಿ ಸಮರ್ಥಿಸಿ ಕೊಳ್ಳುತ್ತಿದ್ದಾರೆ. ಅಮೇರಿಕಾದಲ್ಲಿ ಜನರ ತಲಾ ವಾರ್ಷಿಕ ಆದಾಯ 2300, ನಮ್ಮ ದೇಶದಲ್ಲಿ ಕೇವಲ ರೂ.375/- ಮಾತ್ರ. ಆದ್ದರಿಂದ ಬೇರೆ ದೇಶದವರೊಂದಿಗೆ ನಮ್ಮ ದೇಶದ ಬೆಲೆ ಪರಿಸ್ಥಿತಿಯನ್ನು ಹೋಲಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ತುಮಕೂರು : ನವೆಂಬರ್ 12 ರಂದು ತುಮಕೂರಿನ ಪ್ರಮುಖ ಬೀದಿಗಳಲ್ಲಿ ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ರಾಜ್ಯಸಮಿತಿ ಸದಸ್ಯ ಸಯ್ಯದ್ ಮುಜೀಬ್ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ನಡೆಸಿದರು. ಇದಕ್ಕೂ ಮೊದಲು ಹಿಂದಿನ ದಿನ ಆಟೊ ಪ್ರಚಾರ, ಕರಪತ್ರ ಹಂಚಿಕೆಗಳ ಮೂಲಕ ಬೆಲೆ ಏರಿಕೆಯನ್ನು ವಿರೋಧಿಸಲಾಗಿತ್ತು.

ಉತ್ತರಕನ್ನಡದ ದಾಂಡೇಲಿ, ಬಿಜಾಪುರ ಮೈಸೂರು ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಮತ್ತಿತರ ಕಡೆಗಳಲ್ಲಿ ಪ್ರತಿಭಟನೆಗಳು ನಡೆದ ವರದಿಯಾಗಿದ್ದು ಕೆಲವು ಕಡೆಗಳಲ್ಲಿ ಪ್ರತಿಭಟನೆ ಮುಂದುವರಿಯಲಿದೆ. ಒಟ್ಟಾರೆಯಾಗಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಸುವ ಮೂಲಕ ಬೆಲೆ ಏರಿಕೆಯನ್ನು ಹಿಂದೆ ಪಡೆಯಲು ಕೇಂದ್ರ ಸರಕಾರವನ್ನು ಒತ್ತಾಯಿಸಲಾಗಿದೆ.


ಬಿಜಾಪುರ : ಧ... ಭೀಮಸಿ ಕಲಾದಗಿ

ಪೆಟ್ರೋಲ್ ಬಂಕ್

ತಮಗಾಗಿ ದುಡಿದವರ ಹಿತ್‌ಕಾಗಿ ವೆಂಕು
ಕೊಡಿಸಿದನು ಆ ಹೊತ್ತು ಪೆಟ್ರೋಲ್ ಬಂಕು
ಇದು ದೊಡ್ಡತಪ್ಪೆಂದು ಹೇಳುತ್ತ ಈಗ
ಮಾಡಬೇಕೆನ್ನುವುದೆ ಉದ್ಯೋಗ ತ್ಯಾಗ

\- ವಿಡಂಬಾರಿ

ಬಿಜೆಪಿಯೊಳಗಿನ ವಿವಾದಗಳ ಅಂತರಾಳವೇನು?

ತಾನೊಂದು 'ಭಿನ್ನರೀತಿಯ ಪಕ್ಷ' ಎಂದು ಹೇಳಿಕೊಳ್ಳುತ್ತಿದ್ದ ಪಕ್ಷವನ್ನು ಜನ 'ಭಿನ್ನಾಭಿಪ್ರಾಯಗಳ ಪಕ್ಷ' ಎಂದು ಕಾಣಲಾರಂಭಿಸಿದ್ದಾರೆ ಎಂದು ಹೇಳಿದರಷ್ಟೇ ಸಾಲದು. ಈ ಘಟನೆಗಳ ಅರ್ಥದ ಆಳವನ್ನು ಪರಿಶೀಲಿಸಬೇಕಾದ್ದು ಅಗತ್ಯ. ಏಕೆಂದರೆ ದೇಶದ ಮೇಲೆ ಇದರ ಪ್ರಭಾವ ಬಹಳಷ್ಟಿದೆ. ಬಿಜೆಪಿಯೊಳಗಿನ ಆಂತರಿಕ ವಿದ್ಯಮಾನಗಳನ್ನು ವಿಶ್ಲೇಷಿಸಿದ್ದಾರೆ ಹಿರಿಯ ನಾಯಕ ಕಾಂ. ಸುರ್ಜಿತ್.

'ಕರ್ಕಶ ಕೋಮುವಾದಿ ಅಜೆಂಡಾ ಅನುಸರಿಸಿ' ಎಂದು ಬಿಜೆಪಿಯ ಕೈ ತಿರುಚುತ್ತಿದೆ ಆರ್‌ಎಸ್‌ಎಸ್

ಬಿಜೆಪಿಗೆ ಮತ್ತು ಇಡೀ ಸಂಘ ಪರಿವಾರಕ್ಕೆ ಇದೀಗ ಬಹಳ ಕಷ್ಟದ ದಿನಗಳೆಂದು ಕಾಣಿಸುತ್ತದೆ. ಆರ್‌ಎಸ್‌ಎಸ್ ನ ಹರಿದ್ವಾರ ಗೂಢಸಭೆಯಲ್ಲಿ ಮತ್ತು ಅದರ ಮೊದಲು ನಡೆದ ಘಟನೆಗಳು ಇಡೀ ಸಂಘ ಪರಿವಾರ ಒಂದುರೀತಿಯ ಬಿಕ್ಕಟ್ಟನ್ನು ಎದುರಿಸುತ್ತಿದೆ ಎಂಬುದನ್ನು ಸಾಬೀತು ಮಾಡಿದೆ. ಅದನ್ನು ಪರಿಹರಿಸುವಾಗ ಜನಗಳ ನಡುವೆ ಅದರ ಸ್ಥಾನಮಾನ ಇಳಿಯುವ ಸಂಭವವೇ ಹೆಚ್ಚು.

ಆದರೆ ಕೇಸರೀ ಪಡೆಯೊಳಗಿನ ಕಿತ್ತಾಟದ ಫಲಿತಾಂಶದ ಬಗ್ಗೆ ಭ್ರಮೆಯೇನೂ ಇಟ್ಟುಕೊಳ್ಳಬೇಕಾಗಿಲ್ಲ. ಅದು ವಿಹೆಚ್‌ಪಿಗೆ ಕಡಿವಾಣ ಹಾಕುವುದಿಲ್ಲ, ಅತ್ತ ಬಿಜೆಪಿಯೂ ಕೈ ಬಿಡುವುದೂ ಇಲ್ಲ. ಏಕೆಂದರೆ ಒಬ್ಬ ಪತ್ರಕರ್ತರು ಹೇಳಿದಂತೆ ಬಿಜೆಪಿಯ ಉಳಿವಿಗೆ 'ಸಂಘ' ಬೇಕಾದರೆ, ಆರ್‌ಎಸ್‌ಎಸ್‌ಗೂ ಬಿಜೆಪಿ ಅಷ್ಟೇ ಮಟ್ಟದಲ್ಲಿ ಬೇಕು. ಈ ಪರಸ್ಪರ ಸಂಬಂಧ ಬಿಜೆಪಿಯನ್ನು ಕೈಬಿಟ್ಟು (1) ಅದರ ಸ್ಥಾನದಲ್ಲಿ ಒಂದು ಹೊಸ ಪಕ್ಷವನ್ನು ತೇಲಿಬಿಡುವುದು ಅಥವಾ (2) ಈಗಿರುವ ಬಲರಾಜ್ ಮಧೋಕ್‌ರವರ ಹರಕು-ಮುರುಕು ಪಕ್ಷ ಜನಸಂಘವನ್ನು ದತ್ತು ತೆಗೆದುಕೊಳ್ಳುವುದು ಅಥವಾ (3) 'ಸಾಂಸ್ಕೃತಿಕ ಸಂಘಟನೆ' ಯೆಂಬ ತನ್ನ ಮುಖವಾಡವನ್ನು ಕಳಚಿಹಾಕಿ ತಾನೇ ಒಂದು ರಾಜಕೀಯ ಪಕ್ಷವಾಗುವುದು ಈ ಮೂರು ದಾರಿಗಳಲ್ಲಿ ಒಂದನ್ನು ಆರಿಸಿಕೊಳ್ಳುವವರೆಗೆ ಮುಂದು ವರೆಬೇಕಾಗುತ್ತದೆ. ಆರ್‌ಎಸ್‌ಎಸ್‌ನ ಈ ಮೂರು ದಾರಿಗಳು ಮುಚ್ಚಿವೆ ಎಂದು ಬೇರೆ ಹೇಳಬೇಕಾಗಿಲ್ಲ.

ಆದರೂ ಬಿಜೆಪಿಯೊಳಗೆ, ಮತ್ತು ಇಡೀ ಸಂಘ ಪರಿವಾರದೊಳಗೂ ಗಂಭೀರವಾದದ್ದೇನೋ ಇದೆ ಎಂಬುದು ನಿಜ. ತಾನೊಂದು 'ಭಿನ್ನರೀತಿಯ ಪಕ್ಷ' ಎಂದು ಹೇಳಿಕೊಳ್ಳುತ್ತಿದ್ದ ಪಕ್ಷವನ್ನು ಜನ 'ಭಿನ್ನಾಭಿಪ್ರಾಯಗಳ ಪಕ್ಷ' ಎಂದು ಕಾಣಲಾರಂಭಿಸಿದ್ದಾರೆ ಎಂದು ಹೇಳಿದರಷ್ಟೇ ಸಾಲದು. ಈ ಘಟನೆಗಳ ಅರ್ಥದ ಆಳವನ್ನು ಪರಿಶೀಲಿಸಬೇಕಾದ್ದು ಅಗತ್ಯ. ಏಕೆಂದರೆ ದೇಶದ ಮೇಲೆ ಇದರ ಪ್ರಭಾವ ಬಹಳಷ್ಟಿದೆ.

ಎರಡು ಅಂಶಗಳು

ಈ ಭಿನ್ನಾಭಿಪ್ರಾಯಗಳು 'ಹಿಂದುತ್ವ'ದ ಅಜೆಂಡಾದ ಮೇಲೆ ಕೇಂದ್ರೀತವಾದಂತೆ ಮೇಲ್ನೋಟಕ್ಕೆ ಕಾಣುತ್ತದೆ. ಬಿಜೆಪಿ ಅಧಿಕಾರದಲ್ಲಿದ್ದಾಗ ಅದನ್ನು ಅನುಸರಿಸಿಲ್ಲ, ಈಗಲಾದರೂ ಮತ್ತೆ 'ಮೂಲಕ್ಕೆ' ತೆರಳಿ 'ಹಿಂದುತ್ವ' ಅಜೆಂಡಾವನ್ನು ಎಷ್ಟು ಸಾಧ್ಯವೋ ಅಷ್ಟು ಬಲವಾಗಿ ಪ್ರಚಾರ ಮಾಡಬೇಕು ಎಂಬ ಬಗ್ಗೆ ತಿಕ್ಕಾಟಗಳು ನಡೆಯುತ್ತಿರುವಂತೆ ಕಾಣುತ್ತದೆ.

ಆದರೆ ವಿಷಯ ಇಷ್ಟು ಸರಳವಾಗಿಲ್ಲ. ಇಲ್ಲಿ ಎರಡು ಅಂಶಗಳನ್ನು ಗಮನಿಸಬೇಕು. ಮೊದಲನೆಯದಾಗಿ, ಬಿಜೆಪಿ ಎಂದೂ ತನ್ನ ಕೋಮುವಾದಿ ಅಜೆಂಡಾದಿಂದ ದೂರ ಸರಿದಿರಲಿಲ್ಲ. ಹಿಂದೆ ಹಲವು ಬಾರಿ ಹೇಳಿದಂತೆ ಅದರ ಆಳ್ವಿಕೆಯಲ್ಲಿ ಅತಿಹೆಚ್ಚು ಅಲ್ಪಸಂಖ್ಯಾತ ಕೋಮುಗಳ ಜನ ಬಲಿಯಾದರು. ಒರಿಸ್ಸಾದಲ್ಲಿ ಗ್ರಾಹಂ ಸ್ಟೈನ್ ಮತ್ತು ಅವರ ಇಬ್ಬರು ಮಕ್ಕಳ ಜೀವಂತ ದಹನ, ಗುಜರಾತಿನಲ್ಲಿ ನಾಲ್ಕು ತಿಂಗಳಲ್ಲಿ 2000 ಮುಸ್ಲಿಮರ ಕಗ್ಗೊಲೆ ಇವಕ್ಕೆ ಎರಡು ಉದಾಹರಣೆಗಳಷ್ಟೆ. ಸ್ವತಃ ಬಿಜೆಪಿ ಮುಖಂಡರೂ ತಮ್ಮ ಅಜೆಂಡಾವನ್ನು ಸರಿಸಲ್ಲ, ಸದ್ಯ ಮುಂದೂಡಿದ್ದೇವಷ್ಟೇ ಎಂದು ಹೇಳುತ್ತಿದ್ದರು. ಸಮಿಶ್ರ ಸರ್ಕಾರದ ಮುಖ್ಯಸ್ಥರಾದರೂ ವಾಜಪೇಯಿ ಸ್ಟೈನ್‌ರ ಕೊಲೆಗಾರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳುವ ಬದಲು ಮತಾಂತರಗಳ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಯಬೇಕು ಎಂದು ಹೇಳಲಿಲ್ಲವೇ? ಗುಜರಾತ್ ಪರಿಸ್ಥಿತಿಯನ್ನು ಮೋದಿ ಬೇಗನೆ ಹತೋಟಿಗೆ ತಂದರು ಎಂದು ಹೊಗಳಲಿಲ್ಲವೇ?

ಆದ್ದರಿಂದ ಬಿಜೆಪಿ ಮುಖಂಡರು ಕೋಮುವಾದಿ ಅಜೆಂಡಾದಿಂದ ದೂರ ಸರಿದಿದ್ದರು ಎಂಬುದು ವಾಸ್ತವವಲ್ಲ ಎಂದು ಇನ್ನೊಮ್ಮೆ ಒತ್ತಿ ಹೇಳಬೇಕಾಗುತ್ತದೆ. ಆದರೆ ಇಲ್ಲಿಯೇ ಎರಡನೇ ಅಂಶವನ್ನು ಗಮನಿಸಬೇಕು. ಬಿಜೆಪಿ ಮುಖಂಡರು ಅಧಿಕಾರದಲ್ಲಿರುವಾಗ ತಮ್ಮ ಮೇಲಿರುವ ಒತ್ತಡಗಳನ್ನು ಹೇಳಿಕೊಂಡರೂ ವಿಹೆಚ್‌ಪಿಯರಿಗೆ ಇದು ಸಾಕಾಗಲಿಲ್ಲ.

ವಿವಾದ ಏನು?

ಒಟ್ಟಿನಲ್ಲಿ ಬಿಜೆಪಿ ಮತ್ತು ವಿಹೆಚ್‌ಪಿ ನಡುವಿನ ವಿವಾದ ಇದಕ್ಕಿದ್ದಂತೆ ಎದ್ದು ಬಂದದ್ದಲ್ಲ. ಅದು 1998 ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಂದಿನಿಂದಲೂ ಇದೆ. ಆದರೆ ಈ ವಿವಾದ ಮೂಲಭೂತ ಅಂಶಗಳ ಮೇಲೆ ಅಲ್ಲ. ವಾಜಪೇಯಿಯವರು 'ಮಂದಗಾಮಿ' ಎಂದು ಮಾಧ್ಯಮದ ಒಂದು ವಿಭಾಗದ ಪ್ರಚಾರವನ್ನು ಜನಗಳ ನಂಬಿದಂತೆ ಬಿಜೆಪಿ ಮತ್ತು ವಿಹೆಚ್‌ಪಿ ನಡುವೆ ಒಂದು ರೀತಿಯ ಅಂತರ ಇದೆ ಎಂಬೂ ನಾವು ನಂಬಬೇಕೆಂದು ಮಾಧ್ಯಮದ ಆ ವಿಭಾಗ ಬಯಸುತ್ತದೆ. ಉದಾಹರಣೆ, ಹಿಂದೂಸ್ತಾನ್ ಟೈಮ್ಸ್‌ನ ನವೆಂಬರ್ 8 ಸಂಪಾದಕೀಯ 'ಬಿಜೆಪಿ ಅಧ್ಯಕ್ಷ ಎಲ್.ಕೆ. ಅಡ್ವಾಣಿಯವರಿಗೆ ಈ ಕೆಲಸ ಸುಲಭ ಪಕ್ಷದೊಳಗೆ ವ್ಯವಸ್ಥೆ ಸರಿಪಡಿಸಿ ಹೊರಗೆ ಕೂತಿರುವ ಹುಚ್ಚು ಗಲಾಟೆಕೋರರಿಗೆ ಸ್ವಾಗತವಿಲ್ಲ ಎಂಬ ಸಂದೇಶ ಕಳಿಸಬೇಕು" ಎಂದಿದೆ. ಆದರೆ ಈ 'ಹುಚ್ಚು'ಮಂದಿಗೆ ಸ್ವತಃ ಆರ್‌ಎಸ್‌ಎಸ್‌ನ ಬೆಂಬಲವಿದ್ದರೆ ಏನು ಮಾಡುವುದು? 'ವಿಹೆಚ್‌ಪಿ ಮುಖಂಡರು ಆರ್‌ಎಸ್‌ಎಸ್ ನ ಪರೋಕ್ಷ ಒಪ್ಪಿಗೆಯಿಂದಲೇ ಅಖಿಲ ಭಾರತೀಯ ಕಾರ್ಯಕಾರೀ ಮಂಡಲ್ ಶುಕ್ರವಾರದ ಸಭೆಯಲ್ಲಿ ಭಾಗವಹಿಸಲಿಲ್ಲ ಎಂಬ ಸಂದೇಹಕ್ಕೆ ಶನಿವಾರದ ಬೆಳವಣಿಗೆಗಳು ಆಸ್ಪದ ನೀಡಿವೆ. ವಿಹೆಚ್‌ಪಿ ಪ್ರತಿನಿಧಿಗಳು ದೂರವಿರಲು ಮೊದಲೇ ಅನುಮತಿ ಪಡೆದಿದ್ದರು ಎಂದು ಆರ್‌ಎಸ್‌ಎಸ್ ವಕ್ತಾರ ರಾಮ್ ಮಾಧವ ಟಿಪ್ಪಣಿ ಮಾಡಿದಾಗ ಸುಮಾರಾಗಿ ಇಷ್ಟನ್ನು ಹೇಳಿದಂತಾಗಿದೆ ಎಂಬ ಅದೇ ಪತ್ರಿಕೆಯ ವರದಿ ವಾಸ್ತವಕ್ಕೆ ಹತ್ತಿರವಾಗಿದೆ.

ಇದರಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ. ಈಗಿರುವ ವಿವಾದ ಕೋಮುವಾದಿ ಅಜೆಂಡಾವನ್ನು ಜಾರಿ ಮಾಡಬೇಕೇ, ಬೇಡವೇ ಎಂಬ ಬಗ್ಗೆ ಅಲ್ಲ. ಬದಲಾಗಿ, ಅದನ್ನು ಹೇಗೆ ಮಾಡುವುದು ಎಂಬ ಬಗ್ಗೆ - ಸಂಯಮದಿಂದ ಮಾಡಬೇಕೇ, ಎಲ್ಲಾ ಒತ್ತು ಹಾಕಿ ಮಾಡಬೇಕೇ ಎಂದು.

ಅಂತಿಮವಾಗಿ ಹರಿದ್ವಾರದಲ್ಲಿ ಏನಾಯಿತೆಂದರೆ, ಶುಕ್ರವಾರ ಆರ್‌ಎಸ್‌ಎಸ್ ಸಭೆಯನ್ನು ಬಹಿಷ್ಕರಿಸಿದ ವಿಹೆಚ್‌ಪಿ ಮುಖಂಡರು 'ಪುಕ್ಕಲು' ಮುಖಂಡರೆನಿಸಿದ ಅಡ್ವಾಣಿ ಮತ್ತು ವೆಂಕಯ್ಯನಾಯ್ಡು ಹೊರಹೋದ ಮೇಲೆ ಶನಿವಾರ ಬಂದು ಸೇರಿದರು. 'ಹಿಂದೂ' ಸಂಪಾದಕೀಯ (ನವೆಂಬರ್ 8) ಹೇಳಿರುವಂತೆ 'ಈ ಸಭೆ ಹಿಂದುತ್ವಕ್ಕೆ ಮರಳಿ, ಇಲ್ಲವೇ ...' ಎಂದ ಬಿಜೆಪಿಗೆ ಆರ್‌ಎಸ್‌ಎಸ್ ಗಡುವು ನೀಡುವುದರೊಂದಿಗೆ ಮುಕ್ತಾಯಗೊಂಡಿತು.

ಎನ್‌ಡಿಎ ಮಿತ್ರರ ಸ್ಥಿತಿ

ಬಿಜೆಪಿಯ ಮುಂದಿರುವ ಪ್ರಶ್ನೆಯೆಂದರೆ ಎನ್‌ಡಿಎ ಜತೆಗೆ ಹೋಗಬೇಕೆ ಅಥವಾ ಏಕಾಂಗಿಯಾಗಿ ಸಾಗಬೇಕೇ ಎನ್ನುವುದು ಎಂದು ಬಿಂಬಿಸಲು ಕೆಲವು ಟಿಪ್ಪಣೆಗಾರರು ಪ್ರಯತ್ನಿಸಿದ್ದಾರೆ. ನಿಜ ಸಂಗತಿಯೆಂದರೆ ಮಾರ್ಚ್ 1998 ರಿಂದ ಮೇ 2004 ರ ವರೆಗಿನ ದಾಖಲೆಗಳನ್ನು ನೋಡಿದರೆ ಬಿಜೆಪಿ ಎಂದೂ ತನ್ನ ಮಿತ್ರ ಪಕ್ಷಗಳ ಭಾವನೆಗಳಿಗೆ ಬೆಲೆ ಕೊಟ್ಟಿದ್ದು, ನೀತಿ ರೂಪಿಸುವಲ್ಲಿ ಅವರನ್ನು ಗಣನೆಗೆ ತೆಗೆದುಕೊಂಡದ್ದು ಕಾಣುತ್ತಿಲ್ಲ. ಮಂತ್ರಿಮಂಡಳದಲ್ಲಿ ಬಿಜೆಪಿಯ 57 ಮಂತ್ರಿಗಳಿದ್ದರು. ಉಳಿದ ಎರಡೂ ಡಝನ್‌ಗೂ ಹೆಚ್ಚಿನ ಸಂಖ್ಯೆಯ ಪಕ್ಷಗಳಿಗೆ ಒಟ್ಟಾಗಿ ಸಿಕ್ಕಿದ್ದು 21 ಸ್ಥಾನಗಳಷ್ಟೆ. ಜೆಡಿ(ಯು)ನ ಬಡ ಶರದ್ ಯಾದವ್ ಒಂದು ಕ್ಯಾಬಿನೆಟ್ ಸ್ಥಾನ ಕೊಡಿ ಎಂದು ಎಷ್ಟು ಗೋಗರೆದರೂ ಕೊಟ್ಟಿಲ್ಲ. ಬೇರೆ ಪಕ್ಷಗಳ ಕ್ಯಾಬಿನೆಟ್ ದರ್ಜೆಯ ಸಚಿವರಿದ್ದಲ್ಲೂ ಬಿಜೆಪಿ ತನ್ನದೇ ಮಂತ್ರಿಗಳನ್ನಿಟ್ಟು ಕಣ್ಣಿಟ್ಟಿತ್ತು.


ಇದು ಸಹಜವೇ ಆಗಿತ್ತು. ಏಕೆಂದರೆ ಇತರ ಎನ್‌ಡಿಎ ಪಕ್ಷಗಳ ಬಲ ಸಾಕಷ್ಟಿದ್ದು ಬಿಜೆಪಿ ತಮ್ಮ ಮಾತು ಕೇಳುವಂತೆ ಮಾಡಲು ಸಾಧ್ಯವಿದ್ದರೂ ಅವರಿಗೆ ಅಧಿಕಾರ, ಅಧಿಕಾರದೊಂದಿಗೆ ಬರುವ ಸಲತ್ತುಗಳೇ ಮುಖ್ಯವಾಗಿದ್ದವು. ಕ್ರೈಸ್ತರ ಮೇಲೆ ಧಾಳಿ, ಮುಸ್ಲಿಮರ ಹತ್ಯಾಕಾಂಡದ ಬಗ್ಗೆ ಅವರಲ್ಲಿ ಕೆಲವರು ಗೊಣಗಿಕೊಂಡರಷ್ಟೆ. ತಮ್ಮ ನಿಲುವನ್ನು ಅವರು ಸ್ಪಷ್ಟಪಡಿಸಲೇ ಇಲ್ಲ. ರಾಜಕೀಯದಲ್ಲಿ ಪರಿಚಿತ ಬುರುಡೆ ಆಸಾಮಿ ಹಾಗೂ ಎನ್‌ಡಿಎ ಯ ಸಂಯೋಜಕ, ಜಾರ್ಜ್ ಫರ್ನಾಂಡೀಸ್, ಹೀಗೆ ಯಾವುದಾದರೂ ಪಕ್ಷ ಕೋಪದ ನಟನೆಯಾಡಿದರೆ ಬಿಜೆಪಿಯ ಪರವಾಗಿ ತೊಂದರೆ ನಿವಾರಿಸುವವರಾಗಿಯೇ ಕೆಲಸ ಮಾಡಿದ್ದು. ಸ್ಟೈನ್ಸ್ ಮತ್ತು ಆತನ ಮಕ್ಕಳ ಜೀವಂತ ದಹನ ಮಾಡಿದ ಭಜರಂಗ ದಳದ ಗೂಂಡಾಗಳು ಅಮಾಯಕರು ಎಂದು ಸರ್ಟಿಫಿಕೇಟ್ ನೀಡಿದ ಈತ ಮೋದಿ ಮೂರೇ ದಿನಗಳಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತಂದರು ಎಂದು ಮೊತ್ತಮೊದಲು ಹೊಗಳಿದಾತ ಕೂಡ.


ಆದ್ದರಿಂದ ಇವರೆಲ್ಲಾ ಬಿಜೆಪಿ ಜೊತೆಗೇ ಪರಾಭವ ಉಂಡಿದ್ದರೆ ಆಶ್ಚರ್ಯವೇನು? ಆದರೂ ಈಗಲೂ ಈ ಮಿತ್ರರು ಪಾಠ ಕಲಿತಂತಿಲ್ಲ. ಬಿಜೆಪಿಯು ಎನ್‌ಡಿಎ ಅಜೆಂಡಾದಿಂದ ದೂರ ಸರಿದಿದೆಯೇ ಎಂದು ಪರಿಶೀಲಿಸುವುದಾಗಿ ಅವರು ಹೇಳುತ್ತಿದ್ದಾರೆ. ಕೊನೆಗೆ ಆರ್‌ಎಸ್‌ಎಸ್ ಹಿಂದುತ್ವಕ್ಕೆ ಅಂಟಿಕೊಳ್ಳುವಂತೆ ಬಿಜೆಪಿಗೆ ತಾಕೀತು ಮಾಡಿರುವುದು ಜಗತ್ತಿಗೇ ತಿಳಿದಿರುವಾಗ ಪರಿಶೀಲಿಸಲೇನು ಉಳಿದಿದೆ? ಬಿಹಾರ, ಝಾರ್ಖಂಡ್ ಚುನಾವಣೆಗಳು ಮುಗಿಯುವವರೆಗೆ ಮೈತ್ರಿ ಮುಂದುರೆಯುತ್ತದೆ ಎಂದು ನಿತೀಶ್ ಕುಮಾರ್ ಹೇಳಿದ್ದಾರಂತೆ. ಈಗಲೂ ದೇಶದ ಐಕ್ಯತೆಗಿಂತ ಅಧಿಕಾರವೇ ಮುಖ್ಯ! ಬಿಜೆಪಿಗೆ ಅವರ ಈ ದೌರ್ಬಲ್ಯಗಳು ತಿಳಿದಿರುವುದರಿಂದಲೇ ಅವರನ್ನು ಲೆಕ್ಕಕ್ಕೆ ತಗೊಂಡಿಲ್ಲ.

ಆಂತರಿಕ ತಿಕ್ಕಾಟ

ಬಿಜೆಪಿಯೊಳಗೂ ಇತ್ತೀಚೆಗೆ ತಿಕ್ಕಾಟಗಳು ಬೆಳೆದಂತೆ ಕಾಣುತ್ತದೆ. 'ಶಿಸ್ತಿನ ಪಕ್ಷ' ಎಂದು ಹೇಳಿಕೊಂಡಿದ್ದ ಅದು ಈಗ ಅಧಿಕಾರದಿಂದ ಹೊರಗಿದೆ. ಜತೆಗೆ [illegible] ತಾಣವೂ ಆಗಿದೆ ಎಂದು 'ಇಂಡಿಯನ್

ಪುಟ 10 ಕ್ಕೆ





ಇಡೀ ಜಗತ್ತಿನ ಕುತೂಹಲ ಕೆರಳಿಸಿದ್ದ, ಅಮೆರಿಕನ್ ಅಧ್ಯಕ್ಷೀಯ ಚುನಾವಣೆ ಮುಗಿದೆ. ಸಾಮಾನ್ಯ ನಿರೀಕ್ಷೆ ಹುಸಿಗೊಳಿಸಿ ಬುಶ್ ಪುನರಾಯ್ಕೆಯಾಗಿದ್ದಾರೆ. ಅಮೆರಿಕನ್ನರಿಗೆ ಮಾತ್ರವಲ್ಲ, ಇಡೀ ಜಗತ್ತಿಗೆ ಇದು ನಿರಾಶಾದಾಯಕ ಬೆಳವಣಿಗೆ. ಇತ್ತೀಚಿನ ಹಲವು ಪ್ರಮುಖ ದೇಶಗಳ (ಬ್ರೆಜಿಲ್, ಸ್ಪೈನ್, ಜರ್ಮನಿ) ಚುನಾವಣೆಗಳಲ್ಲಿ ಬಲಪಂಥೀಯ ಶಕ್ತಿಗಳು ಸೋತಿದ್ದು, ಅಮೆರಿಕದಲ್ಲೂ ಹಾಗೆ ಆಗಬಹುದು ಎಂಬ ನಿರೀಕ್ಷೆ ಮೂಡಿಸಿತ್ತು. ಆಸ್ಟ್ರೇಲಿಯಾದಲ್ಲೂ, ಅಮೆರಿಕದಲ್ಲೂ ಯುದ್ಧ-ಕೋರ ನಾಯಕರು ಪುನರಾಯ್ಕೆಯಾಗಿದ್ದು ಆತಂಕಕಾರಿ ಬೆಳವಣಿಗೆ. ವಿದೇಶ-ದೇಶ ಎರಡೂ ರಂಗದಲ್ಲೂ ದಾಂಧಲೆ ಮಾಡಿದ ಬುಶ್ ಗೆದ್ದಿದ್ದಾರೂ ಹೇಗೆ? ಈ ಪ್ರಶ್ನೆಗೆ ಉತ್ತರಹುಡುಕುವ ಪ್ರಯತ್ನ - ಕಳೆದ ಬಾರಿ ಹಾಗೂ ಈಗಲೂ ಆಕಸ್ಮಾತ್ತಾಗಿ ಅಧ್ಯಕ್ಷೀಯ ಚುನಾವಣಾ ಸಮಯದಲ್ಲಿ ಅಮೆರಿಕದಲ್ಲಿದ್ದ ಶರತ್‌ಚಂದ್ರರಿಂದ

ಬುಶ್ ಹೇಗಪ್ಪಾ

ಅಮೆರಿಕದ ಅಧ್ಯಕ್ಷೀಯ ಚುನಾವಣೆ ಫಲಿತಾಂಶ ನಿರಾಶೆ ತಂದಿದೆ. ಜಗತ್ತನ್ನು ಕರಾಳ ಭವಿಷ್ಯದತ್ತ ತಳ್ಳುತ್ತಿರುವ ಬುಶ್‌ಗೆ ಬುದ್ಧಿ ಕಲಿಸಲು ಇದ್ದ ಅವಕಾಶ ತಪ್ಪಿದೆ. ಇರಾಕ್ ಮೇಲೆ ಏಕಪಕ್ಷೀಯವಾಗಿ ಯುದ್ಧ ಹೂಡಿ ಅಂತರ್ರಾಷ್ಟ್ರೀಯವಾಗಿ, ಅಮೆರಿಕದ ಜನ ಸಾಮಾನ್ಯರ ಇದ್ದಬದ್ದ ಸಾಮಾಜಿಕ ಕಲ್ಯಾಣ ಯೋಜನೆಗಳನ್ನು ಕಡಿತ ಮಾಡಿ ಆಂತರಿಕವಾಗಿ ಪರಿಸ್ಥಿತಿ ಹದಗೆಡಿಸಿದ ಬುಶ್ ಗೆದ್ದಿದಾದರೂ ಹೇಗೆ?

ಭೀತಿಯ ವಾತಾವರಣ

ಇರಾಕ್ ಯುದ್ಧ ಮತ್ತು ಭಯೋತ್ಪಾದನೆ ಮುಖ್ಯ ಚುನಾವಣಾ ವಿಷಯಗಳಾಗಿದ್ದವು. ಈ ವಿಷದ ಬಗ್ಗೆ ಅಮೆರಿಕದ ಇಬ್ಭಾಗವಾಗಿತ್ತು. ಭಯೋತ್ಪಾದನೆ ಅಮೆರಿಕದ ಸಾಮ್ರಾಜ್ಯಶಾಹಿ ನೀತಿಯ ಫಲ. ಇರಾಕ್ ಯುದ್ಧ ಇನ್ನಷ್ಟು ಭಯೋತ್ಪಾದನೆ, ಅಮೆರಿಕನ್ನರಿಗೆ ಅಭದ್ರತೆ ತರುತ್ತದೆ ಎಂಬ ಬಗ್ಗೆ ದೊಡ್ಡ ಜನವಿಭಾಗ ಸ್ಪಷ್ಟ ನಿಲುವು ತಳೆದಿತ್ತು. ಆದರೆ ವಿಶ್ವ ವಾಣಿಜ್ಯ ಕೇಂದ್ರದ ಮೇಲಿನ ದಾಳಿಯ ದುರಂತ ಘಟನೆ ಬಳಸಿ, ಭಯೋತ್ಪಾದನೆ ದೇಶ ಎದುರಿಸುತ್ತಿರುವ ಅತಿದೊಡ್ಡ ಸಮಸ್ಯೆ ಎಂದು ದೊಡ್ಡ ಜನವಿಭಾಗವನ್ನು ಭಯಭೀತಗೊಳಿಸುವುದು ಬುಶ್ - ಗ್ಯಾಂಗ್‌ಗೆ ಸಾಧ್ಯವಾಯಿತು. ಸತತವಾಗಿ ಭಯೋತ್ಪಾದನೆ ದಾಳಿ ಇನ್ನೇನು ನಡೆಯುತ್ತದೆ ಎಂಬ ಭೀತಿಯ ವಾತಾವರಣವನ್ನು ಬುಶ್ - ಗ್ಯಾಂಗ್ ಸೃಷ್ಟಿಸಿತು. ಅಂತರಾಕ್ಸ್ ಭೀತಿ, ಲಾಡೆನ್‌ನ ಬೆದರಿಕೆ ಟೇಪ್‌ಗಳು - ಇವೆಲ್ಲವನ್ನು ಬುಶ್ - ಗ್ಯಾಂಗ್ ಜಾಣ್ಮೆಯಿಂದ ಬಳಸಿತು. ಕಳೆದ ಮೂರು ವರ್ಷಗಳಲ್ಲಿ ಸತತವಾಗಿ ಯುದ್ಧವನ್ನು ಸಮರ್ಥಿಸಿಕೊಳ್ಳುವ ಆಕ್ರಾಮಕ ಪ್ರಚಾರ ನಡೆಸಿತ್ತು. ಸಾಮಾಜಿಕ - ರಾಜಕೀಯ ಪ್ರಜ್ಞೆಯಲ್ಲಿ ಹಿಂದುಳಿದ ಗ್ರಾಮೀಣ ಪ್ರಜೆಗಳ ಮೇಲೆ ಇದರ ಪರಿಣಾಮ ಆಗಿದೆ. ಹುಸಿ ದೇಶಪ್ರೇಮ ಬಡಿದೆಬ್ಬಿಸುವ ಪ್ರಯತ್ನವೂ ಸತತವಾಗಿ ಸಾಗಿತ್ತು.

ಡೆಮಾಕ್ರಾಟರ ಗೊಂದಲ - ಯುದ್ಧದ ಬಗ್ಗೆ

ರಿಪಬ್ಲಿಕನ್ನರ ಈ ಆಕ್ರಾಮಕ ಪ್ರಚಾರಕ್ಕೆ ಪ್ರತಿಯಾಗಿ ಡೆಮಾಕ್ರಟರು ಯುದ್ಧ ಮತ್ತು ಭಯೋತ್ಪಾದನೆ ಬಗ್ಗೆ ಸ್ಪಷ್ಟ ನೀತಿ ಅನುಸರಿಸಲಿಲ್ಲ. ವಿಶ್ವ ವಾಣಿಜ್ಯ ಕೇಂದ್ರದ ದುರಂತದ ನಿರಂತರ ಸಮೂಹ - ಸನ್ನಿಯ ಸ್ಥಿತಿಯಲ್ಲಿ ಬುಶ್ ಸರ್ಕಾರದ ಎಲ್ಲಾ ಕ್ರಮಗಳಿಗೆ ಕುರುಡು-ಬೆಂಬಲ ನೀಡಿತ್ತು. ಡೆಮಾಕ್ರೆಟಿಕ್ ಪಕ್ಷದ ಕೆಲವು ವಿಭಾಗಗಳು ಯುದ್ಧ-ವಿರೋಧಿ ಚಳುವಳಿಯುಲ್ಲಿ ಭಾಗವಹಿಸಿದರೂ, ಇಡೀ ಪಕ್ಷ ರಿಪಬ್ಲಿಕನ್ನರ ಆಕ್ರಾಮಕ ಪ್ರಚಾರ ಎದುರಿಸುವಲ್ಲಿ ವಿಫಲವಾಯಿತು. ಚುನಾವಣೆ ಹತ್ತಿರ ಬರುವವರೆಗೆ ಮತ್ತು ಇರಾಕಿನಲ್ಲಿ ಜನತೆಯ ಪ್ರತಿರೋಧ ತಾರಕಕ್ಕೇರುವವರೆಗೆ, ಡೆಮಾಕ್ರಾಟಾಗಲಿ ಅಧ್ಯಕ್ಷೀಯ ಅಭ್ಯರ್ಥಿ ಜಾನ್ ಕೆರ್ರಿಯಾಗಲಿ ಯುದ್ಧದ ಬಗ್ಗೆ ಪ್ರತಿಭಟಿಸಲಿಲ್ಲ. ಆಮೇಲೂ ಸ್ಪಷ್ಟ ನಿಲುವು ತೆಗೆದುಕೊಳ್ಳಲಿಲ್ಲ. ಭಯೋತ್ಪಾದನೆ ವಿರುದ್ದ ಯುದ್ಧ ಸರಿಯಾಗಿ ನಡೆಸಲಿಲ್ಲ, ಇರಾಕ್ ವಿರುದ್ಧ ಯುದ್ಧ, ಭಯೋತ್ಪಾದನೆ ವಿರುದ್ಧ ಯುದ್ಧದಿಂದ ಗಮನ ಬೇರೆಡೆ ಸೆಳೆಯಿತು, ಒಸಮಾ ಬಿನ್ ಲಾಡೆನ್‌ನ್ನು ಇನ್ನೂ ಹಿಡಿಯಲಾಗಿಲ್ಲ, ಇರಾಕ್ ಯುದ್ಧದಲ್ಲಿ ಬಳಸಿತ ತಂತ್ರ ಸರಿಯಾಗಿರಲಿಲ್ಲ. ಯುರೋಪಿಯನ್ ಮಿತ್ರದೇಶಗಳ ಬೆಂಬಲಕ್ಕೆ ಕಾಯಲಿಲ್ಲ. (ಅಂದರೆ ಇರಾಕ್ ಯುದ್ಧ ಸರಿ. ಬಳಸಿದ ತಂತ್ರ ಮಾತ್ರ ಸರಿಯಲ್ಲ - ಎಂದರ್ಥವಾಯಿತಲ್ಲ) ಇಂತಹ ಗೊಂದಲದ ನಿಲುವಗಳು ಯುದ್ಧ-ವಿರೋಧಿ ಜನವಿಭಾಗವನ್ನು ಡೆಮಾಕ್ರಟರ ಪರವಾಗಿ ಪೂರ್ಣವಾಗಿ ಅಣಿ ನೆರೆಸುವಲ್ಲಿ ವಿಫಲವಾದವು.

ವಿಯೆಟ್ನಾಮ್ ಯುದ್ಧದ ಭೂತ

ಮೊದಮೊದಲು ಜಾನ್ ಕೆರ್ರಿ ತಾನು ವಿಯೆಟ್ನಾಮ್ ಯುದ್ಧದಲ್ಲಿ ಭಾಗವಹಿಸಿದ ವೀರ ಎಂದು ಕೊಚ್ಚಿಕೊಂಡಿದ್ದು ಉಂಟು. ವಿಯೆಟ್ನಾಮ್ ಹಿಂದೆ ಒಂದು ಯುದ್ಧ-ವಿರೋಧಿ ಪ್ರಚಾರದಲ್ಲಿ ತೊಡಗಿದ ಭಾಗ ಮತ್ತು ಅದರ ಮೇಲೆ ಒತ್ತು ನೀಡಲು ಕೆರ್ರಿ ನಿರಾಕರಿಸಿದ್ದು ಇನ್ನಷ್ಟು ಗೊಂದಲಕ್ಕೆ ಕಾರಣವಾಯಿತು. ಕೆರ್ರಿ ಯುದ್ಧ - ಪರವೆ? ಯುದ್ಧ-ವಿರೋಧಿಯೇ? ಅಥವಾ ಸಂದರ್ಭಸಾಧಕ ಎಡಬಿಡಂಗಿಯೇ? ಎಂಬ ರಿಪಬ್ಲಿಕನ್ನರ ದಾಳಿಗೆ ತುತ್ತಾಗಬೇಕಾಯಿತು. ಬುಶ್ ಗೆದ್ದಿದ್ದು ಜನ ಇರಾಕ್-ಯುದ್ಧ ಸರಿ ಎಂಬ ತೀರ್ಪು ಕೊಟ್ಟಿದ್ದಾರೆ ಎಂದು ಹೇಳುವುದು ಸರಿಯಾಗಲಿಕ್ಕಿಲ್ಲ. ಕೆರ್ರಿ ಸ್ಪಷ್ಟ ಯುದ್ಧ-ವಿರೋಧಿ ನಿಲುವು ತಳೆಯದಿರುವುದರಿಂದ ಆ ನಿಲುವಿಗೆ ಜನ ಬೆಂಬಲಿಸಲಿಲ್ಲ ಎಂಬುದೂ ಸರಿಯಾಗಲಿಕ್ಕಿಲ್ಲ. ರಿಪಬ್ಲಿಕನ್ನರ ಆಕ್ರಾಮಕ ಯುದ್ಧ-ಪರ ಪ್ರಚಾರಕ್ಕೆ, ಸರಿಯಾದ ಬದಲಿ ನೀತಿಯನ್ನು ಜನರ ಮುಂದೆ ಸ್ಪಷ್ಟವಾಗಿ ಇಡದಿದ್ದದ್ದು ಕಾರಣವಾಯಿತು ಎಂಬುದು ಹೆಚ್ಚು ಸರಿಯಾದಿತೇನೋ. ಡೆಮಾಕ್ರೆಟಿಕ್ ಅಭ್ಯರ್ಥಿ ಸ್ಥಾನಕ್ಕೆ ಜಾನ್ ಕೆರ್ರಿ ವಿರುದ್ಧ ಸ್ಪರ್ಧಿಸಿ (ಸೋತ) ಹೋಗಾರ್ಡ್ ಟೀನ್‌ನಂತೆ ಸ್ಪಷ್ಟ ಯುದ್ಧ-ವಿರೋಧಿ ನಿಲುವು ಜನ ವಿಭಾಗವನ್ನು ಬಡಿದೆಬ್ಬಿಸಿ ಸ್ಫೂರ್ತಿದಾಯಕವಾಗಿ ಭಾಗವಹಿಸಲು ಸಾಧ್ಯವಾಗುತ್ತಿತ್ತು. ಭಯೋತ್ಪಾದನೆ ಬಗೆಗಂತೂ ಬುಶ್ - ನೀತಿಗೆ ಪೂರ್ತಿ ಶರಣಾಗಿದ್ದರು ಡೆಮಾಕ್ರಟರು.


'ನೈತಿಕ - ಕೌಟುಂಬಿಕ ಮೌಲ್ಯಗಳು'

ಆಂತರಿಕವಾಗಿಯೂ ಅತ್ಯಂತ ಜನ - ವಿರೋಧಿ ನೀತಿಗಳನ್ನು ಅನುಸರಿಸಿದ ಬುಶ್ ಗ್ಯಾಂಗ್‌ಗೆ ಗೊತ್ತಿತ್ತು. ಯಾವುದಾದರೂ ಜನ ಮರುಳು ಮಾಡುವ ತಂತ್ರ ಬಳಸಿದ್ದರೆ, ಇಡೀ ಜನತೆ ತಿರುಗಿ ಬೀಳುತ್ತಾರೆ ಅಂತ. ಜನರ ಗಮನ ಬೇರೆಡೆ ಸೆಳೆಯುವ ಎಲ್ಲಾ ತಂತ್ರಗಳನ್ನು ಬಳಸಲು ರಿಪಬ್ಲಿಕನ್ ಪಕ್ಷ ಸಿದ್ಧವಾಗಿತ್ತು. ಬುಶ್ - ಗ್ಯಾಂಗ್ ಅಮೆರಿಕದ ಚರಿತ್ರೆಯಲ್ಲೇ ಮೊದಲ ಬಾರಿಗೆ ಎಲ್ಲಾ ರೀತಿಯ ಧಾರ್ಮಿಕ ಸಂಸ್ಥೆಗಳಿಗೆ 'ಸಾಮಾಜಿಕ ನೀತಿ' 'ದಾನ-ಧರ್ಮ'ದ ಹೆಸರಿನಲ್ಲಿ ಭಾರಿ ಹಣ ಕೊಟ್ಟಿದ್ದರು. ಆ ಮೂಲಕ ಧಾರ್ಮಿಕ ನಾಯಕರ ಬೆಂಬಲ ಗಳಿಸಿಕೊಂಡಿದ್ದ, ಧಾರ್ಮಿಕ ನಾಯಕರು ಸತತವಾಗಿ ಬುಶ್ - ನೀತಿ ಪರ ಪ್ರಚಾರ ಮಾಡುತ್ತಿದ್ದರು. ಚುನಾವಣೆ ಹತ್ತಿರ ಬರುತ್ತಿದ್ದಂತೆ ಈ ಧಾರ್ಮಿಕ ನಾಯಕರು ಬುಸ್-ಪರ ಬಹಿರಂಗ ಪ್ರಚಾರ ನಡೆಸಿದರು - ಧಾರ್ಮಿಕ ಪ್ರವಚನದ ಜತೆಗೆ. ಸಾಮಾಜಿಕ - ರಾಜಕೀಯ ಪ್ರಜ್ಞೆಯಲ್ಲಿ ಹಿಂದುಳಿದ 'ನೈತಿಕ-ಮೌಲ್ಯಗಳು' 'ಕೌಟುಂಬಿಕ ಮೌಲ್ಯಗಳು' ಎಂಬ ಹೆಸರಿನಲ್ಲಿ ಸಂಪ್ರದಾಯ ಶರಣತೆಯನ್ನು ಗಟ್ಟಿಗೊಳಿಸುವ ಪ್ರಯತ್ನ ಸತತವಾಗಿ ನಡೆದಿತ್ತು.

ಸಲಿಂಗ ವಿವಾಹದ ವಿವಾದ

ಇದಲ್ಲದೆ ಸಾಮಾಜಿಕ-ಧಾರ್ಮಿಕ ವಿಚ್ಛಿದ್ರಕಾರಕ ವಿಷಯುಗನ್ನು ಮುಂದಕ್ಕೆ ತಂದು, ನಿಜವಾದ ವಿಷಯಗಳನ್ನು ಹಿಂದಕ್ಕೆ ತಳ್ಳುವ ರಿಪಬ್ಲಿಕನ್ನರ ವ್ಯವಸ್ಥಿತ ಪ್ರಯತ್ನ ಸಫಲವಾಗಿದ್ದೂ ಇನ್ನೊಂದು ಬುಶ್ ಗೆಲುವಿಗೆ ಕಾರಣ. ಅಮೆರಿಕದ ಧಾರ್ಮಿಕ ಮೂಲಭೂತವಾದಿಗಳ ಸತತ ಪ್ರಚಾರ ಒಂದು ಕಡೆ, ಧಾರ್ಮಿಕ ನಾಯಕರುಗಳ ಪ್ರವಚನ ಇನ್ನೊಂದು ಕಡೆ. ಮಸ್ಸಾಚುಸೆಟ್ಸ್ ಎಂಬ ರಾಜ್ಯದಲ್ಲಿ ಸಲಿಂಗ (ಒಂದೇ ಲಿಂಗದ - ಅಂದರೆ ಗಂಡಸು-ಗಂಡಸು, ಹೆಂಗಸು-ಹೆಂಗಸು ನಡುವೆ) ವಿವಾಹ ಸಂವಿಧಾನಕ್ಕೆ ವಿರೋಧವಲ್ಲ ಎಂಬ ಹೈಕೋರ್ಟ್ ತೀರ್ಪು ರಿಪಬ್ಲಿಕನ್ನರಿಗೆ ಸುವರ್ಣ ಅವಕಾಶ ಒದಗಿಸಿತು. ಈ ವಿಷಯದ ಬಗ್ಗೆ ಭಾರಿ ಗದ್ದಲ ಎಬ್ಬಿಸಿ, ಈ ವಿಷಯದ ಬಗ್ಗೆ ಚುನಾವಣೆ ಜತೆ ಜನಮತ-ಸಂಗ್ರಹ ಏರ್ಪಡುವಂತೆ ಪ್ರಯತ್ನಿಸಿದರು.

11 ರಾಜ್ಯಗಳಲ್ಲಿ ಈ ಬಗ್ಗೆ ಜನಮತ ಸಂಗ್ರಹ ಏರ್ಪಡಿಸಲಾಯಿತು. ಈ ವಿವಾದಾತ್ಮಕ ವಿಷಯಗಳ ಬಗ್ಗೆ ದ್ವೈವಾರ್ಷಿಕ ಚುನಾವಣೆಗಳ ಜತೆ





ಅಮೆರಿಕಾದ ರಾಜಕೀಯದಲ್ಲೊಂದು ತಿರುವು

ಅಧ್ಯಕ್ಷ ಬುಶ್ ಪುನರಾಯ್ಕೆ, ಈ ಬಾರಿಯ ಚುನಾವಣೆಯ ಹಲವು ಸಕಾರಾತ್ಮಕ ಅಂಶಗಳನ್ನು ಮರೆ ಮಾಚಿಸಿದೆ. ಗಣನೀಯವಾಗಿ ಏರಿದ ಮತದಾನ, ದೇಶವನ್ನು ಇಬ್ಭಾಗ ಮಾಡಿದ ಬಿರುಸಿನ ರಾಜಕೀಯ ಚರ್ಚೆ, ಜನ-ಪರ ಆರ್ಥಿಕ - ರಾಜಕೀಯ ನೀತಿಗಳ ಬಗ್ಗೆ ಯುದ್ಧ - ಭಯೋತ್ಪಾದನೆ ಬಗ್ಗೆ ಡೆಮಾಕ್ರಟರ ಪ್ರಗತಿಪರ ನಿಲುವು, ಇವು ಈ ಚುನಾವಣೆಯ ಸಕಾರಾತ್ಮಕ ಅಂಶಗಳು. ಇವು ಅಮೆರಿಕದ ರಾಜಕೀಯದಲ್ಲೊಂದು ಗಮನಾರ್ಹ ತಿರುವು ತಂದಿದೆ. ಇವು ಮುಂದೆಯೂ ಪ್ರಭಾವ ಬೀರಬಹುದು ಎಂಬ ಆಶಾಭಾವನೆ ಹುಟ್ಟಿಸಿದೆ.

ಈ ಬಾರಿಯ ಚುನಾವಣೆಗಳಲ್ಲಿ ಮತದಾನ ಶೇಕಡಾ 10-11 ರಷ್ಟು ಏರಿತ್ತು. ಅಮೆರಿಕದ ಚರಿತ್ರೆಯಲ್ಲೇ ಇದು ಭಾರಿ ಹೆಚ್ಚಳ. ಹಲವು ಸ್ವಯಂ-ಸೇವಾ ಸಂಘಟನೆಗಳು ಮತದಾನಕ್ಕೆ ರಿಜಿಸ್ಟರ್ ಮಾಡಲು, ಮತದಾನ ಮಾಡಲು ಭಾರಿ ಪ್ರಚಾರ ನಡೆಸಿದವು. ಇದರಲ್ಲಿ ಎಂಟಿವಿ ಯುವಕರಲ್ಲಿ, ಕರಿಯರ ಸಂಘಟನೆಗಳು ನಡೆಸಿದ ಪ್ರಚಾರ ಗಮನಾರ್ಹ. ಯುವಕರಲ್ಲಿ ಕರಿಯರಲ್ಲಿ, ಬಡವರಲ್ಲಿ ಮತದಾನ ಹೆಚ್ಚಿದ ಬಗ್ಗೆ ವರದಿಗಳು ಬಂದಿವೆ.

ಹಿಂದೆಂದೂ ನಡೆಯದ ಬಿರುಸಿನ ರಾಜಕೀಯ ಚರ್ಚೆ ನಡೆಯಿತು. ಈ ಬಾರಿಯ ಚುನಾವಣೆಗಳಲ್ಲಿ - ಆಫೀಸುಗಳಲ್ಲಿ, ಕಾಲೋನಿಗಳಲ್ಲಿ, ಬಾರುಗಳಲ್ಲಿ, ಬಸ್ಸು-ಟ್ರೈನುಗಳಲ್ಲಿ ಎಲ್ಲಾ ವಿಷಯಗಳ ಬಗ್ಗೆ, ಇಬ್ಬರೂ ಅಭ್ಯರ್ಥಿಗಳ ನಿಲುವುಗಳ ಬಗ್ಗೆ ತೀವ್ರ ಚರ್ಚೆ ನಡೆಯಿತು. ಇಡಿ ದೇಶವನ್ನು ಈ ಚರ್ಚೆಗಳು ಇಬ್ಭಾಗ ಮಾಡಿದವು ಎಂದು ಹಲವರು ಹಲುಬಿದರು.

ಇದಲ್ಲದೆ ರಾಜಕೀಯ ಚರ್ಚೆಗಳ ವಿಷಯಗಳಲ್ಲಿ ಗುಣಾತ್ಮಕ ಬದಲಾವಣೆಗಳಾದವು. ನಿರುದ್ಯೋಗ, ದೈತ್ಯ ಕಂಪನಿಗಳ ಭ್ರಷ್ಟಾಚಾರ, ಭ್ರಷ್ಟ ಕಂಪನಿಗಳಿಗೆ ಸರ್ಕಾರದ ಸಬ್ಸಿಡಿ, ಇರಾಕ್ ಯುದ್ಧದಲ್ಲಿ ಭ್ರಷ್ಟಾಚಾರ, ಉದ್ಯೋಗದ ನಾಶ, ಸರ್ಕಾರದ ಬೇಜವಾಬ್ದಾರಿ, ವಿಘಟನೆಗಳು, ಸಾಮಾಜಿಕ ಭದ್ರತೆ-ಮೆಡಿಕೇರ್ ಯೋಜನೆಗಳಲ್ಲಿ ಕಡಿತ, ಜಗತ್ತಿನ ಜನಸಾಮಾನ್ಯರಲ್ಲಿ ಅಮೆರಿಕನ್ನರ ಬಗ್ಗೆ ಇರುವ ಕೋಪಕ್ಕೆ ಕಾರಣ ಪರಿಸರ ಹಾನಿ, ಇಂತಹ ವಿಷಯಗಳು ತೀವ್ರ ಚರ್ಚೆಗೊಳಗಾದವು. ರಿಪಬ್ಲಿಕನ್ನರು 'ನೈತಿಕ - ಧಾರ್ಮಿಕ ಮೌಲ್ಯ'ಗಳ ಬಗ್ಗೆ ಚರ್ಚೆ ಮುಂದೆ ತಂದರೂ, ಈ ವಿಷಯಗಳ ಬಗ್ಗೆ ತಡೆಯಲು ಸಾಧ್ಯವಾಗಲಿಲ್ಲ. ಇದು ಅಮೆರಿಕದ ಪ್ರಜಾಸತ್ತೆಯ ಭವಿಷ್ಯಕ್ಕೆ ಆಶಾದಾಯಕ.

ಡೆಮಾಕ್ರಟರು ಇಂತಹ ಹಲವು ಜನ-ಪರ ವಿಷಯಗಳ ಬಗ್ಗೆ ಚರ್ಚೆ ಎತ್ತಿದರು. ರಿಪಬ್ಲಿಕನ್ನರ ಜನ-ವಿರೋಧಿ ನೀತಿಗಳನ್ನು ಬಯಲಿಗೆಳೆದರು. ಇದರಲ್ಲಿ ಹಲವು ವಿಷಯಗಳಲ್ಲಿ ಜನ-ಪರ ನೀತಿ, ಯೋಜನೆಗಳನ್ನು ಮುಂದಿಟ್ಟರು ಎನ್ನುವುದು ಅಷ್ಟೇ ಗಮನಾರ್ಹ ಸಂಗತಿ. ಯುದ್ಧ - ಭಯೋತ್ಪಾದನೆ ಬಗೆಗೂ ಅತ್ಯಂತ ಸಮಾಧಾನಕರವಲ್ಲದಿದ್ದರೂ ಸರ್ಕಾರ ನೀತಿಗಳನ್ನು ಕುರುಡಾಗಿ ಒಪ್ಪಿಕೊಳ್ಳದಿರುವ ಧೈರ್ಯ ತೋರಿದರು. ಡೆಮಾಕ್ರಾಟಿಕ್ ಪಕ್ಷದ ಕೆಲವು ವಿಭಾಗಗಳಾದರೂ ಈ ಚರ್ಚೆನಿಲುವುಗಳನ್ನು ಮುಂದಕ್ಕೆ ಒಯ್ಯುವ ಭರವಸೆ ಹುಟ್ಟಿಸಿವೆ.

ಮತ ಸಂಗ್ರಹಕ್ಕೆ ಅಮೆರಿಕದ ಸಂವಿದಾನದಲ್ಲಿ ಕಾಶ ಇದೆ. ಸ್ವಾಭಿವಾಕವಾಗಿಯೇ ಈ ್ಯಗಳಲ್ಲಿ (ಮಾತ್ರವಲ್ಲ ಇಡೀ ದೇಶದಲ್ಲಿ) ಈ ಪ್ರಕಾರಿ - ವಿವಾದಾತ್ಮಕ 'ನೈತಿಕ ಮೌಲ್ಯ'ಗಳ ಚರ್ಚೆ, ಯುದ್ಧ-ಆರ್ಥಿಕ-ಸಾಮಾಜಿಕ ಗಳ ಬಗೆಗಿನ ಹೆಚ್ಚಿನ ಮಹತ್ವದ ಚರ್ಚೆಯನ್ನು ವೆ ಸಂಭಾವಲ್ಲಿ ಸಫಲವಾಯಿತು. ಗರ್ಭಪಾತ, ಲುಗಳಲ್ಲಿ ಧಾರ್ಮಿಕ-ಪ್ರಾರ್ಥನೆ, ಬೈಬಲ್ - ಇವೆಲ್ಲಾ ಈ ಚರ್ಚೆಯಲ್ಲಿ ಸೇರಿಕೊಂಡವು. ವಿವಾದ ಬಳಸಿ ಸಂಪ್ರದಾಯ ಶರಣರನ್ನು ಮಾನ್ಯವಾಗಿ ಮತ್ತೇರುವ ಮಾದಕ) ಮತಗಟ್ಟೆಗೆ ಲು ರಿಪಬ್ಲಿಕರನ್ನರು ಪೂರ್ಣವಾಗಿ ಬಳಸಿದರು. ಬ್ಲಿಕನ್ ಧಾರ್ಮಿಕ ನಾಯಕರು ಇದರಲ್ಲಿ ರ್ಣವಾಗಿ ಸಹಕರಿಸಿದರು. ಚುನಾವಣೆ ರದ ಜನಾಭಿಪ್ರಾಯ ಸಂಗ್ರಹದಲ್ಲಿ ಶೇಕಡಾ ಜನ ತಮಗೆ 'ನೈತಿಕ ಮೌಲ್ಯಗಳು' ಾವಣೆಯಲ್ಲಿ ಪ್ರಥಮ ಆದ್ಯತೆ ವಿಷಯ

ದ್ದಿದ್ದು?

ದರಂತೆ. 'ಯುದ್ಧ' , 'ಸಾಮಾಜಿಕ-ಆರ್ಥಿಕ ಗಳು' ಇತ್ಯಾದಿಗಳು 'ನೈತಿಕ ಮೌಲ್ಯ' ಕ್ಕಿಂತ ಮ ಮತ ಗಳಿಸಿದವು. 'ನೈತಿಕ ಮೌಲ್ಯ' ಗಳು ಮ ಆದ್ಯತೆ ಎಂದವರಲ್ಲಿ ಶೇಕಡಾ 78 ಜನ ್‌ಗೆ ಮತ ಚಲಾಯಿಸಿದರಂತೆ.

ಡವರೇ - ಕರಿಯರೇ ಮತದಾನ ಾಡಬೇಡಿ'!

ಅಭಿವೃದ್ಧ ದೇಶಗಳಲ್ಲೇ ಅತ್ಯಂತ ಕಡಿಮೆ ತದಾನ ಇರುವ ದೇಶ ಅಮೆರಿಕಾ.

'ದೇವರು ನನ್ನ ಹತ್ರ ಮಾತಾಡ್ತಾನೆ ಎನ್ನುವವನು ಹುಚ್ಚನಿರಬೇಕು'

ಟ್ಯಾಕ್ಸಿ ಡ್ರೈವರನ ಜತೆಗೊಂದು ಸಂದರ್ಶನ ುನಾವಣೆ ಮೊದಲು

ನೀವು ಯಾರಿಗೆ ವೋಟು ಹಾಕುತ್ತೀರಿ?

- ಜಾನ್ ಕೆರ್ರಿಗೆ, ಬುಶ್ ಸೋಲಿಸದಿದ್ದರೆ ಈ ದೇಶ ಉಳಿಯುವುದಿಲ್ಲ.

ಡೆಮಾಕ್ರಟಿಕರಿಗೂ, ರಿಪಬ್ಲಿಕನ್ನರಿಗೂ ಚುನಾವಣೆ ನಂತರ ಏನೂ ವ್ಯತ್ಯಾಸವಿರುವುದಿಲ್ಲ ಅಲ್ಲವೇ?

- ಹಿಂದೆ ಇದು ನಿಜವಾಗಿತ್ತು. ಆದರೆ ಇಂದು ನಿಜವಲ್ಲ. ಎರಡೂ ಪಕ್ಷಗಳ ನಡುವೆ ಭಾರಿ ವ್ಯತ್ಯಾಸ ಇದೆ.

ಜಾನ್ ಕೆರ್ರಿ ಗೆಲ್ಲುತ್ತಾರೆ ಎಂದು ನಿಮಗೆ ಭರವಸೆ ಇದೆಯ?

- ಈ ದೇಶಕ್ಕಿರುವ ಒಂದೇ ಆಸೆ. ಬುಶ್ ಗೆದ್ದರೆ ಈ ದೇಶದಲ್ಲಿ ಭಾರಿ ಏರುಪೇರು ಆಗುತ್ತದೆ.

ನೀವು ಏಕೆ ಬುಶ್‌ಗೆ ವಿರುದ್ಧ

- ಆತನ ಆಂತರಿಕವಾಗಲಿ, ವಿದೇಶಿ ನೀತಿಯಾಗಲೀ ಯಾವುದೂ ಸರಿ ಇಲ್ಲ. ಧಾರ್ಮಿಕ ಮರುಳುಗಳ ಮೂಲಕ ಆತ ಆಳುತ್ತಿದ್ದಾನೆ.

ಬುಶ್ ಧಾರ್ಮಿಕ ವ್ಯಕ್ತಿಯೇ?

- ಧಾರ್ಮಿಕ ಎಲ್ಲಾ ಸೇಗು, ನಿಜವಾದ ಸಮಸ್ಯೆಗಳನ್ನು ಮರೆ ಮಾಚುವ ಪ್ರಯತ್ನ. ನಾನೂ ಧಾರ್ಮಿಕ ಮನುಷ್ಯನೇ, ಆದರೆ ನನ್ನ ಪ್ರಕಾರ - 'ದೇವರು ನನ್ನ ಹತ್ರ ಮಾತಾಡ್ತಾನೆ' ಎನ್ನುವವ ಹುಚ್ಚನಿರಬೇಕು.

ವಿಚಿತ್ರ ಚುನಾವಣಾ ವ್ಯವಸ್ಥೆ

ಅಮೆರಿಕದ ಅಧ್ಯಕ್ಷೀಯ ಚುನಾವಣೆ ನೇರ ಚುನಾವಣೆ ಎಂಬುದು ಹೆಸರಿಗೆ ಮಾತ್ರ. ಕಳೆದ ಬಾರಿ ಆದಂತೆ ಒಟ್ಟು ಮತ ಕಡಿಮೆ ಬಂದರೂ ಒಬ್ಬ ಅಭ್ಯರ್ಥಿ ಗೆಲ್ಲಬಹುದು. ಅಮೆರಿಕದ 50 ಕ್ಕೂ ಹೆಚ್ಚು ರಾಜ್ಯಗಳಿಗೆ ಅದರ ಜನಸಂಖ್ಯೆ ಅನುಗುಣವಾಗಿ ನಿರ್ದಿಷ್ಟ ಮತಗಳಿವೆ. ಆ ರಾಜ್ಯದಲ್ಲಿ ಬಹುಮತ ಪಡೆಯುವ ಅಭ್ಯರ್ಥಿಗೆ ಆ ಎಲ್ಲಾ ಮತಗಳು ಸಿಗುತ್ತವೆ. ಉದಾಹರಣೆಗೆ ಫ್ಲಾರಿಡಾ ಒಂದು ರಾಜ್ಯ. ಅಲ್ಲಿ ಬಹುಮತ ಪಡೆದ ಅಭ್ಯರ್ಥಿಗೆ 27 ಮತಗಳೂ ಬರುತ್ತವೆ. ಫ್ಲಾರಿಡಾದಲ್ಲಿ ಬುಶ್‌ಗೆ ಬಹುಮತ ಬಂತು. ಫ್ಲಾರಿಡಾದಲ್ಲಿ ಡೆಮಾಕ್ರಟಿಕ್ ಮತಕ್ಕೆ ಯಾವ ಬೆಲೆಯೂ ಇಲ್ಲ ಎಂದು ಇದರರ್ಥ. ಪ್ರತಿರಾಜ್ಯದಲ್ಲಿ ಒಂದು ಪಕ್ಷ ಬಲವಾಗಿದ್ದರೆ, ಈ ವ್ಯವಸ್ಥೆಯಾಗಿ ವಿರೋಧಿ ಮತದಾರರು ಓಟು ಮಾಡಲು ಹೋಗುವುದಿಲ್ಲ. ಅದಕ್ಕೆ ಬೆಲೆ ಇಲ್ಲ ಅಂತ ಅವರಿಗೆ ಗೊತ್ತು.

ಶ್ರೀಮಂತರು, ಮಧ್ಯಮವರ್ಗಗಳು ಮತ ಚಲಾಯಿಸುವ, ಬಡವರು ಮತ-ಚಲಾಯಿಸುವ ಗೊಡವೆಗೆ ಹೋಗದಿರುವ ದೇಶ ಇದು. ಮತ ಚಲಾಯಿಸಲು ಮತದಾರರಾಗಿ ರಿಜಿಸ್ಟರ್ ಮಾಡಬೇಕು. ಮತದಾರ ರಿಜಿಸ್ಟರ್ ಮಾಡಿದ ಬಗ್ಗೆ ರಾಜಕೀಯ ಪಕ್ಷಗಳು ಸೇರಿದಂತೆ, ಯಾರಾದರೂ ಪ್ರಶ್ನಿಸಬಹುದು. ಇದನ್ನು ಬಳಸಿ ರಿಪಬ್ಲಿಕನ್ ಪಕ್ಷ ದೊಡ್ಡ ರೀತಿಯಲ್ಲಿ ಡೆಮಾಕ್ರಟಿಕ್ ಮತದಾರರು ರಿಜಿಸ್ಟರ್ ಮಾಡದಂತೆ ತಡೆಯಿತು. ಕಲಿಯರು - ಬಡವರು ಬಹುಸಂಖ್ಯಾತರಿರುವ ಪ್ರದೇಶಗಳಲ್ಲಿ ರಿಪಬ್ಲಿಕನ್ ವಕೀಲರು ಮತದಾರ ರಿಜಿಸ್ಟರ್ ಬಗ್ಗೆ ಕಾನೂನು ಸಮರ ಹೂಡಿದರು. ಈ ಕಾನೂನು ಪ್ರಕ್ರಿಯೆ ದೀರ್ಘ ಸಮಯ ತೆಗೆದುಕೊಳ್ಳು ವುದರಿಂದ, ಲಕ್ಷಾಂತರ ಬಡವರು - ಕರಿಯರು ಮತದಾನದಿಂದ ವಂಚಿತರಾದರು. ಈ ಸಮಸ್ಯೆ ಎಷ್ಟು ಗಂಭೀರವಾಗಿತ್ತೆಂದರೆ ನ್ಯೂಯಾರ್ಕ್ ಟೈಮ್ಸ್ ಸಂಪಾದಕೀಯವೊಂದರಲ್ಲಿ 'ರಿಪಬ್ಲಿಕನ್ನರು' ಬಡವರೇ, ಕರಿಯರೇ, ಮತದಾನ ಮಾಡಬೇಡಿ' ಎಂದು ಹೇಳುತ್ತಿದ್ದಾರೆ, ಇದು ಸಲ್ಲ' ಎಂದು ಹೇಳಿತು. ಇದಲ್ಲದೆ ರಿಪಬ್ಲಿಕನ್ ಆಳ್ವಿಕೆಯ ರಾಜ್ಯಗಳಲ್ಲಿ (2000 ಚುನಾವಣಗಳಲ್ಲಿ ಇದ್ದಂತೆ ಫ್ಲಾರಿಡಾದಲ್ಲಿ ಆದ ಪ್ರಮಾಣದಲ್ಲಿ ಅಲ್ಲದಿದ್ದರೂ) ಇಂತಹ ಹಲವು ರೀತಿಯ ಚುನಾವಣಾ ಅಕ್ರಮಗಳು ನಡೆದವು. ಡೆಮಾಕ್ರಟರು ಈ ಬಾರಿ ಜನ-ಪರ ಆರ್ಥಿಕ - ಸಾಮಾಜಿಕ ನೀತಿಗಳ ಬಗ್ಗೆ ಭಾರಿ ಪ್ರಚಾರ - ಪ್ರಕ್ಷೋಭೆ ನಡೆಸಿದರೂ, ಆ ಬಗ್ಗೆ ದೊಡ್ಡ ಸಂಖ್ಯೆಯಲ್ಲಿ ಕರಿಯರು-ಬಡವರಲ್ಲಿ ಸ್ಫೂರ್ತಿ ತುಂಬಿ ಮತಗಟ್ಟೆಗೆ ತರುವುದು ಸಾಧ್ಯವಾಗಲಿಲ್ಲ. ಸಾಮಾಜಿಕ - ಭದ್ರತೆ, ಮೆಡಿಕೇರ್‌ಗಳಲ್ಲಿ ಕಡಿತ, ದೈತ್ಯ ಕಂಪನಿಗಳ ಲೂಟಿಗೆ ಬೆಂಬಲ - ಮುಂತಾದ ಅಧ್ಯಕ್ಷ ಬುಶ್ ಸರ್ಕಾರದ ಕ್ರಮಗಳಿಗೆ ಪಾರ್ಲಿಮೆಂಟಿನಲ್ಲಿ ಕುರುಡು ಬೆಂಬಲ ನೀಡಿ ಚುನಾವಣೆ ಸಮಯದಲ್ಲಿ ಗದ್ದಲ ಮಾಡುವುದು ಸ್ವಾಭಾವಿಕವಾಗಿಯೇ ಜನರಲ್ಲಿ ಆಸಕ್ತಿ ಹುಟ್ಟಿಸಲಿಲ್ಲ. ಈ ಬಾರಿಯೂ 'ಶ್ರೀಮಂತರ ಪ್ರಜಾಸತ್ತೆ' 'ಕತ್ತೆ-ಆನೆ ರಾಜಕಿಯ'ದಲ್ಲಿ ತಮಗೆ ಸ್ಥಾನ ಇದೆ ಎಂದು ಬಹುಸಂಖ್ಯಾತ ಬಡವರು - ಕರಿಯರಿಗೆ ಅನ್ನಿಸಲಿಲ್ಲ.

ಇದರರ್ಥ ಬುಶ್ ಈ ತಂತ್ರಗಳ ಮೂಲಕ ಬಹುಮತ ಸಾಧಿಸಿದರು ಎಂದಲ್ಲ. ಬದಲಾಗಿ ಈ ತಂತ್ರಗಳಿಂದ ಜಾನ್ ಕೆರ್ರಿ ಪರವಾಗಿದ್ದ ಶೇಕಡಾ 2-3 ಜನರನ್ನು ತಮ್ಮ ಕಡೆ ವಾಲಿಸಲು ಅಥವಾ ಅಲಿಪ್ತರಾಗಿಸಲು ಸಾಧ್ಯವಾಯಿತು. ಇದರಿಂದಾಗಿ ಬುಶ್ ಗೆಲ್ಲುವುದು ಸಾಧ್ಯವಾಯಿತು. ○

ದೇವರು ಯುದ್ಧಕ್ಕೆ ವಿರೋಧವಿಲ್ಲ!



ದೇವರು ತಮ್ಮನ್ನು ತಾವು ರಕ್ಷಿಸಿಕೊಳ್ಳದಿರುವವರನ್ನು ರಕ್ಷಿಸುವುದಿಲ್ಲ. ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಯುದ್ಧ ಅಗತ್ಯವಾದರೆ ಅದನ್ನು ಮಾಡಬೇಕು. ಇಂತಹ ಯುದ್ಧಕ್ಕೆ ದೇವರ ವಿರೋಧವಿಲ್ಲ. ಅದನ್ನೇ ಬೈಬಲ್ ಹೇಳುತ್ತದೆ. ಬರುವ ಚುನಾವಣೆಗಳಲ್ಲಿ ದೇಶಕ್ಕೆ ಬಂದಿರುವ ಅಪಾಯ ಹೋಗಲಾಡಿಸಲು ಯುದ್ಧಕ್ಕೂ ತಯಾರಿರುವವರಿಗೆ ಮತ ಕೊಡಿ....'


ಧಾರ್ಮಿಕ ಟಿ.ವಿ. ಚಾನಲ್ ಒಂದರಲ್ಲಿ

ಧಾರ್ಮಿಕ - ರಾಜಕೀಯ ಒಂದು ಸ್ಯಾಂಪಲ್

ಭಾರತ ಅಮೇರಿಕ ಸಂಬಂಧ : ಸಮಾನತೆಗೆ ಸರಿ ಗುಲಾಮತನಕ್ಕೆ ದೂರವಿರಿ

ಜಾರ್ಜ್ ಡಬ್ಲ್ಯು ಬುಷ್ ಮತ್ತೊಮ್ಮೆ ಅಮೇರಿಕದ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಭಾರತದ ಕೆಲವು ಜನವಿಭಾಗಕ್ಕೆ ಹರ್ಷ ತಂದಿದೆ. ಅಮೇರಿಕವು ವಿಶ್ವದಲ್ಲಿಂದು ಒಂದು ಬಲಿಷ್ಠ ಶಕ್ತಿ ಆಗಿರುವುದರಿಂದ ಅದರ ಜತೆಯಲ್ಲಿ ಹತ್ತಿರದ ಸಂಬಂಧವನ್ನು ಹೊಂದಬೇಕೆಂಬ ಮಾತು ಕೆಲವು ವಿಭಾಗಗಳಿಂದ ಬರುತ್ತದೆ. ಒಂದೊಮ್ಮೆ ಯುಪಿಎ ಸರ್ಕಾರವೇನಾದರೂ ತನ್ನ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ವಿದೇಶಾಂಗ ನೀತಿಗೆ ವಿರುದ್ಧವೇನಾದರೂ ತೀರ್ಮಾನ ಕೈಗೊಡಿದ್ದೇ ಆದರೆ ಅದು ದೇಶಕ್ಕೆ ವಿಪತ್ತನ್ನು ತರುತ್ತದೆ.

ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಈ ರೀತಿ ಹೇಳುತ್ತದೆ "ವಿಶ್ವದೆಲ್ಲೆಡೆ ಸಂಬಂಧಗಳನ್ನು ಹೊಂದುವಾಗ ಬಹುಧ್ರುವೀಯ ನೋಟಕ್ಕೆ ಹೆಚ್ಚು ಒತ್ತು ಕೊಡುವಂಥ ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಬೇಕು ಮತ್ತು ಎಲ್ಲಾ ರೀತಿಯ ಏಕಪಕ್ಷೀಯತೆಯನ್ನು ವಿರೋಧಿಸ ಬೇಕು" ಅಮೇರಿಕದ ಚುನಾವಣಾ ನಂತರದ ಕಾಲದಲ್ಲಿ ಈ ಉದ್ದೇಶವನ್ನು ಗಮನದಲ್ಲಿಡಬೇಕು. ಅಮೇರಿಕದ ಚುನಾವಣಾ ಫಲಿತಾಂಶ ಏನನ್ನು ಸೂಚಿಸುತ್ತದೆ?



ಕಳೆದ ನಾಲ್ಕು ವರ್ಷಗಳಿಂದ, ಅದರಲ್ಲೂ ಸೆಪ್ಟೆಂಬರ್‌ರ ನಂತರ, ಅಮೇರಿಕವು ವಿಶ್ವದಾದ್ಯಂತ ತನ್ನ ಯಜಮಾನಿಕೆ ಮೆರೆಯಲು ಆಕ್ರಮಣಕಾರಿ ಧೋರಣೆಯನ್ನು ಅನುಸರಿಸುತ್ತಿದೆ. ತಾನೇ ದೊಡ್ಡಣ್ಣ ಮತ್ತು ತನ್ನ ಮಾತೇ ಕೊನೆ ಎಂಬ ಬುಷ್‌ನ ತತ್ವವು, ಒಂದು ಸಾರ್ವಭೌಮ ರಾಷ್ಟ್ರದ ಮೇಲೆ ಸೇನಾ ಕಾರ್ಯಾಚರಣೆ ನಡೆಸುವ ಹಕ್ಕನ್ನು ಅಮೇರಿಕಕ್ಕೆ ಕೊಟ್ಟಂತಾಗುತ್ತದೆ. ಅದಕ್ಕೆ ಒಂದೇ ಒಂದು ಕಾರಣವೇನೆಂದರೆ ಅದು ಹೊಂದಿರುವ ಬೆದರಿಕೆಯ ಕಲ್ಪನೆ. ಇರಾಕಿನಲ್ಲಿ ಅಮರೀಕ ನಡೆಸಿದ ಆಕ್ರಮಣಕಾರಿ ಯುದ್ಧ ಮತ್ತು ಇರಾಕನ್ನು ವಶಪಡಿಸಿಕೊಂಡಿರುವುದನ್ನು ನಮ್ಮ ಸಂಸತ್ತು ಒಕ್ಕೊರಲಿನಿಂದ ಖಂಡಿಸಿದೆ. "ದುಷ್ಟಶಕ್ತಿಗಳು" ಎಂದು ಅಮೇರಿಕ ಹಲವಾರು ದೇಶಗಳನ್ನು ಗುರುತಿಸಿ ಆ ದೇಶಗಳನ್ನು ದಾರಿಗೆ ತರಬೇಕೆಂದು ಬಯಸುತ್ತಿದೆ. ಬುಷ್‌ನ ಮರು ಆಯ್ಕೆ ಅಂತಹ ಒಂದು ನೀತಿಗೆ ಕುಮ್ಮಕ್ಕು ನೀಡಿದಂತಾಗಿದೆ. ಇದರ ಬಗ್ಗೆ ಭಾರತವು ಎಚ್ಚರದಿಂದಿರಬೇಕು.

ಶೀತಲ ಯುದ್ಧದ ಎರಡು ಧ್ರುವ ವ್ಯವಸ್ಥೆಯ ಬದಲು ಬಹುಧ್ರುವ ನೀತಿಯತ್ತ ವಿಶ್ವ ಮುಂದುವರಿಯಬೇಕು ಎಂಬ ಅಂತರಾಷ್ಟ್ರೀಯ ಬೆಳವಣಿಗೆ ವಿರುದ್ಧವಾಗಿ ಅಮೇರಿಕ ಆಕ್ರಮಣಕಾರಿ ನೀತಿ ಇದೆ. ಈ ಪ್ರವೃತ್ತಿಯಲ್ಲಿ ತಿರುಚಿಹಾಕಲು ಅಮೇರಿಕ ಹವಣಿಸುತ್ತಿದೆ ಮತ್ತು ಜಾಗತಿಕ ಯಜಮಾನ್ಯ ಸ್ಥಾಪಿಸಿ ಏಕ ಧ್ರುವದತ್ತ ಹೋಗಲು ಅಮೇರಿಕ ಪ್ರಯತ್ನ ಮಾಡುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ, ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ನೆನಪಿಸಿಕೊಳ್ಳುವುದು ಒಳ್ಳೆಯದು. ಅದು ಈ ರೀತಿ ಹೇಳಿದೆ ಅಮರೀಕಾದೊಂದಿಗಿನ ಸಂಬಂಧವನ್ನು ಮತ್ತು ಹತ್ತಿರದ ವ್ಯವಹಾರ ನಡೆಸುವಾಗ್ಯಲೇ, ಬೇರೆಲ್ಲ ಪ್ರಾದೇಶಿಕ ಹಾಗೂ ಜಾಗತಿಕ ವಿಷಯಗಳ ಬಗೆಗಿನ ಭಾರತದ ಸ್ವತಂತ್ರ ವಿದೇಶಾಂಗ ನೀತಿಯನ್ನು ಗಮನದಲ್ಲಿಡಬೇಕು.

ತತ್ವಶಃ ಈ ನೀತಿಗೆ ಭಾರತ ಸರ್ಕಾರ ಬದ್ಧವಾಗಿರಬೇಕು. ಆರ್ಥಿಕ ನೀತಿಗಳ ವಿಚಾರದಲ್ಲಿ ಕೂಡ, ಬುಷ್‌ನ ಈ ಮರು ಆಯ್ಕೆ, ಅಭಿವೃದ್ಧಿಶೀಲ ದೇಶಗಳ ಮೇಲೆ ಒತ್ತಡತರಲು ಅಂತರ್ರಾಷ್ಟ್ರೀಯ ವೇದಿಕೆಗಳನ್ನು ಅಮೇರಿಕ ಬಳಸುವ ಎಲ್ಲಾ ಸಾಧ್ಯತೆಗಳನ್ನು ಹೆಚ್ಚಿಸಿದೆ. ಈಗಾಗಲೇ ವಿಶ ್ವವ್ಯಾಪಾರ ಸಂಸ್ಥೆ (WTO) ಜತೆಗಿನ ಮಾತುಕತೆಗಳಲ್ಲಾಗುತ್ತಿರುವಂತೆ, ಬಹುರಾಷ್ಟ್ರೀಯ ಕಂಪನಿಗಳ ಸುಲಿಗೆಗೆ ಅಭಿವೃದ್ಧಿಶೀಲ ದೇಶಗಳ ಆರ್ಥಿಕತೆಯನ್ನು ತೆರೆಯಬೇಕೆಂಬ ಒತ್ತಡಗಳು ಹೆಚ್ಚಾಗಲಿವೆ. ಅಭಿವೃದ್ಧಿಶೀಲ ದೇಶಗಳ ಐಕ್ಯ ಪ್ರತಿಭಟನೆ ಮತ್ತು ಪ್ರತಿರೋಧಕ್ಕೆ ಭಾರತವು ತನ್ನ ಪ್ರಯತ್ನವನ್ನು ಗಟ್ಟಿಗೊಳಿಸಬೇಕು. ಅಭಿವೃದ್ಧಿಶೀಲ ದೇಶಗಳ ಸ್ವತಂತ್ರ ಸಾರ್ವಭೌಮ ಆರ್ಥಿಕತೆಯನ್ನು ರಕ್ಷಿಸಲು ಜಿ-20 ಮತ್ತಿತರ ವೇದಿಕೆಗಳನ್ನು ಬಲಪಡಿಸಿ ಬಳಸಬೇಕು. ವಾಸ್ತವದಲ್ಲಿ, ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಏನು ಹೇಳುತ್ತದೆಂದರೆ, ವಿಶ್ವವ್ಯಾಪಾರ ಸಂಸ್ಥೆಯಲ್ಲಿ ಜಿ-20ಯ ಮೂಲಕ ಅಭಿವೃದ್ಧಿಶೀಲ ದೇಶಗಳ ಸಮನ್ವಯವನ್ನು ಗಟ್ಟಿಗೊಳಿಸಲು ಯುಪಿಎ ಸರಕಾರವು ನಾಯಕತ್ವದ ಪಾತ್ರವನ್ನು ವಹಿಸುತ್ತದೆ.

ಭಾರತ ಅಮೇರಿಕ ಬಾಂಧವ್ಯವು ಪರಸ್ಪರ ಹಿತಾಸಕ್ತಿ, ಗೌರವ ಮತ್ತು ಸಮಾನತೆಯ ಆಧಾರದಲ್ಲಿ ರೂಪುಗೊಳ್ಳಬೇಕು. ಅಮೇರಿಕದ ಒತ್ತಡಕ್ಕೆ ಮೌನಾನುಮತಿ ನೀಡುವ ಅಥವಾ ಅದಕ್ಕೆ ತಲೆಬಾಗುವ ಧೋರಣೆಯಿಂದ ಬಾಂಧವ್ಯ ಹೊಂದಿರಬಾರದು. ಅದು ಸಾಧ್ಯವಾಗುವುದು ಒಂದು ಸ್ವತಂತ್ರ ವಿದೇಶಾಂಗ ನೀತಿಯಿಂದ ಮಾತ್ರ.

(ಐಎನ್ಎನ್)

ಜನಾದೇಶಕ್ಕೆ ಅನುಗುಣವಾಗಿ ನಡೆಯಿರಿ

ಯುಪಿಎ ಸರ್ಕಾರಕ್ಕೆ ಸಿಪಿಐ(ಎಂ) ಆಗ್ರಹ

ಅಕ್ಟೋಬರ್ 29 ರಿಂದ 31ರವರೆಗೆ ನವದೆಹಲಿಯಲ್ಲಿ ಜರುಗಿದ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕೇಂದ್ರಸಮಿತಿ ಹಲವಾರು ಪ್ರಮುಖ ನಿರ್ಣಯಗಳನ್ನು ಕೈಗೊಂಡಿದೆ. ರಾಷ್ಟ್ರದ ವಿದ್ಯಮಾನಗಳನ್ನು ವಿಶ್ಲೇಷಿಸಿದ ಅಂಶಗಳು ಇಲ್ಲಿವೆ.

ಮಹಾರಾಷ್ಟ್ರ ಚುನಾವಣೆ ಮತ್ತು ನಂತರ

ಮಹಾರಾಷ್ಟ್ರ ಚುನಾವಣಾ ಫಲಿತಾಂಶವು ಒಂದು ಪ್ರಮುಖ ಬೆಳವಣಿಗೆ ಎಂದು ಬಣ್ಣಿಸಿದ ಸಿಪಿಐ(ಎಂ) ಕೇಂದ್ರ ಸಮಿತಿ, 'ಬಿಜೆಪಿ-ಶಿವಸೇನ ಮೈತ್ರಿಕೂಟದ ಸೋಲು, ಲೋಕಸಭಾ ಚುನಾವಣೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ದೊರೆತ ಫಲಿತಾಂಶಕ್ಕೆ ಅನುಗುಣವಾಗಿದೆ' ಎಂದು ಹೇಳಿದೆ. 'ಕೋಮುವಾದ ಆಧಾರಿತ ಛಿದ್ರಕಾರಿ ರಾಜಕೀಯವನ್ನು ಜನರು ತಿರಸ್ಕರಿಸಿದ್ದಾರೆ' ಎಂದು ಸಿಪಿಐ(ಎಂ) ಬಣ್ಣಿಸಿದೆ.

ನಿರಂತರವಾಗಿ ಸೋಲನ್ನು ಅನುಭವಿಸುತ್ತಿರುವ ಬಿಜೆಪಿ, ಇದೀಗ ಹಿಂದುತ್ವ ಅಜೆಂಡಾವನ್ನು ಗಟ್ಟಿಗೊಳಿಸುತ್ತಿದೆ. ಅದ್ವಾನಿ ಅಧ್ಯಕ್ಷರಾಗಿ ಆಯ್ಕೆಯಾದ ನಂತರ, 'ಬಿಜೆಪಿ ಅಧಿಕಾರದಲ್ಲಿದ್ದಿದ್ದರೆ ರಾಮ ಮಂದಿರವನ್ನು ಕಟ್ಟಬಹುದಿತ್ತು' ಎಂದು ಹೇಳಿರುವುದು ನ್ಯಾಯಾಂಗ ಮತ್ತು ಕಾನೂನು ವ್ಯವಸ್ಥೆಯಲ್ಲಿ ಇವರಿಗೆ ವಿಶ್ವಾಸವಿಲ್ಲದಿರುವುದನ್ನು ತೋರಿಸುತ್ತದೆ.

ಇಂತಹ ಸಂದರ್ಭದಲ್ಲಿ ಬಿಜೆಪಿಯೇತರ ಮೈತ್ರಿಕೂಟದ ಪಕ್ಷಗಳು ಸರಿಯಾದ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಇನ್ನೂ ಕೂಡ ಬಿಜೆಪಿ ಮೈತ್ರಿಕೂಟದೊಂದಿಗೆ ಮುಂದುವರಿಯುವುದು ಎಂದರೆ ಆರ್.ಎಸ್.ಎಸ್.ನ ಹಿಂದುತ್ವ ಕಾರ್ಯಕ್ರಮಕ್ಕೆ ಒಪ್ಪಿಗೆ ಕೊಟ್ಟಂತೆ ಆಗುತ್ತದೆ. ಇದರಿಂದ ಬಿಜೆಪಿಯೇತರ ಮೈತ್ರಿಕೂಟದ ಪಕ್ಷಗಳು ಸೋಲನ್ನನುಭವಿಸುವುದು ಮಾತ್ರವಲ್ಲದೆ, ತಾವೊಂದು ಜಾತ್ಯಾತೀತ ಪಕ್ಷವೆಂದು ಹೇಳಿಕೊಳ್ಳುವುದು ಕಷ್ಟವಾಗುತ್ತದೆ.

ಇಂದಿನ ಸನ್ನಿವೇಶದಲ್ಲಿ, ಬಿಜೆಪಿಯು ಕೋಮುವಾದಿ ಚಟುವಟಿಕೆಗಳನ್ನು ತೀವ್ರಗೊಳಿಸಿದೆ. ಎಲ್ಲಾ ಪ್ರಜಾಸತ್ತಾತ್ಮಕ, ಜಾತ್ಯಾತೀತ ಶಕ್ತಿಗಳು ಈ ಅಪಾಯದ ವಿರುದ್ಧ ಒಂದಾಗಬೇಕೆಂದು ಸಿಪಿಐ(ಎಂ) ಮನವಿ ಮಾಡಿದೆ.

ಈಶಾನ್ಯ ರಾಜ್ಯಗಳ ಪರಿಸ್ಥಿತಿ

ನಾಗಾಲ್ಯಾಂಡ್ ರಾಜ್ಯದ ಧಿಮಾಪುರ ಮತ್ತು ಅಸ್ಸಾಂನ ವಿವಿಧ ಭಾಗಗಳಲ್ಲಿ ಬಾಂಬ್ ಸ್ಫೋಟ ಮತ್ತು ಧಾಳಿಗಳಿಂದಾಗಿ ಅನೇಕ ಜನರು ಸತ್ತಿದ್ದು ಉಲ್ಫಾ (ULFA) ಮತ್ತು ಎನ್‌ಡಿಎಫ್‌ಬಿ (NDFB) ಎಂಬ ಉಗ್ರಗಾಮಿ ಸಂಘಟನೆಗಳು ಇದಕ್ಕೆ ಕಾರಣವಾಗಿವೆ. ಅಸ್ಸಾಂನ ತರುಣ್ ಗೊಗೊಯ್ ನೇತೃತ್ವದ ಸರಕಾರ ಸೂಕ್ತ ಕ್ರಮ ಕೈಗೊಳ್ಳಲು ವಿಫಲವಾಗಿದ್ದು, ಉಲ್ಫಾ ಸಂಘಟನೆಯೊಂದಿಗೆ ಕೆಲವೊಂದು ಸಚಿವರು ಸಂಪರ್ಕ ಹೊಂದಿದ್ದಾರೆ ಎಂಬ ಅನುಮಾನವೂ ಇದೆ.

ಸಂದರ್ಭದ ದುರುಪಯೋಗ ಮಾಡಿಕೊಳ್ಳಲು ಅಮೇರಿಕಾದ ರಾಯಭಾರಿ ಕಛೇರಿ ಪ್ರಯತ್ನಿಸುತ್ತಿದ್ದು ಅಮೇರಿಕಾ ಗೂಢಾಚಾರ ಸಂಸ್ಥೆ (ಎಫ್.ಬಿ.ಐ) ಯ ಸೇವೆಯನ್ನು ನೀಡಲು ಸಿದ್ಧ ಎಂದು ಪತ್ರ ಬರೆದಿರುವುದನ್ನು ಸಿಪಿಐ(ಎಂ) ಖಂಡಿಸಿದೆ. ಭಾರತದ ಆಂತರಿಕ ವಿವಾದದಲ್ಲಿ ಕೈತುರುಕಿಸುವ ಇಂತಹ ಕೃತ್ಯವನ್ನು ಕೇಂದ್ರ ಸರಕಾರವು, ವಿರೋಧಿಸಬೇಕೆಂದು ಅದು ಕರೆ ನೀಡಿದೆ.

ತ್ರಿಪುರಾದ ಉಗ್ರಗಾಮಿ ಸಂಘಟನೆಗಳೂ ಸೇರಿದಂತೆ ಎಲ್ಲಾ ಸಂಘಟನೆಗಳು ಮ್ಯಾನ್ಮರ್ (ಬರ್ಮ) ಮತ್ತು ಬಾಂಗ್ಲಾದೇಶದಲ್ಲಿರುವ ಶಿಬಿರಗಳ ಮೂಲಕ ಕಾರ್ಯನಿರ್ವಹಿಸುತ್ತಿವೆ. ಆದರೆ ಬಾಂಗ್ಲಾದೇಶ ಸರ್ಕಾರವು ಇಂತಹ ಶಿಬಿರಗಳ ಅಸ್ತಿತ್ವವನ್ನು ನಿರಾಕರಿಸುತ್ತಿದೆ. ಕೇಂದ್ರ ಸರಕಾರವು ಬಾಂಗ್ಲಾದೇಶದ ಸರಕಾರದೊಂದಿಗೆ ಮಾತುಕತೆ ನಡೆಸಿ ಉಗ್ರಗಾಮಿ ಸಂಘಟನೆಗಳ ಶಿಬಿರಗಳನ್ನು ನಾಶ ಮಾಡುವ ಕುರಿತು ಮನನ ಮಾಡಬೇಕು. ಮಣಿಪುರದಲ್ಲಿ ಸೇನೆಯ ಕ್ಯಾಂಪ್‌ಗಳಲ್ಲಿ ನಡೆದಿರುವ ಕೆಲವು ವಿದ್ಯಮಾನಗಳು ಹಾಗೂ ಜನರ ಚಳುವಳಿಗಳನ್ನು ಗಮನಿಸಿ, ಸೇನೆಗೆ ವಿಶೇಷ ಅಧಿಕಾರವನ್ನು ನೀಡಿರುವ ಕಾಯಿದೆಗೆ ಸೂಕ್ತ ತಿದ್ದುಪಡಿ ತರಬೇಕೆಂದು ಸಿಪಿಐ(ಎಂ) ಕೇಂದ್ರ ಸಮಿತಿ ಒತ್ತಾಯಿಸಿದೆ.

ಜಮ್ಮು ಮತ್ತು ಕಾಶ್ಮೀರ

ಕಾಶ್ಮೀರ ಕಣಿವೆಯಲ್ಲಿ ಅದರಲ್ಲೂ ವಿಶೇಷವಾಗಿ ದಕ್ಷಿಣ ಕಾಶ್ಮೀರ ಮತ್ತು ಅನಂತನಾಗ್ ಜಿಲ್ಲೆಯಲ್ಲಿ ಉಗ್ರಗಾಮಿಗಳ ಚಟುವಟಿಕೆಗಳು ಹೆಚ್ಚುತ್ತಿದ್ದು ರಾಜಕೀಯ ಪಕ್ಷಗಳ ಮುಖಂಡರು ಮತ್ತು ಕಾರ್ಯಕರ್ತರು ಬಲಿಯಾಗುತ್ತಿದ್ದಾರೆ. ಇತ್ತೀಚೆಗೆ ಸಿಪಿಐ(ಎಂ) ಗೆ ಸೇರಿದ ನಾಲ್ವರು ಕಾರ್ಯಕರ್ತರು ಹತ್ಯೆಯಾಗಿದ್ದಾರೆ. ಉಗ್ರಗಾಮಿ ಚಟುವಟಿಕೆಗಳನ್ನು ಹತ್ತಿಕ್ಕಲು ಮುಫ್ತಿ ಮಹಮದ್ ಸರ್ಕಾರ ಕ್ರಮ ಕೈಗೊಳ್ಳಬೇಕು. ಅದೇ ಸಂದರ್ಭದಲ್ಲಿ ಕೇಂದ್ರ ಸರಕಾರವು ಎಲ್ಲಾ ಜಾತ್ಯಾತೀತ, ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಸಲು ಬೇಕಾದ ರಾಜಕೀಯ ಮುತುವರ್ಜಿ ವಹಿಸಬೇಕು ಹಾಗೂ ಉದ್ಯೋಗ ಅವಕಾಶಗಳನ್ನು ಒದಗಿಸುವ ಅಭಿವೃದ್ಧಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು.

ಭಾರತ ಮತ್ತು ಪಾಕಿಸ್ತಾನದ ವಿದೇಶಾಂಗ ಸಚಿವರ ಹಾಗೂ ಪ್ರಧಾನಿ ಮನಮೋಹನ್‌ಸಿಂಗ್ ಹಾಗೂ ಪಾಕಿಸ್ತಾನಿ ಅಧ್ಯಕ್ಷ ಮುಷರಫ್ ನಡುವಣ ನಡೆದ ಮಾತುಕತೆಗಳನ್ನು ಸಿಪಿಐ(ಎಂ) ಸ್ವಾಗತಿಸಿದ್ದು, ಮಾತುಕತೆಗಳನ್ನು ಮುಂದುವರಿಸುತ್ತಿದೆ. ಕಾಶ್ಮೀರ ಸಮಸ್ಯೆ ಕುರಿತು ಮುಷರಫ್ ನೀಡಿದ ಸಲಹೆಗಳನ್ನು ಗಮನಿಸಬೇಕು ಎಂದಿದೆ.

ಸರಕಾರದ ನೀತಿಗಳು:

ಪೋಟಾ ಕಾಯಿದೆಯ ರದ್ದು, ತೆಹಲ್ಕಾ ಟೇಪು ಹಗರಣ ಕುರಿತಾದ ಆಯೋಗವನ್ನು ರದ್ದುಗೊಳಿಸಿ ಸಿಬಿಐಗೆ ತನಿಖೆಗೆ ನೀಡಿರುವುದು, ಗೋಧ್ರಾದಲ್ಲಿ ರೈಲಿನಲ್ಲಿ ನಡೆದ ದೊಂಬಿ ಕುರಿತು ತನಿಖೆ ನಡೆಸಲು ಆಯೋಗ ರಚನೆಗಳ ಕುರಿತು ಸರಕಾರದ ನಿರ್ಧಾರಗಳನ್ನು ಕೇಂದ್ರಸಮಿತಿ ಸ್ವಾಗತಿಸಿದೆ. ಅಂತೆಯೇ ಗ್ರಾಮೀಣ ಪ್ರದೇಶದ ಪ್ರತಿ ಕುಟುಂಬದಲ್ಲಿ ಒಬ್ಬ ವಯಸ್ಕನಿಗೆ 100 ದಿನಗಳ ಕೆಲಸವನ್ನು ಖಾತ್ರಿಗೊಳಿಸಲು ಸರಕಾರವು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ (ಎನ್.ಆರ್.ಇ.ಜಿ. ಆ್ಯಕ್ಟ್) ಮಸೂದೆ ಮಂಡಿಸಲು ತಯಾರಿ ನಡೆಸುತ್ತಿರುವ ಕ್ರಮವನ್ನು ಸಿಪಿಐ(ಎಂ) ಪ್ರಶಂಸಿಸಿದೆ.

ಆದರೆ, ವಿದೇಶಿ ಬಂಡವಾಳವನ್ನು ಆಕರ್ಷಿಸುವ ನೆಪದಲ್ಲಿ ಸಾರ್ವಜನಿಕ ಉದ್ದಿಮೆ ಹಾಗೂ ದೇಶೀಯ ಕೈಗಾರಿಕೆಗಳಿಗೆ ಮಾರಕವಾಗುವ ರೀತಿಯಲ್ಲಿ ವಿದೇಶಿ ಬಂಡವಾಳಕ್ಕೆ ರಿಯಾಯತಿ ನೀಡುವುದನ್ನು ಸಿಪಿಐ(ಎಂ) ವಿರೋಧಿಸಿದ್ದು, 'ಪ್ರೆಸ್ ನೋಟ್ 18' ನ್ನು ರದ್ದುಗೊಳಿಸಿರುವುದರ ಔಚಿತ್ಯವನ್ನು ಪ್ರಶ್ನಿಸಿದೆ.

ವಿದೇಶಿ ಬ್ಯಾಂಕುಗಳು ಪ್ರತಿವರ್ಷ ಭಾರತದ ಖಾಸಗೀ ಬ್ಯಾಂಕುಗಳ ಶೇ.10 ರಷ್ಟು ಶೇರುಗಳನ್ನು ಖರೀದಿಸಬಹುದೆಂಬ ಹಣಕಾಸು ಸಚಿವರ ಹೇಳಿಕೆಗೆ ದಿಗ್ಭ್ರಮೆ ವ್ಯಕ್ತಪಡಿಸಿದ ಸಿಪಿಐ(ಎಂ) ಇದರಿಂದ ಕ್ರಮೇಣ ಖಾಸಗಿ ಬ್ಯಾಂಕುಗಳು ವಿದೇಶಿ ಬ್ಯಾಂಕುಗಳ ಪಾಲಾಗಲಿವೆ ಎಂದು ಹೇಳಿದೆ. ಅಂತೆಯೇ 'ನವರತ್ನ'ಗಳೂ ಸೇರಿದಂತೆ ಲಾಭದಾಯಕ ಸಾರ್ವಜನಿಕ ಉದ್ದಿಮೆಗಳಲ್ಲಿ ಶೇ.49ರಷ್ಟು ವಿದೇಶಿ ನೇರ ಬಂಡವಾಳ ಬರಬಹುದೆಂಬ ಹಣಕಾಸು ಸಚಿವರ ಹೇಳಿಕೆ ಅಪಾಯಕಾರಿಯಾದುದು. ಹಾಗೆಯೇ ಸಾರ್ವಜನಿಕ ಉದ್ದಿಮೆಗಳ ಶೇರುಗಳ ಮಾರಾಟದಿಂದ (DISINVESTMENT) ಬಂ ಹಣವನ್ನು ಉದ್ದಿಮೆಗಳನ್ನು ಬಲಪಡಿಸುವುದ ಬದಲಾಗಿ, ಸರಕಾರದ ಬಜೆಟ್ ಕೊರತೆಯನ ನೀಗಿಸಲು ಉಪಯೋಗವಾಗಲಿದೆ.

ಜನಪರ ಹೋರಾಟಕ್ಕೆ ಕರೆ

ಕೇಂದ್ರ ಸರಕಾರವು ತನ್ನ ನೀತಿಗಳನ್ನು ಬದಲಿಸುವಂತೆ ಒತ್ತಡ ಹೇರಲು ಮತ್ತು ವಿವಿಧ ಜನವಿಭಾಗಗಳ ಹಿತಾಸಕ್ತಿಗಳನ್ನು ರಕ್ಷಿಸಲು, ಜನರನ್ನು ಅಣಿನೆರೆಸಿ, ಹೋರಾಟಕ್ಕೆ ಮುಂದಾಗಬೇಕೆಂದು ಕೇಂದ್ರ ಸಮಿತಿ ಕರೆ. ಇಂತಹ ಚಳುವಳಿಗಳ ಮೂಲಕ ಜನರಿಗೆ ಸಂಬಂಧಪಟ್ಟ ಆಹಾರ, ಉದ್ಯೋಗ, ಗ್ರಾಮೀಣ ಬಡವರ ಮತ್ತು ಕಾರ್ಮಿಕರ ಸಮಸ್ಯೆಗಳಿಗೆ ಆಧ್ಯತೆ ನೀಡಬೇಕೆಂದು ಸಿಪಿಐ(ಎಂ) ಕೇಂದ್ರ ಸಮಿತಿ ತನ್ನೆಲ್ಲ ಘಟಕಗಳಿಗೆ ಕರೆ ನೀಡಿದೆ.

ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳನ್ನು ಜಾರಿಗೊಳಿಸುವುದನ್ನು ಸರಕಾರಕ್ಕೆ ಬಿಡಬೇಕೆಂದೂ, ಎಡಪಕ್ಷಗಳು ಕೇವಲ ಉದ್ಯೋಗ ಹೆಚ್ಚಳ, ಆಹಾರ ಪೂರೈಕೆ, ಶಿಕ್ಷಣ ಮತ್ತು ಆರೋಗ್ಯದ ಅಂಶಗಳಿಗೆ ಮಾತ್ರ ಗಮ ನೀಡಬೇಕೆಂದು ಯು.ಪಿ.ಎ ಸರಕಾರ ಬಯಸುತ್ತದೆ. ಇದನ್ನು ಒಪ್ಪದ ಸಿಪಿಐ(ಎಂ), ಬಿಜೆಪಿ ನೇತೃತ್ವದ ಸರಕಾರ ಅನುಸರಿಸಿದ ನೀತಿಗಳನ್ನು ಕೈಬಿಟ್ಟು ಜನತೆಯ ಚುನಾವಣಾ ಆದೇಶಕ್ಕೆ ಅನುಗುಣವಾಗಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮಕ್ಕೆ (ಸಿಎಂಪಿ) ಅನುಗುಣವಾಗಿ ಸರಕಾರದ ನೀತಿಗಳು ಇರಬೇಕೆಂದು ಒತ್ತಾಯಿಸಿವೆ.

ವಿದೇಶಾಂಗ ನೀತಿ: ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಅನುಸರಿಸಿದ ಅಮೇರಿಕಾ ಪ ವಿದೇಶಾಂಗ ನೀತಿಯನ್ನು ಕೈಬಿಟ್ಟು ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಹೇಳಿದಂತೆ ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಬೇಕೆಂದ ಕರೆ ನೀಡಿದ ಸಿಪಿಐ(ಎಂ), ಅಮೇರಿಕಾದ ಕ್ಷಿಪಣಿ ರಕ್ಷಣಾ ಕಾರ್ಯಕ್ರಮ (ಎಎಂಡಿ)ವನ್ನು ಅನುಮೋದಿಸಬಾರದೆಂದು ಹೇಳಿದೆ.

ಹಾಗೆಯೇ ವಾಜಪೇಯಿ ಸರಕಾರ ಇಸ್ರೇಲ್‌ನೊಂದಿಗೆ ಸಂಬಂಧ ಆರಂಭಿಸಿದ್ದು, ಅದನ್ನು ಕೈಬಿಡಬೇಕೆಂದು ಕರೆ ನೀಡಿದೆ. ಗಾಜಾಪಟ್ಟಿಯಲ್ಲಿ ಮಿಲಿಟರಿ ಕಾರ್ಯಾಚರಣೆ ಮೂಲಕ ನೂರಕ್ಕೂ ಹೆಚ್ಚು ಪ್ಯಾಲೆಸ್ಟೀನಿಯರನ್ನು ಬಲಿತೆಗೆದು ಕೊಂಡ ಇಸ್ರೇಲ್ ಸರಕಾರ ಪ್ಯಾಲೆಸ್ತೀನ್ ಪ್ರದೇಶವನ್ನು ತನ್ನ ವಸಾಹತನ್ನಾಗಿ ಮಾರ್ಪಡಿಸಲು ಹವಣಿಸುತ್ತಿದೆ.

ಸಂಘಟನಾ ತೀರ್ಮಾನಗಳು :

ಸಾಮೂಹಿಕ ಸಂಘಟನೆಗಳಿಗೆ ಸಂಬಂಧಪಟ್ಟ 1981 ರ ಗೊತ್ತುವಳಿಯನ್ನು ಕೇಂದ್ರ ಸಮಿತಿ ಸಮಕಾಲೀನಗೊಳಿಸಿದ್ದು, ಸಾಮೂಹಿಕ ಸಂಘಟನೆಗಳಲ್ಲಿರುವ ಪಕ್ಷದ ಸದಸ್ಯರು ಪಕ್ಷದ ಪ್ರಭಾವವನ್ನು ಬೆಳೆಸಲು ಮತ್ತು ವಿಸ್ತರಿಸಲು ಹೇಗೆ ಕೆಲಸ ಮಾಡಬೇಕೆಂಬ ಬಗ್ಗೆ ಮಾರ್ಗದರ್ಶನಗಳನ್ನು ನೀಡಿದೆ.

ಮಹಾಧಿವೇಶನ

ಅಂತೆಯೇ ಪಕ್ಷದ 18ನೇ ಮಹಾಧಿವೇಶನವು, 2005 ಏಪ್ರಿಲ್ 6 ರಿಂದ 11ರವರೆಗೆ ನವದೆಹಲಿಯಲ್ಲಿ ನಡೆಯಲಿದ್ದು ಅದರ ತಯಾರಿಯ ಬಗ್ಗೆ ಅವಲೋಕಿಸಿದ ಕೇಂದ್ರ ಸಮಿತಿ, 700 ಪ್ರತಿನಿಧಿಗಳು ಭಾಗವಹಿಸುವ ಅಧಿವೇಶನದಲ್ಲಿ ರಾಜ್ಯವಾರು ಕೋಟಾಗಳನ್ನು ನಿಗದಿಪಡಿಸಿದೆ. ಈ ಪ್ರತಿನಿಧಿಗಳು ಸಂಬಂಧಪಟ್ಟ ರಾಜ್ಯ ಸಮ್ಮೇಳನದಲ್ಲಿ ಆಯ್ಕೆಯಾಗಲಿದ್ದಾರೆ.

ಉದ್ಯೋಗ ಭರವಸೆ ಕಾಯ್ದೆಗಾಗಿ ಆಗ್ರಹಿಸಿ

ಕೃಷಿ ಕೂಲಿಕಾರರ 3ನೇ ರಾಜ್ಯ ಸಮ್ಮೇಳನ

ಈ ಸಮ್ಮೇಳನ ಕೂಲಿಕಾರರ ಸಮಗ್ರ ಪ್ರಶ್ನೆಗಳನ್ನು ಚರ್ಚಿಸಲಿದೆ. ಪ್ರಮುಖವಾಗಿ ಉದ್ಯೋಗದ ಗ್ಯಾರಂಟಿ ಪಡೆಯಲು ವಿಶೇಷ ಒತ್ತು ನೀಡಿ ಆಂದೋಲನದ ಹಾದಿ ನಿರ್ಧರಿಸಲಿದೆ

ಕರ್ನಾಟಕ ರಾಜ್ಯದಲ್ಲಿ ಸುಮಾರು ಒಂದು ಕೋಟಿ ಕೂಲಿಕಾರರಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಉದಾರೀಕರಣ ನೀತಿಗಳ ಫಲವಾಗಿ ಕೃಷಿ ಕ್ಷೇತ್ರದಲ್ಲಿ ಬಿಕ್ಕಟ್ಟು ಆಳವಾಗುತ್ತಿರುವಂತೆ, ಕೂಲಿಕಾರರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇನ್ನೊಬ್ಬರ ಕೃಷಿ ಭೂಮಿಯಲ್ಲಿನ ಕೆಲಸವನ್ನು ಅವಲಂಬಿಸಿರುವ ಈ ಜನಗಳು ಕಾಯಂ ಕೆಲಸದ ಭರವಸೆ ಇಲ್ಲದೆ, ಯಾವುದೇ ಕಾನೂನು ರಕ್ಷಣೆ ಇಲ್ಲದೆ ಜೀವನ ಸಾಗಿಸುವ ಅಸಹಾಯಕರಾಗಿದ್ದಾರೆ. ಸರ್ಕಾರ ನಿಗದಿಪಡಿಸುವ ಕನಿಷ್ಟ ಕೂಲಿಯನ್ನು ಸರ್ಕಾರವೇ ಜಾರಿಗೊಳಿಸಲು ಕ್ರಮವಹಿಸುತ್ತಿಲ್ಲ. ಇವರಲ್ಲಿ ಒಂದು ದೊಡ್ಡ ವಿಭಾಗ ಉದ್ಯೋಗವನ್ನು ಹುಡುಕಿಕೊಂಡು ಊರೂರು ಅಲೆಯುತ್ತಿರುತ್ತಾರೆ. ಬರಗಾಲದ ಸಂದರ್ಭದಲ್ಲಿ ಇವರು ಮಕ್ಕಳು ಮರಿಗಳನ್ನು ಕಟ್ಟಿಕೊಂಡು ದೂರದ ಗೋವಾ, ಮುಂಬೈ ಮೊದಲಾದ ಕಡೆಗಳಿಗೆ ಗುಳೆ ಹೋಗುತ್ತಾರೆ.

ಕೃಷಿ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ ಕೃಷಿ ಕೂಲಿಕಾರರು ಹಸಿವಿನ ಸಾವುಗಳಿಗೆ ಬಲಿಯಾಗುತ್ತಿದ್ದಾರೆ. ನೀರಾವರಿ ಮತ್ತು ಬರ ಪರಿಹಾರ ಕಾಮಗಾರಿಗಳ ಕೊರತೆಯಿಂದಾಗಿ ಕೂಲಿ ದಿನಗಳು ಕಡಿಮೆಯಾಗುತ್ತಿವೆ. ಕೃಷಿ ಕೆಲಸಗಳಲ್ಲಿ, ಕಟ್ಟಡ ನಿರ್ಮಾಣ, ರಸ್ತೆ ನಿರ್ಮಾಣದಂತಹ ಕೆಲಸಗಳಲ್ಲಿ ವ್ಯಾಪಕ ಗೊಳ್ಳುತ್ತಿರುವ ಯಾಂತ್ರೀಕರಣದಿಂದಾಗಿ ಕೃಷಿ ಕೂಲಿಕಾರರು ಕೆಲಸದ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ವಾಸಕ್ಕೆ ಸ್ವಂತ ಮನೆಗಳಿಲ್ಲದೆ, ಕೊಳೆಗೇರಿಗಳಲ್ಲಿ ಇವರ ಬದುಕು ಅತ್ಯಂತ ಅಮಾನವೀಯವಾಗಿರುತ್ತದೆ. ಪೌಷ್ಠಿಕ ಆಹಾರವಿಲ್ಲದೆ, ಶುಶ್ರೂಷೆಗೆ ದಿಕ್ಕಿಲ್ಲದೆ, ಮಕ್ಕಳಿಗೆ ಶಿಕ್ಷಣ ಸ್ಪರ್ಶವಿಲ್ಲದೆ, ಅಂಧಕಾರದಲ್ಲಿ ಕಾಲ ಕಳೆಯುತ್ತಿರುತ್ತಾರೆ. ಇವರಲ್ಲಿ ಬಹುಸಂಖ್ಯಾತರು ದಲಿತ ವಿಭಾಗಗಳಿಗೆ ಸೇರಿದವರಾಗಿದ್ದು ಅಮಾನವೀಯ ಜಾತಿ ಅಸ್ಪೃಶ್ಯತೆ ಮತ್ತು ಸಾಮಾಜಿಕ ದಮನಕ್ಕೆ ಒಳಗಾಗುತ್ತಿರುತ್ತಾರೆ.

ಕರ್ನಾಟಕದ ಗ್ರಾಮೀಣ ದುಡಿಯುವ ಜನ ವಿಭಾಗಗಳಲ್ಲಿ ಶೇ 40 ರಷ್ಟಿರುವ ಕೃಷಿ ಕೂಲಿಕಾರರ ಬದುಕಿನಲ್ಲಿ ಬದಲಾವಣೆಯಾಗದೆ ಕರ್ನಾಟಕದ ಅಭಿವೃದ್ಧಿ ಸಾಧ್ಯವಿಲ್ಲ. ಇವರು ಸಂಘಟಿತರಾಗಿ ಧ್ವನಿಯೆತ್ತದೆ ಅವರ ಮುನ್ನಡೆ ಸಾಧ್ಯವಿಲ್ಲ. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ರಾಜ್ಯದ ಕೃಷಿ ಕೂಲಿಕಾರರ ಪ್ರಶ್ನೆಗಳನ್ನೆತ್ತಿಕೊಂಡು ಅವರ ಹಿತರಕ್ಷಣೆಗಾಗಿ ಹೋರಾಡುತ್ತಿರುವ ಏಕೈಕ ಸಂಘಟನೆಯಾಗಿದೆ. ಕೃಷಿ ಕೂಲಿಕಾರರಿಗೆ ಸಾಮಾಜಿಕ ಸಂರಕ್ಷಣೆಯನ್ನು ಒದಗಿಸುವ ಸಮಗ್ರ ಕಾನೂನು ಹಾಗೂ ಇತರ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರಗಳನ್ನು ಕಂಡುಕೊಳ್ಳಲು ರಾಜ್ಯಮಟ್ಟದ ಸಮ್ಮೇಳನವೊಂದನ್ನು ನವೆಂಬರ್ 17-19, 2004 ರಂದು ಮಂಡ್ಯ ನಗರದಲ್ಲಿ ನಡೆಸಲು ನಿರ್ಧರಿಸಲಾಗಿದೆ.

1. ಗ್ರಾಮೀಣ ಉದ್ಯೋಗ ಭರವಸೆ ಕಾಯ್ದೆಗಾಗಿ ಹೋರಾಟ

ಎಡಪಕ್ಷಗಳ ಬೆಂಬಲದೊಂದಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ಯು.ಪಿ.ಎ. ಸರ್ಕಾರ ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಕೊಟ್ಟ ಭರವಸೆಗೆ ಅನುಗುಣವಾಗಿ 'ಗ್ರಾಮೀಣ ಉದ್ಯೋಗ ಭರವಸೆ ಕಾಯ್ದೆ - 2004' ಎಂಬ ಹೆಸರಿನ ಕರಡು ಮಸೂದೆಯನ್ನು ಸಿದ್ಧಪಡಿಸಿದೆ. ಈ ಮಸೂದೆಯಲ್ಲಿ ಕೆಲವೊಂದು ಲೋಪದೋಷಗಳಿದ್ದರೂ ಅದೊಂದು ಸರಿಯಾದ ದಿಕ್ಕಿನಲ್ಲಿಡಲಾದ ಸರಿಯಾದ ಹೆಜ್ಜೆಯಾಗಿದೆ. ಪ್ರತಿಯೊಂದು ಗ್ರಾಮೀಣ ಕುಟುಂಬದ ಒಬ್ಬ ಸದೃಢ ಸದಸ್ಯನಿಗೆ ವರ್ಷದಲ್ಲಿ 100 ದಿನಗಳ ಕೆಲಸದ ಭರವಸೆಯ ಕಾಯ್ದೆ ಜಾರಿಗೆ ಬಂದದ್ದೇ ಆದರೆ, ಗ್ರಾಮೀಣ ಜನತೆಯ, ಮುಖ್ಯವಾಗಿ ಉದ್ಯೋಗಕ್ಕಾಗಿ ಊರೂರು ಅಲೆಯುತ್ತಿರುತ್ತಿರುವ ಕೃಷಿ ಕೂಲಿಕಾರರ ಬದುಕಿನ ಮೇಲೆ ಸಕಾರಾತ್ಮಕ ಪರಿಣಾಮ ಬೀರುವುದು.

ಆದರೆ ಉದಾರೀಕರಣದ ಪ್ರತಿಪಾದಕರು ಮತ್ತು ಹಣಕಾಸು ಬಂಡವಾಳದ ವಕ್ತಾರರು ಈ ಕಾಯ್ದೆ ಜಾರಿಗೆ ಬರುವುದನ್ನು ತಡೆಗಟ್ಟಲು ಅಡೆತಡೆಗಳನ್ನು ನಿರ್ಮಿಸುತ್ತಿದಾರೆ. ಈ ಕಾಯ್ದೆಯನ್ನು ಜಾರಿಗೆ ತರುವುದು ಸಾಧ್ಯವಿಲ್ಲವೆಂದೂ, ಇದಕ್ಕೆ ಅಪಾರ ಮೊತ್ತದ ಹಣ ಬೇಕಾಗುತ್ತದೆಯೆಂದೂ, ಮಧ್ಯಮ ವರ್ಗದವರ ಮೇಲೆ ತೆರಿಗೆ ಹೊರೆ ಹೆಚ್ಚಾಗಲಿದೆ ಎಂದೂ ಅವರು ಅಪಪ್ರಚಾರ ನಡೆಸಿದ್ದರೆ. ಸರ್ಕಾರವು ಈ ಮಸೂದೆಯನ್ನು ಮುಂದಿನ ಲೋಕಸಭಾ ಅಧಿವೇಶನದಲ್ಲಿ ಮಂಡಿಸಲು ಉದ್ದೇಶಿಸಿದ್ದರೂ, ಈ ಯೋಜನೆಯನ್ನು ಆಯ್ದ 150 ಜಿಲ್ಲೆಗಳಲ್ಲಿ ಮಾತ್ರ ಜಾರಿ ಮಾಡಲಾಗುವುದೆಂದು ಕೇಂದ್ರ ಹಣಕಾಸು ಸಚಿವರು ಹೇಳುತ್ತಿದ್ದಾರೆ. ಹಾಗಾಗಿದ್ದೇ ಆದರೆ ಬಹುಸಂಖ್ಯಾತ ಬಡವರಿಗೆ ಅದರ ಪ್ರಯೋಜನ ದೊರೆಯಲಾರದು. ಆರಂಭದಲ್ಲಿ ಕನಿಷ್ಟ ಮೂರರಲ್ಲಿ ಒಂದು ಭಾಗದಷ್ಟು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಿ 3 ವರ್ಷಗಳ ಅವಧಿಯೊಳಗೆ ಇಡೀ ದೇಶದಲ್ಲಿ ಜಾರಿಗೊಳಿಸುವಂತೆ ಒತ್ತಾಯಿಸುವುದು ಅಗತ್ಯವಾಗಿದೆ. ಮಂಡ್ಯ ಸಮ್ಮೇಳನವು ಈ ಕುರಿತು ವಿವರವಾಗಿ ಚರ್ಚಿಸಿ ಹೋರಾಟವನ್ನು ರೂಪಿಲಿದೆ.

2. ಕೃಷಿ ಕೂಲಿಕಾರರ ಸಮಗ್ರ ಶಾಸನ

ಕೃಷಿ ಕೂಲಿಕಾರರಿಗಾಗಿ ಒಂದು ಸಮಗ್ರವಾದ ಕೇಂದ್ರೀಯ ಶಾಸನ ಜಾರಿಗೆ ತರಬೇಕೆಂಬ ಪ್ರಸ್ತಾವವು 1974ರಿಂದ ಇತ್ಯರ್ಥವಾಗದೆ ಉಳಿದಿದೆ. ಭೂಮಾಲಕ ಲಾಬಿಯು ಇದನ್ನು ಬಲವಾಗಿ ವಿರೋಧಿಸುತ್ತಾ

ಮಂಡ್ಯ ನವೆಂಬರ್ 17-19, 2004

ಬಂದಿದೆ. ಇಂತಹ ಒಂದು ಕಾನೂನನ್ನು ತರುವುದನ್ನು ವಿರೋಧಿಸಿದ ಮೊದಲ ಸರ್ಕಾರವೆಂದರೆ ಅದು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ. ಅಂತಹ ಒಂದು ಕಾನೂನನ್ನು ಜಾರಿಗೆ ತಂದರೆ ಕಾರ್ಷಿಕ ವಲಯದಲ್ಲಿ ಅಶಾಂತಿ ಉಂಟಾಗುತ್ತದೆ ಎಂದು ಹೇಳಲಾಯಿತು.

2000 ಇಸ್ವಿಯ ನವಂಬರ್ ತಿಂಗಳಲ್ಲಿ ನವದೆಹಲಿಯಲ್ಲಿ ಜರುಗಿದ ರೈತರ ಹಾಗೂ ಕೃಷಿ ಕೂಲಿಕಾರರ ಜಂಟಿ ರ್‍ಯಾಲಿಯಲ್ಲಿ ಕೃಷಿ ಕೂಲಿಕಾರರ ಕೇಂದ್ರೀಯ ಶಾಸನಕ್ಕಾಗಿ ಒತ್ತಾಯಿಸಲಾಗಿತ್ತು. ಅನಂತರ ಅನೇಕ ರಾಜ್ಯಗಳಲ್ಲಿ ಈ ಬೇಡಿಕೆಯನ್ನು ಒತ್ತಾಯಿಸಿ ಪ್ರಚಾರ ಪ್ರಕ್ಷೋಭೆಗಳನ್ನು ನಡೆಸಲಾಗಿತ್ತು.

ಈಗ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ಯುಪಿಎ ಸರ್ಕಾರವು ಎಡಪಕ್ಷಗಳು ನೀಡಿದ ಸಲಹೆಯನ್ನು ಅಂಗೀಕರಿಸಿ ಕೃಷಿ ಕೂಲಿಕಾರರಿಗಾಗಿ ಕೇಂದ್ರೀಯ ಶಾಸನವನ್ನು ಜಾರಿಗೆ ತರುವ ಪ್ರಸ್ತಾವವನ್ನು ಅದರ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಸೇರಿಸಿದೆ. ಕೇಂದ್ರ ಸರ್ಕಾರವು ತನ್ನ ಭರವಸೆಯನ್ನು ಜಾರಿಗೆ ತರುವಂತೆ ನಮ್ಮ ಒತ್ತಾಯವನ್ನು ತೀವ್ರಗೊಳಿಸಬೇಕಾಗಿದೆ.

ಇನ್ನುಳಿದ ಎಲ್ಲಾ ರಾಜ್ಯಗಳಿಗೂ ಮಾದರಿಯಾಗಬಲ್ಲ ಕೃಷಿಕೂಲಿಕಾರ ಸಮಗ್ರ ಕಾನೂನೊಂದು ಕೇರಳ ರಾಜ್ಯದಲ್ಲಿ ಜಾರಿಯಲ್ಲಿದೆ. ಕೇರಳದ ಎಡರಂಗ ಸರ್ಕಾರವು ಜಾರಿಗೆ ತಂದ ಈ ಕಾನೂನಿನನ್ವಯ ಕೃಷಿ ಕೂಲಿಕಾರರಿಗೆ ತುಟ್ಟಿಭತ್ಯೆ ಸಹಿತದ ಕನಿಷ್ಠ ಕೂಲಿ, ಭವಿಷ್ಯ ನಿಧಿ, ಗ್ರಾಚ್ಯುಯಿಟಿ ಉಚಿತ ಚಿಕಿತ್ಸೆ, ಹೆರಿಗೆ ಭತ್ಯೆ, ಅಪಘಾತ ಪರಿಹಾರ, ನಿವೃತ್ತಿ ವೇತನ, ಹಿತ್ತಲು ಸಹಿತ ಮನೆ ಮೊದಲಾದ ಸೌಲಭ್ಯಗಳನ್ನು ನೀಡಲಾಗುತ್ತದೆ. ತ್ರಿಪುರಾದ ಎಡರಂಗ ಸರ್ಕಾರವೂ ಸಹ ಇಂತಹ ಕಾನೂನನ್ನು ಜಾರಿಗೆ ತಂದಿದೆ. ಕರ್ನಾಟಕದಲ್ಲಿಯೂ ಅಂತಹ ಕಾನೂನನ್ನು ತರಲು ರಾಜ್ಯ ಸರ್ಕಾರವನ್ನು ಒತ್ತಾಯಿಸುವ ಚಳುವಳಿಯನ್ನು ನಡೆಸಬೇಕಾಗಿದೆ. ಕೃಷಿ ಕೂಲಿಕಾರರ 3ನೇ ರಾಜ್ಯ ಸಮ್ಮೇಳನ ಈ ಕುರಿತು ನಿರ್ಧಾರ ಕೈಗೊಳ್ಳಲಿದೆ.

3. ಪರ್ಯಾಯ ಕೃಷಿ ನೀತಿ

ಕೃಷಿ ಕ್ಷೇತ್ರದಲ್ಲಿ ಎಲ್.ಪಿ.ಜಿ. ನೀತಿಗಳ ಜಾರಿಯ ಫಲಾಗಿ ಹಿಂದೆಂದೂ ಕಂಡರಿಯದ ಬಿಕ್ಕಟ್ಟು ಕೃಷಿ ಕ್ಷೇತ್ರವನ್ನು ಆವರಿಸಿಕೊಂಡಿತು. ಈ ಹಿನ್ನೆಲೆಯಲ್ಲಿ ಅಖಿಲಭಾರತ ಕಿಸಾನ್ ಸಭಾ ಹಾಗೂ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಅಖಿಲ ಭಾರತ ಮಂಡಳಿಗಳು 2003ರ ಡಿಸೆಂಬರ್ ತಿಮಗಳಲಿ ಕೇರಳದ ತಿರುವನಂತಪುರದಲ್ಲಿ ಸಭೆ ಸೇರಿ 1993ರಲ್ಲಿ ಅಂಗೀಕರಿಸಲಾಗಿದ್ದ 'ಪರ್ಯಾಯ ಕೃಷಿ ನೀತಿ'ಯನ್ನು ಸಮಕಾಲೀನಗೊಳಿಸಿದವು. ಉದರೀಕರಣದ ನೀತಿಗಳ ವಿರುದ್ಧ ರೈತರನ್ನು ಮತ್ತು ಕೃಷಿ ಕೂಲಿಕಾರರನ್ನು ಸಂಘಟಿಸುವಲ್ಲಿ ಇದು ಒಂದು ಶಕ್ತಿಯುತವಾದ ಹಾಗೂ ಪರಿಣಾಮಕಾರಿಯಾದ ಅಸ್ತ್ರವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಪರ್ಯಾಯ ಕೃಷಿ ನೀತಿಯ ಜಾರಿಗೆ ಒತ್ತಾಯಿಸಿ ದೇಶಾದ್ಯಂತ ಪ್ರಚಾರ ಪ್ರಕ್ಷೋಭೆ ನಡೆಸಲು ಎಐಕೆಎಸ್ ಮತ್ತು ಎಐಎಡಬ್ಲ್ಯುಯು ಕರೆ ನೀಡಿವೆ. ಕಳೆದ ಸಪ್ಟಂಬರ್ ಅಕ್ಟೋಬರ್ ತಿಂಗಳುಗಳಲ್ಲಿ ನಾವು ರಾಜ್ಯದಲ್ಲಿ ರೈತ ಸಂಘದ ಒತೆಯಲ್ಲಿ ಜಂಟಿ ಪ್ರಚಾರಾಂದೋಲನವನ್ನು ನಡೆಸಿದ್ದೇವೆ. ಈ ಆಂದೋಲನ ಮುಂದುವರೆಸ ಬೇಕಾಗಿದ್ದು ಸಮ್ಮೇಳನ ಅಗತ್ಯ ಚರ್ಚೆ ನಡೆಸಲಿದೆ.

ರಾಜ್ಯದ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಪ್ಪಟ ಕೃಷಿ ಕೂಲಿಕಾರರ ಪರಿಸ್ಥಿತಿ ಉತ್ತಮವಾಗಬೇಕಾದರೆ ಅವರ ಸಂಘಟನೆ ಹಾಗೂ ಚಳುವಳಿ ವಿಸ್ತಾರಗೊಂಡು ಬಲಪಡಬೇಕಾಗಿದೆ. ಸಂಘಟನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಿ ಗಟ್ಟಿಗೊಳಿಸುವ ಬಗ್ಗೆ ಮಂಡ್ಯ ಸಮ್ಮೇಳನ ಚರ್ಚೆ ನಡೆಸಲಿದೆ. ರಾಜ್ಯದ ಸುಮಾರು 14 ಜಿಲ್ಲೆಗಳಿಂದ ಮಹಿಳೆಯರೂ ಸೇರಿದಂತೆ 350 ಜನ ಪ್ರತಿನಿಧಿಗಳು, ವೀಕ್ಷಕರು ಹಾಗೂ ಸಹೋದರ ಸಂಘಟನೆಗಳ ವೀಕ್ಷಕರು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

ಸಮ್ಮೇಳನದ ಉದ್ಘಾಟನೆ ತ್ರಿಪುರ ಎಡರಂಗ ಸರ್ಕಾರದ ಕೃಷಿ ಹಾಗೂ ಆರೋಗ್ಯ ಖಾತೆಯ ಸಚಿವರಾದ **ಕಾಂ. ತಪನ್ ಚಕ್ರವರ್ತಿ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ.** ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ, ರಾಜ್ಯ ಸಭಾ ಸದಸ್ಯರಾದ ಕಾಂ. ಎ.ವಿಜಯರಾಘವನ್ ಭಾಗವಹಿಸಿ ಮಾರ್ಗದರ್ಶನ ನೀಡಲಿದ್ದಾರೆ. ರಾಜ್ಯದ ಕೃಷಿ ಕೂಲಿಕಾರರ ಆಂದೋಲನದಲ್ಲಿ ಮಂಡ್ಯ ಸಮ್ಮೇಳನವು ಒಂದು ಮೈಲುಗಲ್ಲು ಆಗಲಿದೆ ಎಂದು ನಿರೀಕ್ಷಿಸಲಾಗಿದೆ.

□ ನಿತ್ಯಾನಂದಸ್ವಾಮಿ



ಕೆಲಸ ಕೊಡಿ, ಬದುಕಲು ಬಿಡಿ ಎಂದು ರಾಜಧಾನಿಗೆ ಬಂದ ಕೂಲಿಕಾರರು

ಶ್ರೀರಾಮಪುರದಲ್ಲಿ ಸೀಮೆಎಣ್ಣೆ ವಿತರಣೆಯಲ್ಲಿ ಅಕ್ರಮದ ವಿರುದ್ಧ ಸಿಪಿಐ(ಎಂ) ಪ್ರತಿಭಟನೆ



ಬೆಂಗಳೂರಿನ ಶ್ರೀರಾಮಪುರ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಡುಬಡವರು ವಾಸ ಮಾಡುವ ಪ್ರದೇಶವಾಗಿದೆ. ಸೀಮೆ ಎಣ್ಣೆ ಇಲ್ಲದೆ ಒಂದು ಅಗಳು ಅನ್ನವೂ ಬೇಯುವುದಿಲ್ಲ. ದೊಡ್ಡ ಪ್ರಮಾಣದಲ್ಲಿ ಸೀಮೆ ಎಣ್ಣೆ ಉಪಯೋಗ ಅಗತ್ಯತ್ವ ಇದೆ. ಇಂತಹ ಪರಿಸ್ಥಿತಿಯಲ್ಲಿ ನಡೆಯುತ್ತಿವೆ. ಜನತೆಯ ಜೀವನಸರ್ಕಾರ ಪ್ರತಿ ಕಾರ್ಡ್‌ಗೆ 8 ಲೀಟರ್ ಸೀಮೆ ಎಣ್ಣೆ ನೀಡುತ್ತಿದ್ದು. ವಿತರಕರು ಕಾರ್ಡುದಾರರಿಗೆ 7 ಲೀಟರ್ ಮಾತ್ರ ನೀಡಿ ಪ್ರತಿ ಕಾರ್ಡ್‌ಗೆ 1 ಲೀಟರ್ ಸೀಮೆ ಎಣ್ಣೆ ವಂಚಿಸುತ್ತಿದ್ದಾರೆ. ಈ ರೀತಿ ಕಡಿತ ಮಾಡಿದ ಸಾವಿರಾರು ಲೀಟರ್ ಸೀಮೆ ಎಣ್ಣೆ ಕಾಳ ಸಂತೆಯಲ್ಲಿ 25-30 ರೂ.ಗಳಿಗೆ ಮಾರಾಟವಾಗುತ್ತಿದೆ. ಅಲ್ಲದೆ ಸೀಮೆ ಎಣ್ಣೆ ನೀಡುವಾಗ ಅಳತೆ ಮಾಪನದಲ್ಲಿ ದೋಷವಿದ್ದು ಸೀಮೆ ಎಣ್ಣೆ ಕಡಿತ ಮಾಡುತ್ತಾ ಜನರಿಗೆ ಮೋಸ ಮಾಡುತ್ತಿದ್ದಾರೆ. ಸಮಯ ನಿಗದಿ ಇಲ್ಲದೆ ಅನೇಕ ಕಾರ್ಡ್‌ದಾರರಿಗೆ ಸೀಮೆ ಎಣ್ಣೆ ಸಿಗುವುದೇ ಇಲ್ಲ.

ಈ ಬಗ್ಗೆ ಆಹಾರ ನಿಗಮ ಅಧಿಕಾರಿಗಳು ಗೊತ್ತಿದ್ದು ಗೊತ್ತಿಲ್ಲದಂತೆ ಇರುತ್ತಾರೆ. ಕಾರಣ ಪ್ರತಿ ಲೀಟರ್‌ಗೆ 5 ರೂ.ನಂತೆ ಲಂಚ ಪಡೆದು ಲಕ್ಷಾಂತರ ರೂ.ಗಳನ್ನು ಲೂಟಿ ಮಾಡುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಅನೇಕ ಬಾರಿ ತಿಳಿಸಿದ್ದರು ಸಮಸ್ಯೆ ಬಗೆ ಹರಿದಿಲ್ಲ. ಆದ್ದರಿಂದ ಸಿ.ಪಿ.ಐ.(ಎಂ) ಪಕ್ಷ ಶ್ರೀರಾಮಪುರ ಪ್ರದೇಶ ಸಮಿತಿ ನೇತೃತ್ವದಲ್ಲಿ 8.11.2004 ರಂದು ಶ್ರೀರಾಮಪುರದ ದೇವಯ್ಯ ಪಾರ್ಕ್ ಬಳಿ ಹೋರಾಟ ನಡೆಸಿತ್ತು. ಕರಪತ್ರಗಳನ್ನು ಮನೆ ಮನೆಗೆ ನೀಡಿ ತಿಳುವಳಿಗೆ ನೀಡಲಾಯಿತು. ಆಟೋ ದಲ್ಲಿಯು ಪ್ರಚಾರ ನಡೆಸಿ ಈ ಎಲ್ಲಾ ಅಂಶಗಳ ಬಗ್ಗೆ ಜನರಿಗೆ ತಿಳಿಸಿ ಎಚ್ಚರಿಸಲಾಗಿದೆ. ಈ ಹೋರಾಟದಲ್ಲಿ ಹೆಚ್ಚಿನ ಜನರು ಭಾಗವಹಿಸಿದ್ದರು. ಈ ಬಗ್ಗೆ ಪ್ರತಿಭಟನೆ ನಂತರ ಆಹಾರ ನಿಗಮದ ಅಪಾರ ನಿರ್ದೇಶಕರಿಗೆ, ಸಹಾಯಕ ನಿರ್ದೇಶಕರಿಗೆ ಮನವಿ ನೀಡಲಾಗಿದ್ದು ಕ್ರಮ ಜರುಗಿಸಲು ಒತ್ತಾಯಿಸಲಾಗಿದೆ.

ಬೀಡಿ ಕಾರ್ಮಿಕರ ನೂತನ ಅಖಿಲ ಭಾರತ ಪದಾಧಿಕಾರಿಗಳು

ಅಧ್ಯಕ್ಷರು: ಪಿ.ಕೆ.ಗಂಗೂಲಿ
ಕಾರ್ಯಾಧ್ಯಕ್ಷರು: ಬಿ.ಮಾಧವ
ಪ್ರಧಾನ ಕಾರ್ಯದರ್ಶಿ: ಮಹ್ಮದ್ ನಿಜಾಮುದ್ದೀನ್
ಖಜಾಂಚಿ : ಪರಾಸ್ ಬಸು
ಉಪಾಧ್ಯಕ್ಷರು : ಆರ್.ಪಿ.ದಾಸಗುಪ್ತ, ತಾನುಲಾಲ್ ಮಂಡಲ್‌ದಾರ್, ಕೆ.ಪಿ.ಸಹದೇವನ್, ವಿ.ಕಣ್ಣನ್

ಕಾರ್ಯದರ್ಶಿಗಳು
1. ಚಿತ್ತರಂಜನ್ ಸರ್ಕಾರ
2. ಎಂ.ರಾಜಾಂಗಮ್ಮ
3. ಎ.ಕೆ.ನಾರಾಯಣನ್
4. ಕೆ.ಶಂಕರ
5. ಪಾತಿಮಾ ಬೇಗ್

ಕರ್ನಾಟಕದಿಂದ ಸೈಯ್ಯದ್ ಮುಜೀಬ್, ರಮಣಿ, ಸುಕುಮಾರ್ ಮತ್ತು ದೋಗು ಸುವರ್ಣ ಇವರು ರಾಷ್ಟ್ರಮಂಡಳಿ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ.

ಪ್ಯಾಲೆಸ್ಟೇನಿಯನ್ ಜನತೆಯ ಮಹಾನಾಯಕ, ವಿಮೋಚನಾ ಹೋರಾಟದ ತಾರೆ ಯಾಸೆರ್ ಅರಾಫತ್ ನವೆಂಬರ್ 11 ರಂದು ಇನ್ನಿಲ್ಲವಾದರು. ಅವರಿಗೆ ಕ್ರಾಂತಿಕಾರಿ ಶ್ರದ್ಧಾಂಜಲಿ



ಅಂಗನವಾಡಿ ಕಾರ್ಯಕರ್ತೆಯರ ಹೋರಾಟಕ್ಕೆ ಜಯ

ದಿ. 25.06.2004 ರಂದು ಹೊರಡಿಸಿದ ಸರ್ಕಾರದ ಆಡಳಿತಾತ್ಮಕ ತೀರ್ಮಾನವನ್ನು ಹಲವು ಹೋರಾಟಗಳ ನಂತರ ಮಾರ್ಪಡಿಸಿದ ಆದೇಶವನ್ನು ದಿ. 6.10.2004 ರಂದು ಹೊರಡಿಸಿದೆ. ಅಂಗನವಾಡಿ ಕೇಂದ್ರಗಳನ್ನು ಗ್ರಾಮ ಪಂಚಾಯ್ತಿಗಳಿಗೆ ವಹಿಸಿರುವ ಈ ಆದೇಶದಲ್ಲಿ ಕೆಲವು ಲೋಪದೋಷಗಳಿದ್ದವು. ಈಗ ಮಾರ್ಪಡಿಸಿ ಹೊರಡಿಸಿದ ಆದೇಶದ ಪ್ರಕಾರ, ಮೊದಲಿದ್ದಂತೆ, ಅಂಗನವಾಡಿ ನೌಕರರ ಸಾಂದರ್ಭಿಕ ರಜೆಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮೂಲಕ ಪಡೆಯುವುದು; ಹಾಜರಾತಿ ದೃಢೀಕರಣ ಪತ್ರ ಪಂಚಾಯ್ತಿಗಳಿಂದ ಪಡೆಯಬೇಕೆಂದು ವಲಯ ಸಭೆಗಳಲ್ಲಿ ಮೇಲ್ವಿಚಾರಕಿಯರಿಗೆ ವರದಿ ನೀಡುವುದು.

ಸಿಡಿಪಿಒ ಕಛೇರಿ ಮುಖಾಂತರವೇ ಗೌರವಧನ ಪಡೆಯುವುದು ಇತ್ಯಾದಿ. ಈ ಮಾರ್ಪಡಿಸಿದ ಆದೇಶ ಪಡೆಯಲು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) 4 ತಿಂಗಳಿಂದ ತಾಲೂಕು, ಜಿಲ್ಲೆಗಳಲ್ಲಿ ಪ್ರತಿಭಟನಾ ಸಮಾವೇಶ, ಜಿ.ಪಂ. ಮುತ್ತಿಗೆ ವಿಧಾನಸೌಧ ಚಲೊ ನಡೆಸಿ, ಧರಣಿ ಸತ್ಯಾಗ್ರಹ ಹೂಡಿತ್ತು. ಅಂತಿಮವಾಗಿ ಮಾಸಿಕ ವರದಿ ನಿರಾಕರಣೆ, ಪಲ್ಸ್ ಪೋಲಿಯೋ ಕಾರ್ಯ ನಿರಾಕರಿಸಲಾಗಿತ್ತು.

ಬಿಜೆಪಿಯೊಳಗಿನ ವಿವಾದಗಳ ಅಂತರಾಳವೇನು?

ಪುಟ 5 ರಿಂದ

ಎಕ್ಸ್‌ಪ್ರಸ್ ಸಂಪಾದಕೀಯ ಹೇಳಿದೆ (ನವೆಂಬರ್ 8)

ಉಮಾಭಾರತಿ, ಪ್ರಮೋದ್ ಮಹಾಜನ್ ಇತ್ಯಾದಿಗಳ ನಡುವೆ ಪರಸ್ಪರ ಕೆಸರು ಎರಚಾಟದ ಬಗ್ಗೆ ಇಲ್ಲಿ ಏನೂ ಹೇಳಬೇಕಾಗಿಲ್ಲ. ಮಹಾರಾಷ್ಟ್ರದಲ್ಲಿನ ಪರಾಭವದ ನಂತರದ ಪರಿಸ್ಥಿತಿಯಿಂದ ಪಕ್ಷವನ್ನು ಹೊರತರಲು ಆರ್‌ಎಸ್‌ಎಸ್ ಆ ಪಕ್ಷದ ಕಡಿವಾಣವನ್ನು ಅಡ್ವಾಣಿಯವರ ಕೈಗೆ ಕೊಡದ ಬೇರೆ ದಾರಿಯಿರಲಿಲ್ಲ. ಆದರೆ ಅದೊಂದು ತಾತ್ಕಾಲಿಕ ವ್ಯವಸ್ಥೆಯಷ್ಟೇ ಆಗಿರಲು ಸಾಧ್ಯ. ವಾಜಪೇಯಿ ಮತ್ತು ಅಡ್ವಾಣಿಯವರ ವಯಸ್ಸನ್ನು ಪರಿಗಣಿಸಿದರೆ ಪಕ್ಷದ ಎರಡನೇ ಹಂತದ ಮುಖಂಡರು ಪಕ್ಷದ ಹತೋಟಿ ಪಡೆಯಲು ನೂಕಾಟಕ್ಕೆ ಸಿದ್ಧರಾಗುತ್ತಿದ್ದಾರೆ ಎಂದು ಪತ್ರಿಕೆಗಳು ಹೇಳುತ್ತಿವೆ.

ಆದರೆ **ಬಿಜೆಪಿಯೊಳಗಿನ ಅಧಿಕಾರದ ಹೋರಾಟದ ಬಗ್ಗೆ ಸಂತೋಷಪಡಬೇಕಾಗಿಲ್ಲ. ಏಕೆಂದರೆ ಕೊನೆಗೆ ಇದರಲ್ಲಿ ಯಾರೂ ಗೆದ್ದರೂ ಮಾತು ನಡೆಯುವುದು ಆರ್‌ಎಸ್‌ಎಸ್ ನದ್ದೇ.** ಹಿಂದೂಸ್ತಾನ್ ಟೈಮ್ಸ್ ಹೇಳಿದಂತೆ 'ಬಿಜೆಪಿ ರಾಷ್ಟ್ರೀಯ ಜನಾದೇಶ ಕಳಕೊಂಡದ್ದು ಬಹಳ ಕಮ್ಮಿ ಹಿಂದುತ್ವ ಹಾಗೂ ಬಹಳ ಹೆಚ್ಚು ಉತ್ತಮ ಆಡಳಿತದಿಂದೇನೂ ಅಲ್ಲ, ಬದಲಾಗಿ ಬಹಳ ಹೆಚ್ಚು ಹಿಂದುತ್ವ ಹಾಗೂ ಬಹಳಕಮ್ಮಿ ಉತ್ತಮ ಆಡಳಿತದಿಂದಾಗಿ" ಇಂದು ಪಕ್ಷಕ್ಕೆ ಹೋರಾಡಲು ಯಾವುದೇ ನಿಜವಾದ ಪ್ರಶ್ನೆಗಳಿಲ್ಲ. ಜನಗಳ ಜ್ವಲಂತ ಸಮಸ್ಯೆಗಳು ಅದಕ್ಕೆ ಪ್ರಶ್ನೆಗಳೇ ಅಲ್ಲ. ಅತ್ತ ಆರ್‌ಎಸ್‌ಎಸ್‌ಗೆ ರಾಮಮಂದಿರ ಸದಾ ಒಂದು ಪ್ರಿಯ ಪ್ರಶ್ನೆಯಾಗಿದ್ದು ವಿಹೆಚ್‌ಪಿ ತನ್ನ ಆಶೀರ್ವಾದದೊಂದಿಗೆ ಒಂದು ಆಂದೋಲನ ಆರಂಭಿಸಲಿದೆ, ಇದಕ್ಕೆ ಬೆಂಬಲ ನೀಡುವುದು ಅಥವಾ ಬಿಡುವುದು ಬಿಜೆಪಿಗೆ ಬಿಟ್ಟದ್ದು ಎಂದು ಆರ್‌ಎಸ್‌ಎಸ್ ವಕ್ತಾರರು ಹರಿದ್ವಾರದಲ್ಲಿ ಹೇಳಿದ್ದಾರಂತೆ.



ಹೀಗೆ ಬಿಜೆಪಿಯಿಂದ ತಾನೇನು ನಿರೀಕ್ಷಿಸುತ್ತೇನೆ ಎಂದು ಆರ್‌ಎಸ್‌ಎಸ್ ಸ್ಪಷ್ಟಪಡಿಸಿದೆ. ಒಂದೆಡೆ ಸಂಘ ಪರಿವಾರದ ಇತರ ಸಂಘಟನೆಗಳು ಕೋಮವಾದಿ ದೊಂಬಿ ಎಬ್ಬಿಸುವ ಕೆಲಸ ಮಾಡುತ್ತಿದ್ದರೆ, ಇನ್ನೊಂದೆಡೆ ಬಿಜೆಪಿ ಅಧಿಕಾರಕ್ಕಾಗಿ ಇತರ ಪಕ್ಷಗಳನ್ನು ಸೆಳೆಯುವ ಕೆಲಸ ನಡೆಸುವ ಶ್ರಮವಿಭಜನೆ ಈಗ ನಿರ್ನಾಮವಾಗುತ್ತಿರುವಂತೆ ಕಾಣುತ್ತಿದೆ. ಬಿಜೆಪಿ 20002 ರಲ್ಲಿ ಗುಜರಾತ್ ಚುನಾವಣೆಗಳನ್ನು ಗೆದ್ದದ್ದು 'ಹಿಂದುತ್ವ'ದಿಂದಾಗಿ ಎಂದು ವಿಹೆಚ್‌ಪಿ ಮುಖಂಡರು ಹೇಳಿದ್ದರು. ಅಂದರೆ ರಾಷ್ಟ್ರೀಯ ಮಟ್ಟದಲ್ಲೂ ಅದನ್ನೇ ಮಾಡಬೇಕಾಗಿತ್ತು ಎಂಬುದು ಅವರ ಸೂಚನೆ. ಈ ಪರಿವಾರದ ಯಜಮಾನನ ಯೋಚನೆಯೂ ಹಾಗೇ ಇದೆ ಎಂಬುದೂ ಸ್ಪಷ್ಟ. ನವದೆಹಲಿಯ ಆರ್‌ಎಸ್‌ಎಸ್ ಮುಖ್ಯಾಲಯದಲ್ಲಿ ವಾಜಪೇಯಿ, ಅಡ್ವಾಣಿಯವರನ್ನು ಭೇಟಿ ಮಾಡಲು ಆರ್‌ಎಸ್‌ಎಸ್ ಮುಖ್ಯಸ್ಥ ಸುದರ್ಶನ್‌ರವರ ನಕಾರ, ಹರಿದ್ವಾರದಲ್ಲಿ ಆರ್‌ಎಸ್‌ಎಸ್ ಸಭೆಯಲ್ಲಿ ಅಡ್ವಾಣಿಯವರ ಹಾಜರಾತಿಯನ್ನು ಪ್ರತಿಭಟಿಸಿ ವಿಹೆಚ್‌ಪಿ ಬಹಿಷ್ಕಾರ, ಬಿಜೆಪಿ ಹಿಂದುತ್ವಕ್ಕೆ ಮರಳಬೇಕೆಂದು ಆರ್‌ಎಸ್‌ಎಸ್ ಅಂತಿಮ ಗಡುವು ನೀಡಿದೆ ಎಂಬ ಪ್ರವೀಣ ತೊಗಾಡಿಯಾ ಹೇಳಿಕೆ, ಇಂತಹದ್ದೇನೂ ನೀಡಿಲ್ಲ, 'ದಾರಿ ಸರಿಪಡಿಸಿ' ಎಂದಷ್ಟೇ ಹೇಳಿದ್ದೇವೆ ಎಂದು ಆರ್‌ಎಸ್‌ಎಸ್ 'ಪ್ರಮಾಣ ಪತ್ರ' - ಇವೆಲ್ಲಾ ಬಿಜೆಪಿ ಉನ್ಮತ್ತ ಕೋಮುವಾದಿ ಅಜೆಂಡಾವನ್ನು ಪರೋಕ್ಷವಾಗಿ ಅನುಸರಿಸುವ ಬದಲು ಬಹಿರಂಗವಾಗಿಯೇ ಅದನ್ನು ಅನುಸರಿಸುವಂತೆ ಆರ್‌ಎಸ್‌ಎಸ್ ಹೇಗೆ ಅದರ ಕೈ ತಿರುಚುತ್ತಿದೆ ಎಂಬುದರ ಸ್ಪಷ್ಟ ಸಂಕೇತಗಳು.

ಜನ ಸಾಮಾನ್ಯರಿಗೆ ಕೃತಜ್ಞರಾಗಿರಬೇಕು

ಆದರೆ ಇಡೀ ಭಾರತೀಯ ಹಂದರಕ್ಕೆ ಇದು ಅಪಾಯಕಾರಿ ಕೂಡಾ. ಆದರೂ ಈ ದೇಶದ ಜನತೆ ವಹಿಸಿದ ಪಾತ್ರಕ್ಕೆ ನಮನ ಸಲ್ಲಿಸದಿರುವುದು ಕೃತಘ್ನತೆಯಾಗುತ್ತದೆ. ನಮ್ಮ ಜನಸಮೂಹಗಳು ಬಡವರು, ಸರಿಯಾಗಿ ಊಟವಿಲ್ಲ, ಬಟ್ಟೆಯಿಲ್ಲ, ಆದರೆ ಅವರು ಕಟ್ಟಾ ಜಾತ್ಯತೀತರು. ಅಲ್ಲದೆ ಕೋಮುವಾದಿ ಕೂಟ ನಿಜಮುಖವನ್ನು ಅವರು ಸ್ವತಃ ಕಂಡಿದ್ದಾರೆ. ಆದ್ದರಿಂದಲೇ ರಾಷ್ಟ್ರಮಟ್ಟದಿಂದ ಸ್ಥಳೀಯ ಮಟ್ಟದವರೆಗೆ, ಎಲ್ಲಾ ವಯೋಗುಂಪಿನವರ ನಡುವೆ ಆರ್‌ಎಸ್‌ಎಸ್ ಹತೋಟಿಯ 10 ಸಾವಿರಕ್ಕೂ ಹೆಚ್ಚು ಸಂಸ್ಥೆಗಳ ಜಾಲವೇ ಇದ್ದರೂ ಈ ದೇಶದ ಜನಸಮೂಹಗಳು ಬಿಜೆಪಿಗೆ ಅವಮಾನಕಾರೀ ಪರಾಭವವನ್ನು ಉಣಿಸಿದ್ದಾರೆ ಐದೇ ತಿಂಗಳಲ್ಲಿ ಎರಡು ಬಾರಿ. ನಿಜ ಸಂಗತಿಯೆಂದರೆ ಜನಗಳು ಕೋಮುವಾದಿ ಪ್ರಚಾರದಿಂದ ವಿಚಲಿತರಾಗದಿರುವುದೇ ಬಿಜೆಪಿಯ ಈಗಿನ ಬಿಕ್ಕಟ್ಟಿಕೆ ಕಾರಣ. ಈಗ ಇನ್ನಷ್ಟು ಕರ್ಕಶ ಕೋಮುವಾದೀ ಪ್ರಚಾರ ನಡೆಸಿ ಕಳಕೊಂಡ ಆಧಾರವನ್ನು ಮತ್ತೆ ಪಡೆಯಬಹುದು ಎಂದು ಸಂಘ ಪರಿವಾರ ಯೋಜಿಸಿದ್ದರೆ, ಅದು ನಮ್ಮ ಜಾತ್ಯತೀತ ಹಂದರಕ್ಕೆ ಹಾಗೂ ನಾಗರಿಕ ಅಸ್ತಿತ್ವಕ್ಕೆ ಒಂದು ಬೆದರಿಕೆಯಾಗಿದ್ದರೂ, ಭಾರತದ ಜನಸಾಮಾನ್ಯರಿಗೆ ಈ ಬೆದರಿಕೆಯ ಅರಿವಿದೆ, ಅವರು ಇನ್ನೂ ಶಕ್ತಿಶಾಲೀ ಪ್ರತ್ಯುತ್ತರ ನೀಡುತ್ತಾರೆ ಎಂಬ ಭರವಸೆಯನ್ನು ಇಟ್ಟುಕೊಳ್ಳಬಹುದು. ಈಗಿನ ಅಗತ್ಯ ... ಜಾತ್ಯತೀತ ಶಕ್ತಿಗಳು ತಮ್ಮ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ದೇಶದ ಐಕ್ಯತೆಗಾಗಿ ಜನಸಮೂಹಗಳನ್ನು ನಮ್ಮ ಸಮಿ ಸಂಸ್ಕೃತಿಯ ರಕ್ಷಣೆಗೆ ಅಣಿನೆರೆಸಬೇಕು.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಆರೋಗ್ಯ ಸೌಲಭ್ಯಗಳ ನಿರಾಕರಣೆ : ತಡೆಯುವುದು ಹೇಗೆ?

ಆರೋಗ್ಯ ಪ್ರತಿಯೊಬ್ಬರ ಹಕ್ಕು. ನಾಗರೀಕ ಸರ್ಕಾರ ಇದನ್ನು ಸಂರಕ್ಷಿಸಬೇಕಿದೆ. ಆದರೆ ಆರೋಗ್ಯ ಸೌಲಭ್ಯಗಳ ನಿರಾಕರಣೆ ಎಲ್ಲಡೆಯೂ ಕಾಣುತ್ತಿದೆ. ಅದನ್ನು ತಡೆಯುವುದು ಹೇಗೆ?

ವಿಶ್ವ ಆರೋಗ್ಯ ಸಂಸ್ಥೆಯ (ಆಲ್ಮಾಅಟಾ) 2000ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ" ಎಂಬ ಘೋಷಣೆಯು 25 ವರ್ಷಗಳು ಸಂದಿದೆ. ಜನಾರೋಗ್ಯದ ಇತಿಹಾಸದಲ್ಲಿ ಈ ಘೋಷಣೆ ಬಹಳ ಪ್ರಾಮುಖ್ಯತೆ ಪಡೆದಿದೆ. ಜನಾರೋಗ್ಯ ಸಾಧಿಸಲು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸುವ ಅಗತ್ಯತೆಯನ್ನು ಈ ಘೋಷಣೆ ಸಾರಿ ಹೇಳುತ್ತದೆ. ಈ ಘೋಷಣೆ ಜಾರಿಗೆ ತರಲು ಆಗದಿದದರೂ ಈ ಘೋಷಣೆ ತನ್ನ ಮಹತ್ವವನ್ನು ಕಳೆದುಕೊಂಡಿಲ್ಲ. ಈ ಇಪ್ಪತ್ತೈದು ವರ್ಷ ಕಳೆದ ಸಂದರ್ಭವನ್ನು ಸರಕಾರಗಳು ಮರೆತರೂ ಜನಾರೋಗ್ಯ ಸಂಘಟನೆಗಳು ಮರೆಯುವಂತಿಲ್ಲ. ಯಾವುದೇ ಸಮಾಜದ ಆರೋಗ್ಯ (ಜನಾರೋಗ್ಯ) ಸುಧಾರಿಸಲು ಈ ಘೋಷಣೆ ಆಧಾರವಾಗಿದೆ. ಅಲ್ಮಾ ಆಟಾ ಘೋಷಣೆಗೆ ಭಾರತ ಸಹಿ ಹಾಕಿದೆ ಹಾಗೂ ಆರೋಗ್ಯ ಸೌಲಭ್ಯಗಳನ್ನು ಸುಧಾರಿಸಲು ಪ್ರಯತ್ನಿಸುತ್ತಿದೆ. ಸೌಲಭ್ಯಗಳು ಸ್ವಲ್ಪಮಟ್ಟಿಗೆ ಸುಧಾರಿಸಿದ್ದರೂ, ಆರೋಗ್ಯ ಸೌಲಭ್ಯಗಳ ನಿರಾಕರಣೆಯಾಗುತ್ತಿದೆ. ಈ ಸಂಧರ್ಭದ ಸಮಯದಲ್ಲಿ ಜನಾರೋಗ್ಯ ಸಂಘಟನೆಗಳು ಒಂದು ವಿನೂತನ ಕಾರ್ಯಕ್ರಮವನ್ನು ಜಾರಿಗೆ ತಂದಿವೆ. ಅದೇ ಜನಾರೋಗ್ಯ ನಿರಾಕರಣೆಯ ವಿಷಯವನ್ನು ದಾಖಲಿಸುವುದು.

ಜನಾರೋಗ್ಯ ನಿರಾಕರಣೆ ಅಂದರೇನು? ಇಂದು ಆರೋಗ್ಯ ಸೌಲಭ್ಯಗಳು ಹೆಚ್ಚುತ್ತಲಿವೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಸುಧಾರಿಸದಿದ್ದರೂ ಪಟ್ಟಣಗಳಲ್ಲಿ ದ್ವಿತೀಯ ಹಾಗೂ ತೃತೀಯ ಆರೋಗ್ಯ ವ್ಯವಸ್ಥೆಗಳು ಹೆಚ್ಚುತ್ತಲಿವೆ. ಸರಕಾರಿ ಹಾಗೂ ಖಾಸಗೀ ವ್ಯವಸ್ಥೆಗಳಲ್ಲಿ ಆರೋಗ್ಯ ಸೌಲಭ್ಯಗಳು ಲಭ್ಯವಿದ್ದರೂ ಅನೇಕರಿಗೆ ಅದು ದೊರಕುತ್ತಿಲ್ಲ. ರೋಗ ಪರೀಕ್ಷೆಯಿಂದ ಹಿಡಿದು ರೋಗಿ ಮನೆಗೆ ಹೋಗುವವರೆಗೂ ಜವಾಬ್ದಾರಿ ವಹಿಸಬೇಕಾದ ಆರೋಗ್ಯ ವ್ಯವಸ್ಥೆ ಇಂದು ಬೇಜವಾಬ್ದಾರಿಯನ್ನು ತೋರಿಸುತ್ತಿದೆ. ಇದರಿಂದಾಗಿ ಜನತೆ ಮೂಕ ಪೇಕ್ಷಕರಂತೆ ಸುಮ್ಮನೇ ಕುಳಿತು ಕೊಳ್ಳುವಂತಾಗಿದೆ. ನಮ್ಮಲ್ಲಿ ಜನಸಾಮಾನ್ಯರಿಗೆ (ಗ್ರಾಹಕ) ನ್ಯಾಯ ದೊರಕಿಸಿ ಕೊಡುವ ವ್ಯವಸ್ಥೆ ಇದ್ದರೂ, ಅದನ್ನು ಜನತೆ ಉಪಯೋಗಿಸುತ್ತಿಲ್ಲ ಹಾಗೂ ಅದು ಸರಿಯಾಗಿ ಬಳಕೆಯಾಗುತ್ತಿಲ್ಲ. ಬಡತನ, ಅನಕ್ಷರತೆ ಎಲ್ಲೆಡೆಯೂ ತಾಂಡವವಾಡುತ್ತಿರುವುದರಿಂದ, ಜನಾರೋಗ್ಯದ ಲಾಭ ಪಡೆಯಲು ಕೆಲವರೇ ಮುಂದಾಗಿರುವುದರಿಂದ, ಜನಸಾಮಾನ್ಯರಿಗೆ ನ್ಯಾಯ ದೊರಕುತ್ತಿಲ್ಲ ಹಾಗೂ ಆರೋಗ್ಯ ಸೌಲಭ್ಯಗಳ ನಿರಾಕರಣೆಯಾಗಿದೆ.

ಈ ಸಂದರ್ಭದಲ್ಲಿ ರಾಷ್ಟ್ರೀಯ ಮಟ್ಟದ ಜನಾರೋಗ್ಯ ಅಭಿಯಾನವು ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಸಹಯೋಗದಿಂದ ಆರೋಗ್ಯ ಸೌಲಭ್ಯ ನಿರಾಕರಣೆಯಾದವರೊಂದಿಗೆ ಚರ್ಚಿಸಿ, ಅದನ್ನು ದಾಖಲಿಸುವ ಪ್ರಯತ್ನ ಮಾಡಲು ಪ್ರಾರಂಭಿಸಿದೆ. ಭಾರತದ ಇತಿಹಾಸದಲ್ಲಿ ಇದೇ ಮೊತ್ತ ಮೊದಲನೇ ಬಾರಿಗೆ, ರಾಷ್ಟ್ರೀಯ ಮಾನವ ಆಯೋಗ ಸಂಸ್ಥೆ ಖಾಸಗೀ ಸಂಸ್ಥೆಯೊಂದಿಗೆ (ಜನಾರೋಗ್ಯ) ಸೇರಿ ಜನಾರೋಗ್ಯ ನಿರಾಕರಣೆಯನ್ನು ಗಂಭೀರವಾಗಿ ಪರಿಗಣಿಸಿ ಧಾಖಲಿಸಲು ಹಾಗೂ ಬದಲಾವಣೆ ತರಲು ಮುಂದಾಗಿರುವುದು.

ಈ ಪ್ರಕ್ರಿಯೆಯೇ ಜನಾರೋಗ್ಯ ನಿರಾಕರಣೆಯ ವಿವಿಧ ರೂಪಗಳನ್ನು ಗುರುತಿಸಿ ಅದನ್ನು ಸರಿಪಡಿಸಲು ಪ್ರಯತ್ನಿಸುವುದು. ಇಲ್ಲಿ ವ್ಯಕ್ತಿಕವಾಗಿ ಯಾರ ಮೇಲೂ ಕ್ರಮ ತೆಗೆದುಕೊಳ್ಳುವುದಿಲ್ಲ ಹಾಗೂ ದೂರು ಕೊಡುವ ವ್ಯಕ್ತಿಗಳಿಗೆ ನ್ಯಾಯ ಒದಗಿಸಿಕೊಡುತ್ತೇವೆ ಎಂದು ಹೇಳಲಾಗುವುದಿಲ್ಲ, ವ್ಯವಸ್ಥೆಯ ಲೋಪದೋಷಗಳನನು ಗುರುತಿಸಿ ಅದನ್ನು ಸರಿಪಡಿಸಲು ಸಂಬಂಧಪಟ್ಟ ವೈದ್ಯಕೀಯ ಇಲಾಖೆಯೊಂದಿಗೆ ಚರ್ಚೆ ಮಾಡಲಾಗುವುದು ಹಾಗೂ ಸಾಧ್ಯವಿದ್ದ ಕ್ರಮಗಳನ್ನು ಕೈಗೊಳ್ಳಲಾಗುವುದು.

ಈ ಜನ ಹೇಳಿಕೆ (ಜನ್‌ಸುನ್‌ವಾಯಿ) ದಾಖಲೆಗಳನ್ನು ದೇಶದಲ್ಲಿ ಆರು ಸ್ಥಳಗಳಲ್ಲಿ ಆಯೋಜಿಸಲಾಗುವುದು. ಈಗಾಗಲೇ ಪಶ್ಚಿಮ ಭಾರತದ ಜನಹೇಳಿಕೆ ಭೋಪಾಲ್‌ನಲ್ಲಿ ಹಾಗೂ ಇತ್ತೀಚಿಗೆ ಧಕ್ಷಿಣ ಭಾರತದ (ಕರ್ನಾಟಕ, ಕೇರಳ, ಆಂಧ್ರ ಪ್ರದೇಶ, ತಮಿಳುನಾಡು) ಜನಹೇಳಿಕೆ ಚೆನ್ನೈನಲ್ಲಿ ಏರ್ಪಡಿಸಲಾಗಿತ್ತು. ಈ ಹೇಳಿಕೆಗಳಲ್ಲಿ ಮಾನವ ಹಕ್ಕು ಆರೋಗ್ಯದ ಸದಸ್ಯರು (ನ್ಯಾಯಾಧೀಶ) ಸರಕಾರದ ಪ್ರತಿನಿಧಿಗಳು ಹಾಗೂ ಜನಾರೋಗ್ಯ ಸಂಸ್ಥೆಯ ಸದಸ್ಯರು, ಆರೋಗ್ಯ ನಿರಾಕರಣೆಯ ಹೇಳಿಕೆಗಳನ್ನು ಜನರಿಂದಲೇ ಕೇಳಿ ತೀರ್ಮಾನಕ್ಕೆ ಬರುತ್ತಾರೆ. ನ್ಯಾಯಾಧೀಶರು ಕೊನೆಗೆ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸಲು ಆರೋಗ್ಯ ಅಧಿಕಾರಿಗಳಿಗೆ ಸೂಚನೆ ನೀಡುತ್ತಾರೆ. ಈ ಪ್ರಕ್ರಿಯೆ ದೇಶದ ಇನ್ನೂ ನಾಲ್ಕು ಸ್ಥಳಗಳಲ್ಲಿ ನಡೆಯಲಿದೆ. ಈಗಾಗಲೇ ಈ ಹೇಳಿಕೆಗಳು ಸಾಕಷ್ಟು ಪರಿಣಾಮ ಕಾರಿಯಾಗಿ ಕಂಡುಬರುತ್ತಿವೆ. ಅನೇಕ ಖಾಸಗೀ ಸರ್ಕಾರೇತರ ಸಂಘಟನೆಗಳು ಹಾಗೂ ಸ್ವಯಂ ಸೇವಾ ಸಂಘಟನೆಗಳು ಜನರಿಂದಲೇ ಹಣ ಸಂಗ್ರಹ ಮಾಡಿ ಜನಹೇಳಿಕೆಗೆ ಆರೋಗ್ಯ ನಿರಾಕರಣೆಯಾದವರನ್ನು ಕರೆತಂದು, ಜನಹೇಳಿಕೆಯಲ್ಲಿ ಭಾಗವಹಿಸಲು ಸಹಾಯ ಮಾಡುತ್ತಿವೆ.

ಇಂತಹ ಇನ್ನೂ ಹಲವಾರು ಜನಹೇಳಿಕೆಗಳು ಮುಂದಿನ ದಿನಗಳಲ್ಲಿ ಜಾರಿಗೆ ಬಂದು ಜನಾರೋಗ್ಯ ಪರಿಸ್ಥಿತಿಯಲ್ಲಿ ಬದಲಾವಣೆಯಾಗಲಿದೆ ಎಂಬುದು ಜನಾರೋಗ್ಯ ಆಂದೋಲನದ ಆಶಯ.

ಇತ್ತೀಚಿಗೆ ಚೆನ್ನೈನಲ್ಲಿ ನಡೆದ ದಕ್ಷಿಣ ರಾಜ್ಯಗಳ ಜನಹೇಳಿಕೆ ಕಾರ್ಯಕ್ರಮದಲ್ಲಿ ಉತ್ತರ ಕರ್ನಾಟಕದ ಹುನಗುಂದ ತಾಲ್ಲೂಕಿನ (ಬಾಗಲುಕೋಟೆ ಜಿಲ್ಲೆ) ಒಂದು ವರದಿ ನನ್ನ ಗಮನ ಸೆಳೆಯಿತು. ಅಲ್ಲಿ ಜನಾರೋಗ್ಯ ಸೇವೆಗಳ ನಿರಾಕರಣೆಯಾದ ದಾಖಲೆಯನ್ನು ಸ್ವತಃ ಕಂಡುಕೊಳ್ಳಲು ನಾನು ಹುನಗುಂದ ತಾಲ್ಲೂಕಿಗೆ ಪ್ರಯಾಣ ಬೆಳೆಸಿದೆ. ಹುನಗುಂದ ತಾಲ್ಲೂಕಿನಲ್ಲಿ ನನ್ನ ಗೆಳೆಯ ಖಾಸಗೀ ವೈದ್ಯಕೀಯ ವೃತ್ತಿ ಮಾಡುತ್ತಿದ್ದುದರಿಂದ ಅವರ ಸಹಾಯದಿಂದ ನಾನು ಹುನಗುಂದ ತಾಲ್ಲೂಕಿನ ಒಂದು ಗ್ರಾಮಕ್ಕೆ ಹೋಗಿ ಜನರೊಂದಿಗೆ ಆರೋಗ್ಯ ಪರಿಸ್ಥಿತಿ ಬಗ್ಗೆ ಚರ್ಚಿಸಿದೆ.

ನಾನು ಹೋದ ಗ್ರಾಮ ಕರಡಿ ಪ್ರಾಥಮಿಕ ಕೇಂದ್ರಕ್ಕೆ ಹತ್ತಿರವಿರುವ ಹೇಮವಾಡಗಿ ಗ್ರಾಮ. ನನ್ನ ಸ್ನೇಹಿತನ ಹತ್ತಿರದ ಸಂಬಂಧಿಕರು ಒಬ್ಬರು ಅಲ್ಲಿ ವಾಸವಾಗಿದ್ದಾರೆ. "ಅವರಿಗೆ ನಾನು ಬಂದ ಉದ್ದೇಶವನ್ನು ತಿಳಿಸಿ" ಗ್ರಾಮದ ಕೆಲವು ಜನರೊಂದಿಗೆ ಆರೋಗ್ಯ ಸೌಲಭ್ಯಗಳ ವಿಷಯವಾಗಿ ತಿಳಿಯಲು ಬಂದಿರುವೆ. ಸಹಕರಿಸಬೇಕು" ಎಂದು ಕೋರಿದೆ. ನನ್ನ ಪರಿಚಯ ಮಾಡಿಕೊಂಡ ನಂತರ ಆರೋಗ್ಯ ಸೌಲಭ್ಯಗಳ ಚರ್ಚೆ ಮಾಡಿದೆ. ಅದರ ಸಾರಾಂಶ ಹೀಗಿದೆ:

ಗ್ರಾಮೀಣ ಪ್ರದೇಶಗಳಲ್ಲಿ ಆಧುನಿಕ ಪದ್ಧತಿಯ ಆರೋಗ್ಯ ವ್ಯವಸ್ಥೆ ಕೇವಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದೊರಕುತ್ತಿದೆ. ಈ ಪ್ರದೇಶದಲ್ಲಿ ಬೇರಾವ ಆರೋಗ್ಯ ಕೇಂದ್ರಗಳು ಹಾಗೂ ಆಸ್ಪತ್ರೆಗಳಿಲ್ಲ. ಈ ನಕಾಶೆಯಲ್ಲಿ ತೋರಿಸಿದಂತೆ ಈ ಸುತ್ತು ಮುತ್ತಲಿನ ಗ್ರಾಮಗಳಲ್ಲಿ ಐದಾರು ಆರೋಗ್ಯ ಕೇಂದ್ರಗಳಿವೆ. ಹುನಗುಂದದಲ್ಲಿ ಒಂದು ಜನರಲ್ ಆಸ್ಪತ್ರೆಯೂ ಇದೆ. ಹೇಮವಾಡಗಿ ಗ್ರಾಮದ ಜನರು ಹಾವರಗಿ ಆರೋಗ್ಯ ಕೇಂದ್ರಕ್ಕೆ ಹೋಗಬೇಕಂತೆ. ಹಾವರಗಿ ಆರೋಗ್ಯ ಕೇಂದ್ರ ಈ ಗ್ರಾಮದಿಂದ 45 ಕಿ.ಮೀ ದೂರದಲ್ಲಿದೆ. ಈ ಗ್ರಾಮಕ್ಕೆ ಹತ್ತಿರವಿರುವ ಆರೋಗ್ಯ ಕೇಂದ್ರ ಕರಡಿ. ಆದರೆ ಅಲ್ಲಿ ಚಿಕಿತ್ಸೆಗೆ ಹೋದರೆ "ನೀವೇಕೆ ಇಲ್ಲಿಗೆ ಬರುತ್ತೀರಿ, ನಿಮ್ಮ ಆರೋಗ್ಯ ಕೇಂದ್ರ ಹಾವರಗಿ, ಅಲ್ಲಿಗೇ ಹೋಗಬೇಕು ನೀವು" ಎಂದು ಹೇಳುವರಂತೆ. ಇದೇ ರೀತಿ ಇತರೇ ಆರೋಗ್ಯ ಕೇಂದ್ರಗಳಿಗೆ ಹೋಗಬೇಕಾದ ಜನರಿಗೂ ಇದೇ ಸಮಸ್ಯೆ ಇದೆಯಂತೆ. ಇದರಿಂದಾಗಿ ಸಾಮಾನ್ಯ ಕಾಯಿಲೆಗಳಲ್ಲದೆ, ಜೀವಾಪಾಯ ಉಂಟು ಮಾಡುವ ಕಾಯಿಲೆಗಳಿಗೂ ಒಮ್ಮೊಮ್ಮೆ ಆರೋಗ್ಯ ಕೇಂದ್ರಕ್ಕೆ ಹೋಗಲಾಗುವುದಿಲ್ಲ. ಅಂದರೆ ಸಾವಿರಾರು ಗ್ರಾಮೀಣ ಜನರಿಗೆ ಚಿಕಿತ್ಸೆ ನಿರಾಕರಿಸಿದಿದಂತಲ್ಲವೆ?

ಈ ಪರಿಸ್ಥಿತಿಗೆ ಕಾರಣ, ರಾಜಕೀಯ ಒತ್ತಡಗಳಿಂದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆದಿರುವುದು. ಕರ್ನಾಟಕದಲ್ಲಿ ಈ ಕಾರಣಗಳಿಂದಾಗಿಯೇ 1300 ಆರೋಗ್ಯ ಕೇಂದ್ರಗಳ ಬದಲು 1675 ಆರೋಗ್ಯ ಕೇಂದ್ರಗಳಿವೆ ಎಂದು ಆರೋಗ್ಯ ನಿರ್ದೇಶಕರು ಹೇಳುತ್ತಾರೆ. ಯಾರಿಗೆ ಆರೋಗ್ಯ ಸೌಲಭ್ಯ ಬೇಕೋ ಅವರಿಗೆ ಆರೋಗ್ಯ ಸೌಲಭಯ ದೊರಕುತ್ತಿಲ್ಲ!

ಈ ಗೊಂದಲವನ್ನು ಜಿಲ್ಲಾಧಿ ಕಾರಿಯೇ ಸರಿಪಡಿಸಬಹುದಾಗಿದೆ. ಆದರೆ ಅದರ ಜವಾಬ್ದಾರಿ



ತೆಗೆದುಕೊಳ್ಳಲು ಅವರು ತಯಾರಿಲ್ಲ. ಇದರ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ.

ಕರ್ನಾಟಕದಲ್ಲಿ ಇದೇ ರೀತಿ ಸಮಸ್ಯೆ ಹಲವಾರು ಕಡೆಗಳಲ್ಲಿರಲು ಸಾಧ್ಯ. ಸರಕಾರ ಈ ಸಮಸ್ಯೆಗೆ ಕೂಡಲೇ ಗಮನಹರಿಸದಿದ್ದರೆ, ಸಾವಿರಾರು ಜನರಿಗೆ ಆರೋಗ್ಯ ಸೌಲಭ್ಯವನ್ನು ನಿರಾಕರಿಸಿದಂತಲ್ಲವೇ?

ಆರೋಗ್ಯ ಕೇಂದ್ರಗಳು ಹತ್ತಿರವಿರದ ಕಾರಣ ಅನೇಕರು ಕೆಲವು ಭೀಕರ ರೋಗಗಳಿಂದ ಬಳಲುತ್ತಿದ್ದರೂ, ಅವರ ಕಾಯಿಲೆ ಏನೆಂದು ಕಂಡುಹಿಡಿಯಲಾಗುತ್ತಿಲ್ಲವೆಂದು ಗ್ರಾಮಸ್ಥರು ಹೇಳಿದರು. ಅನೇಕರಿಗೆ ಕ್ಷಯ ರೋಗವಿದ್ದು, ಮೊದಲನೇ ಬಾರಿಗೆ ಪರೀಕ್ಷೆಗೆ ಹೋಗಲು ಆಗುವುದಿಲ್ಲ. ಉದಾ: ಈ ಕ್ಷಯ ರೋಗಿಗಳು ಗ್ರಾಮದ ಇತರರಿಗೆ ಹರಡುತ್ತಿದ್ದುದನ್ನು ತಡೆಯಲು ಅವರಿಗೆ ಚಿಕಿತ್ಸೆ ಅಗತ್ಯವಿರುತ್ತದೆ. ಚಿಕಿತ್ಸೆ ಯಾವ ಹಣವಿಲ್ಲದೇ ದೊರಕುತ್ತಿದ್ದರೂ ಅದನ್ನು ಪಡೆಯಲು ಆಗುತ್ತಿಲ್ಲವೆಂಬುದು ಶೋಚನೀಯವೆಂದೆನಿಸಿತು. ಗ್ರಾಮದ ಜನರು ತಮ್ಮ ಸಮಸ್ಯೆಯನ್ನು ಬಗೆಹರಿಸಲು ಹಲವಾರು ಪ್ರತಯಿನಗಳನ್ನು ಮಾಡಿದ್ದಾಗಲೂ ಅದು ಪರಿಣಾಮಕಾರಿಯಾಗಿರಲಿಲ್ಲ.

ನಾನು ಚರ್ಚಿಸುತ್ತಿದ್ದ ಸಮಯದಲ್ಲಿ, ಅಲ್ಲಿಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಯೊಬ್ಬರು ಆಕಸ್ಮಿಕವಾಗಿ ಬಂದರು. ಅವರನ್ನು ಪರಿಚಯ ಮಾಡಿಕೊಂಡು ಆರೋಗ್ಯ ಕೇಂದ್ರದ ಬಗ್ಗೆ ಕೆಲವು ವಿಷಯಗಳನ್ನು ತಿಳಿದುಕೊಳ್ಳಲು ನಿರ್ಧರಿಸಿದೆ.


ಆರೋಗ್ಯ ಕೇಂದ್ರಗಳು ಜನರಿಗೆ ಹತ್ತಿರದಲ್ಲಿಲ್ಲವೆಂಬ ಜನರ ಮಾತು ಸತ್ಯವೆಂದು ಖಚಿತವಾಯಿತು. ಅವರಿಂದ ಈ ಸಮಸ್ಯೆಗೆ ಪರಿಹಾರ ಗ್ರಾಮ ಹಾಗೂ ಆರೋಗ್ಯ ಕೇಂದ್ರಗಳ ಪುನರ್ ವಿಂಗಡಣೆ ಆರೋಗ್ಯ ಕೇಂದ್ರಗಳು ಗ್ರಾಮಗಳ ಪುನರ್ ವಿಂಗಡಣೆ ವಿಷಯ ಬಂದಾಗ, ವೈದ್ಯರು ಜಿಲ್ಲಾಧಿಕಾರಿಯ ಹತ್ತಿರ ಮಾತನಾಡಿ ದ್ದಾರಂತೆ, ಆದರೆ ಅದಕ್ಕೆ ಉತ್ತರ "ನಾನೇಕೆ ತಲೆಕೆಡಿಸಿಕೊಳ್ಳಬೇಕು, ನೀವೂ ಸುಮ್ಮನಿದ್ದು ಬಿಡಿ" ಎಂಬುದು.

ಆರೋಗ್ಯ ಜಿಲ್ಲಾಧಿಕಾರಿಗಳು ಆರೋಗ್ಯ ಕೇಂದ್ರ ಹಾಗೂ ವೈದ್ಯರ ಯಾವ ದೂರೂ ತೆಗೆದುಕೊಳ್ಳಲು ಸಿದ್ಧರಿಲ್ಲವಂತೆ. ದೂರು ಇರದೇ ಇರುವುದು ಒಪ್ಪಿಕೊಳ್ಳುವ ಮಾತು, ಆದರೆ ದೂರು ಇದ್ದರೆ ಸರಿಪಡಿಸಬೇಕಲ್ಲವೇ? ಬದಲಾವಣೆ, ಸುಧಾರಣೆ ಬಗ್ಗೆ ಜಿಲ್ಲಾಧಿಕಾರಿಗಳು ಆಸಕ್ತಿ ತೋರಿಸುವುದಿಲ್ಲವಂತೆ. ಜಿಲ್ಲಾಧಿಕಾರಿಗಳು ಎಲ್ಲ ವೈದ್ಯಾಧಿಕಾರಿಗಳು ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಸಾಧಿಸಬೇಕಾದ ಗುರಿಯನ್ನು ಮೊದಲೇ ನಿರ್ಧರಿಸಿ ತಿಳಿಸುತ್ತಾರಂತೆ. ಸಾಮಾನ್ಯವಾಗಿ ಎಲ್ಲರೂ ಆ ಗುರಿ ಸಾಧಿಸಿದ್ದೇವೆಂದು ವರದಿ ಕಳಿಸುತ್ತಾರಂತೆ. "ಈ ಪದ್ಧತಿಯಿಂದ ಅನೇಕ ಬಾರಿ ಸುಳ್ಳು ವರದಿಯಾಗಲು ಸಾಧ್ಯವೆಂದು ನಮ್ಮ ವೈದ್ಯರ ಅಭಿಪ್ರಾಯ".

ಜಿಲ್ಲಾಧಿಕಾರಿಗಳು ತಮ್ಮ ವೈದ್ಯರನ್ನು ಮಾಮೂಲಿ ಕೊಡಲು ಕೇಳುತ್ತಾರಂತೆ. ಮಾಮೂಲಿ ಎಂದರೆ ರೂ.2000-3000 ತಿಂಗಳಿಗೆ ಕೊಡುವ ಹಣ. ಅವರು ಮೇಲಿನವರಿಗೆ ಕೊಡಬೇಕಂತೆ. ಈ ಮಾಮೂಲಿ ಕೊಟ್ಟರೆ ರೋಗಿಗಳಿಂದ ಹಣ ತೆಗೆದುಕೊಳ್ಳಬಹುದಂತೆ ಹಾಗೂ ಮೇಲಿನವರಿಂದ ಯಾರಿಗೂ ತೊಂದರೆ ಇಲ್ಲವಂತೆ.

"ನಾವು ನಮ್ಮ ಗ್ರಾಮಗಳಿಗೆ ತಿಂಗಳಿಗೊಮ್ಮೆ ಭೇಟಿ ನೀಡುತ್ತೇವೆ. ತಿಂಗಳಿಗೊಂದು ವಾರ ನಮಗೆ ಡೀಸೆಲ್ ವಾಹನವನ್ನು ಕೊಡುತ್ತಾರೆ. ಆದರೆ 20 ಲೀಟರ್ ಡೀಸೆಲ್ ಮಾತ್ರ ಕೊಡುತ್ತಾರೆ. ಹೆಚ್ಚು ಡೀಸೆಲ್ ಬಳಕೆಯಾದರೆ ನಾವೇ ಭರಿಸಬೇಕು. ನಾವು ಗ್ರಾಮಗಳಿಗೆ ಹೋದಾಗ ಕ್ಷಯ ರೋಗಿಗಳಿದ್ದಾರೆಯೇ ಕೇಳಿ ತಿಳಿದುಕೊಳ್ಳುತ್ತೇವೆ. ಕ್ಷಯ ರೋಗಿಗಳಿಗೆ ಔಷಧಿಗಳನ್ನು ಕೊಡುತ್ತೇವೆ ಹಾಗೂ ಮಕ್ಕಳಿಗೆ ಲಸಿಕೆಗಳನ್ನು ಹಾಕುತ್ತೇವೆ. ಮಕ್ಕಳನ್ನು ಲಸಿಕೆ ಹಾಕಿಸಲು ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಬರದೇ ಇದ್ದುದರಿಂದ ನಾವೇ ಗ್ರಾಮಗಳಿಗೆ ಹೋಗಿ ಹಾಕುತ್ತೇವೆ. ಆದರೂ ಲಸಿಕಾ ಪ್ರಮಾಣ ಗುರಿಮುಟ್ಟಲು ಸಾಧ್ಯವಿಲ್ಲ. ಆದರೂ ಗುರಿ ಮುಟ್ಟಿದೆಯೆಂದು ಸುಳ್ಳು ವರದಿ ಕೇಳಿ ಪಡೆಯುತ್ತಾರೆ". ಚರ್ಚೆಗೆ ಇನ್ನೂ ಅನೇಕ ವಿಷಯಗಳಿದ್ದವು. ಆದರೆ ಸಮಯದ ಅಭಾವದಿಂದ ಅಲ್ಲಿಗೇ ನಿಲ್ಲಿಸಿದೆವು. ಚರ್ಚೆ ಮುಗಿದಾಗ ಸಂಜೆಯ ಐದು ಘಂಟೆಯಾಗಿತ್ತು. ಎಲ್ಲರಿಗೂ ಧನ್ಯವಾದಗಳನ್ನು ಹೇಳಿ ನಾನು ಹಿಂದಿರುಗಿದೆ.

ಆರೋಗ್ಯ ಕೇಂದ್ರಗಳು ಜನರಿಗೆ ದೂರವಾಗಿರುವುದು, ಇದರಿಂದಾಗಿ ದಿನನಿತ್ಯ ರೋಗ ಚಿಕಿತ್ಸೆ, ಸಾಂಕ್ರಾಮಿಕ ರೋಗಗಳ ಚಿಕಿತ್ಸೆಯಾಗದಿರುವುದು ಹಾಗೂ ಲಸಿಕಾ ಕಾರ್ಯಕ್ರಮ ಗುರಿ ಸಾಧಿಸದಿರುವುದು, ಆರೋಗ್ಯ ಸೌಲಭ್ಯದ ನಿರಾಕರಣೆಯೆಂದು ಪರಿಗಣಿಸ ಬಹುದು. ಇದನ್ನು ಸರಿಪಡಿಸಲು ನಮಗೆ ಸಾಧ್ಯವಿಲ್ಲವೇ?



ಈ ಶಾಲೆಗೆ ಕಲಿಸಲು ಬಂದ ಶಿಕ್ಷಕ ವಿಶಿಷ್ಟವಾದವನೇ! ಆತ ಕಲಿಸಿದ ಪಾಠ ಎಂತಹದ್ದು ರಶಿಯನ್ ಕ್ರಾಂತಿಯ ಕಥೆಗಳಿಂದ...

ಅಧ್ಯಾಪಕ

ಮಾಲಿಯ ಕೊಚ್ಚಿ ಹಳ್ಳಿಯಲ್ಲಿ ಶಾಲಾ ಮಕ್ಕಳಿಗೆ ಪಾಠ ಹೇಳಿಕೊಡಲು ಒಬ್ಬ ಹೊಸ ಅಧ್ಯಾಪಕ ಬಂದ. ಆತ ಒಬ್ಬ ಬಾಲ್ಟಿಕ್ ನಾವಿಕ, "ಅರೋರಾ" ಯುದ್ಧ ನೌಕೆಯ ಚಾಲಕವರ್ಗದಲ್ಲಿ ಕೆಲಸ ಮಾಡಿದ್ದವ. ಅವನಿಗೆ ಪಾಠ ಹೇಳಿಕೊಡುವುದರಲ್ಲಿ ಅನುಭವವಿಲ್ಲ. ಆ ಹಳ್ಳಿಯ ಶಾಲೆಯಲ್ಲಿ ಹಿಂದೆ ಕೆಲಸ ಮಾಡುತ್ತಿದ್ದ ಅಧ್ಯಾಪಕ ಇದ್ದಕ್ಕಿದ್ದಂತೆ ಕೆಲಸ ಬಿಟ್ಟು ಹೊರಟು ಹೋಗಿದ್ದ. ಅವನ ಜಾಗಕ್ಕೆ ಮತ್ತೊಬ್ಬ ನುರಿತ ಅಧ್ಯಾಪಕನನ್ನು ನೇಮಿಸುವವರೆಗೂ ಕೆಲಸ ಮಾಡಲೆಂದು ಈ ನಾವಿಕನನ್ನು ಅಲ್ಲಿಗೆ ಕಳುಹಿಸಿಕೊಡಲಾಗಿದ್ದಿತು.

ಅವನು ಶಾಲೆಗೆ ಬಂದಾಗ ಮೊದಲ ದಿನ ಮಕ್ಕಳು ಮೌನದಿಂದಿದ್ದರು. ಹೊಸ ಅಧ್ಯಾಪಕ ತಮಗೆ ಅಕ್ಷರಾಭ್ಯಾಸ ನಡೆಸಲು ಪ್ರಾರಂಭಿಸುವುದಕ್ಕಾಗಿಯೇ ಕಾದಿದ್ದರು.

ಆದರೆ ನಾವಿಕ ಅಕ್ಷರಾಭ್ಯಾಸ ಪ್ರಾರಂಭಿಸುವ ಬದಲು ತಕ್ಷಣವೇ "ಅರೋರಾ" ನೌಕೆಯ ಬಗೆಗೆ ಹೇಳತೊಡಗಿದ. ಆಮೇಲೆ ಅವನು ತ್ಸಾರನ ಚಳಿಗಾಲದ ಅರಮನೆಯ ಮೇಲೆ ಹೇಗೆ ದಾಳಿ ಮಾಡಲಾಯಿತು, ಹೇಗೆ ಅದನ್ನು ವಶಪಡಿಸಿಕೊಳ್ಳಲಾಯಿತು. ಅನ್ನುವುದನ್ನು ತಿಳಿಸಿದ. ಅವನು ತಿಳಿಸಿದ ಮುಂದಿನ ವಿಷಯ ಬೊಲ್ಶೆವಿಕ್ ಪಾರ್ಟಿ, ಸೋವಿಯತ್ ಅಧಿಕಾರ ಹಾಗೂ ಲೆನಿನರ ಕುರಿತಾಗಿದ್ದಿತು.

ಮಕ್ಕಳಿಗೆ ಇವನ್ನೆಲ್ಲ ಕೇಳಲು ತುಂಬ ಆಸಕ್ತಿ ಇದ್ದಿತು. ಅವರು ನಾವಿಕನ ಮೇಲೆಯೇ ನೋಟ ನೆಟ್ಟು ಸದ್ದಿಲ್ಲದೆ ಕುಳಿತು ಕೇಳಿದರು.

ಕೆಲವು ದಿನಗಳನಂತರ ನಾವಿಕ ತಾನು ಹೇಳಿಕೊಟ್ಟುದನ್ನು ಮಕ್ಕಳು ಎಷ್ಟು ಕಲಿತಿದ್ದಾರೆ ಅನ್ನುವುದನ್ನು ಪರೀಕ್ಷಿಸಬಯಸಿದ.

"'ಅರೋರಾ' ಅಂದರೆ ಏನು?"

"ಅದು ಬಾಲ್ಟಿಕ್ ನೌಕಾದಳದ ಒಂದು ಕ್ರಾಂತಿಕಾರಿ ಹಡಗು. ಅದು ತನ್ನ ಫಿರಂಗಿ ಗುಂಡನ್ನು ಹಾರಿಸುವ ಮೂಲಕ ತ್ಸಾರನ ಚಳಿಗಾಲದ ಅರಮನೆಯ ಮೇಲೆ ದಾಳಿ ಮಾಡುವುದರಲ್ಲಿ ಭಾಗವಹಿಸಿತು."

"ಚೆನ್ನಾಗಿ ಹೇಳಿದಿರಿ! ತುಂಬ ಸರಿ! ಈಗ ಹೇಳಿ ಬೊಲ್ಶೆವಿಕ್ ಪಾರ್ಟಿ ಅಂದರೆ ಯಾವುದು?"

"ಅದು ಅತ್ಯುತ್ತಮವಾದ ಎಲ್ಲ ಲಕ್ಷಣಗಳ ಸಾಕಾರ ಸ್ವರೂಪ" ಮಕ್ಕಳು ಬೇಗ ಬೇಗ ಹೇಳಿದರು. "ಬೋಲ್ಶೆವಿಕ್ ಪಾರ್ಟಿಯು ಭೂಮಿಯನ್ನು ರೈತರಿಗೂ ಕಾರ್ಖಾನೆಗಳನ್ನು ಕಾರ್ಮಿಕರಿಗೂ ವಹಿಸಿಕೊಡುವುದರ ಪರವಾಗಿದೆ. ಅದು ಎಲ್ಲ ಜನತೆಗಳ ಮಧ್ಯೆಯೂ ಶಾಂತಿಗಾಗಿ ಹೋರಾಡುತ್ತದೆ."

"ಸರಿ" ನಾವಿಕ ತಲೆದೂಗಿದ. "ಆದರೆ ಸೋವಿಯತ್ ಅಧಿಕಾರ ಅಂದರೇನು?"

"ದೇಶವನ್ನು ತ್ಸಾರ್ ಅಲ್ಲ, ಬೂರ್ಷ್ವಾ ಅಲ್ಲ, ಆದರೆ ಶ್ರಮಜೀವಿ ಜನರು ಆಳುತ್ತಿದ್ದರೆ ಅದನ್ನು ಸೋವಿಯತ್ ಅಧಿಕಾರ ಅನ್ನುತ್ತಾರೆ."

"ಸರಿ. ಈಗ ಲೆನಿನರ ವಿಷಯ ನಿಮಗೇನು ಗೊತ್ತು, ಯಾರು ಹೇಳುತ್ತೀರಿ?"

"ನಾನು, ನಾನು, ನಾನು" ಮಕ್ಕಳೆಲ್ಲ ಒಟ್ಟಿಗೇ ಹೇಳಿದರು.

"ನೀನು ಹೇಳು, ಎರೆಮೇಯಿಯ್ ತೊರೊಪೀಗಿನ್."

ತೊರೊಪೀಗಿನ್ ನೆಗೆದುನಿಂತ.

" ಲೆನಿನರು ಎಲ್ಲ ಶ್ರಮಜೀವಿ ಜನರ ನಾಯಕ. ಲೆನಿನರು ತುಂಬ ಕಾಲ ಸೆರೆ ಮನೆಯಲ್ಲಿದ್ದರು. ಆಮೇಲೆ ಅವರನ್ನು ಗಡೀಪಾರು ಮಾಡಲಾಯಿತು. ಅವರು ತಮ್ಮ ಇಡೀ ಜೀವನವನ್ನು ಕಾರ್ಮಿಕ ವರ್ಗದ ಹೋರಾಟಕ್ಕೆ ಮುಡುಪಾಗಿರಿಸಿದ್ದರು."

ನಾವಿಕನಿಗೆ ತುಂಬ ಸಂತೋಷವಾಯಿತು. ಅಬ್ಬಾ, ಮಕ್ಕಳು ಎಷ್ಟೊಂದು ಸಮಾಚಾರ ತಿಳಿದವರಾದರು ಈಗ!

ಅನಂತರ ನಾವಿಕ "ಅ," "ಆ" ಅಕ್ಷರಗಳನ್ನು ಹೇಗೆ ಬರೆಯುವುದು ಎಂಬುದನ್ನು, ಒಂದಕ್ಕೆ ಒಂದು ಸೇರಿಸಿದರೆ ಎಷ್ಟಾಗುತ್ತೆ, ಎರಡಕ್ಕೆ ಎರಡು ಸೇರಿಸಿದರೆ ಎಷ್ಟಾಗುತ್ತೆ, ಎಂಬುದನ್ನು ಹೇಳಿಕೊಟ್ಟ. ಇನ್ನೂ ಹೆಚ್ಚು ಹೇಳಿಕೊಡಲು ಅವನಿಗಾಗಲಿಲ್ಲ ಏಕೆಂದರೆ, ಅಷ್ಟು ಹೊತ್ತಿಗೆ ಅವನನ್ನು ಹಿಂದಕ್ಕೆ ಕರೆಸಿಕೊಳ್ಳಲಾಯಿತು.

ಅದಾದ ಸ್ವಲ್ಪ ಕಾಲದಲ್ಲೇ ಆ ಹಳ್ಳಿಯ ಶಾಲೆಗೆ ಒಬ್ಬ ಹೊಸ ಅಧ್ಯಾಪಕರು ಬಂದರು. ಈ ಸಾರಿ ಒಬ್ಬ ಹೆಂಗಸು, ಒಬ್ಬ ಬೋಲ್ಶೆವಿಕ್, ಜೋಯಾ ಅಂತ ಅವರ ಹೆಸರು.

"ಸರಿ. ಇದುವರೆವಿಗೂ ನೀವು ಏನೇನು ಕಲಿತಿರಿ?"

"ನಾವು 'ಅ', 'ಆ' ಬರೆಯುವುದನ್ನು ಕಲಿತಿದ್ದೇವೆ."

"ಒಂದಕ್ಕೆ ಒಂದು ಸೇರಿಸಿದರೆ ಎಷ್ಟು, ಎರಡಕ್ಕೆ ಎರಡು ಸೇರಿಸಿದರೆ ಎಷ್ಟು ಅನ್ನುವುದನ್ನು ಕಲಿತಿದ್ದೇವೆ."

"ಇನ್ನೇನು?"

ಮಕ್ಕಳು ಹೇಳಲು ಅನುಮಾನಿಸಿದರು.

"ಹೆಚ್ಚಿಗೆ ಕಲಿಯಲು ಸಮಯ ಸಿಗದಾಯಿತು. ನಾವಿಕನನ್ನು ಹಿಂದಕ್ಕೆ ಕರೆಸಿಕೊಳ್ಳಲಾಯಿತು."

"ಒಟ್ಟಿನಲ್ಲಿ ಹೆಚ್ಚಿಗೆ ಏನೂ ಕಲಿತಿಲ್ಲ ಅಂತಾಯಿತು. ನೀವು ಅಷ್ಟು ಶ್ರಮಶೀಲ ವಿದ್ಯಾರ್ಥಿಗಳಲ್ಲ ಅಂತ ಕಾಣಿಸುತ್ತೆ, ಹೌದೆ?"

ಮಕ್ಕಳಿಗೆ ಈ ಮಾತು ಕೇಳಿ ಅಪಮಾನಕ್ಕೊಳಗಾದಂತಾಯಿತು. ಎರಮೇಯ್ ತೊರೊಪೀಗಿನ್ ಎದ್ದು ನಿಂತ.

"ಹಾಗೇನಿಲ್ಲ. ನಾವು ಲೆನಿನರ ವಿಷಯ ಕಲಿತೆವು."

"ಹೌದು ಅವನು ಹೇಳಿದ್ದು ಸರಿ!" ಉಳಿದವರೂ ಕೂಗಿ ಹೇಳಿದರು.

"ಸೋವಿಯತ್ ಅಧಿಕಾರದ ಬಗೆಗೂ ಕಲಿತಿದ್ದೇವೆ."

"ಬೋಲ್ಶೆವಿನ್ ಪಾರ್ಟಿಯ ಬಗೆಗೂ ತಿಳಿದಿದ್ದೇವೆ."

"ಮತ್ತೆ ತ್ಸಾರನ ಚಳಿಗಾಲದ ಅರಮನೆಯ ಮೇಲೆ ದಾಳಿ ಮಾಡಿದ ವಿಷಯವೂ ನಮಗೆ ಗೊತ್ತಿದೆ."

ಜೋಯಾ ನಸುನಕ್ಕಳು.

"ಯಾರು ನಿಮಗೆ ಇದನ್ನೆಲ್ಲ ಹೇಳಿಕೊಟ್ಟುದು?"

"'ಅರೋರಾ' ನೌಕೆಯಿಂದ ಬಂದಿದ್ದ ಬಾಲ್ಟಿಕ್ ನಾವಿಕ."

ಜೋಯಾ ತನ್ನಲ್ಲೇ ಹೇಳಿಕೊಂಡಳು: "ಪರವಾಗಿಲ್ಲ, ಬುದ್ಧಿವಂತ ಈ ಬಾಲ್ಟಿಕ್ ನಾವಿಕ. ಅತ್ಯಗತ್ಯ ವಿಷಯಗಳಿಂದಲೇ ಪ್ರಾರಂಭಿಸಿದ್ದಾನೆ." ಅವನನ್ನು ಕಾಣಲು ತನಗೆ ಅವಕಾಶ ಸಿಕ್ಕದೆ ಹೋದುದಕ್ಕಾಗಿ ಅವಳು ವಿಷಾದಪಟ್ಟಳು. ನಾವಿಕ ಹೊರಟು ಹೋದುದಕ್ಕಾಗಿ ಮಕ್ಕಳೂ ವಿಷಾದಪಟ್ಟರು. ಆದರೆ ಎಷ್ಟೇ ಆಗಲಿ ನಾವಿಕ ಅಧ್ಯಾಪಕನಲ್ಲವಲ್ಲ. ಅವನಿಗೆ ಮಾಡಬೇಕಾದುದು ಅವನದೇ ಬೇಕಾದಷ್ಟು ಕೆಲಸಗಳಿರುತ್ತವೆ.

○

ಶೋಷಣೆಯ ರೂಪವೇ ಜಾತಿ ವ್ಯವಸ್ಥೆ - ಜಾತಿ ವ್ಯವಸ್ಥೆಯ ಮೂಲ

ಜಾತಿ ವ್ಯವಸ್ಥೆ ಕುರಿತು ಇತ್ತೀಚೆಗೆ ಎಸ್‌ಎಫ್‌ಐ ಸಂಘಟನೆಯು ನಡೆಸಿದ ಅಧ್ಯಯನ ವೃಂದದಲ್ಲಿ ಕಾಂ. ಜಿ.ಎನ್.ನಾಗರಾಜ್‌ರವರು ಉಪನ್ಯಾಸ ನೀಡಿದರು. ಅದರಲ್ಲಿನ ಪ್ರಮುಖ ಅಂಶಗಳ ಸಂಗ್ರಹವಿಲ್ಲಿದೆ.

ಪ್ರಪಂಚದಲ್ಲಿ ದಕ್ಷಿಣ ಏಷ್ಯಾ ದೇಶಗಳಲ್ಲಿ ಮಾತ್ರ ಈ ಜಾತಿ ವ್ಯವಸ್ಥೆ ವಿಶಿಷ್ಟವಾಗಿದ್ದು, ಭಾರತದಲ್ಲಿ ಇದು ಶೋಷಣೆಯ ವ್ಯವಸ್ಥೆಯಾಗಿ ಮಾರ್ಪಟ್ಟಿದೆ.

ಪ್ರಾರಂಭದಲ್ಲಿ ಮನುಷ್ಯ ಜೀವನ ಬುಡಕಟ್ಟುಗಳ ಮೂಲಕ ಪ್ರಾರಂಭವಾಯಿತು. ಈ ಬುಡಕಟ್ಟುಗಳಲ್ಲಿ ಜಾತಿ ಪದ್ಧತಿ ಅಥವಾ ಆ ರೀತಿಯಾದ ಯಾವುದೇ ವ್ಯವಸ್ಥೆ ಇರಲಿಲ್ಲ. ಈ ಬುಡಕಟ್ಟುಗಳ ಜನರು ಬೇಟೆಗಳ ಮೂಲಕ ಹಾಗೂ ತಮ್ಮ ಪ್ರದೇಶದಲ್ಲಿರುವ ಗೆಡ್ಡೆಗೆಣಸುಗಳನ್ನು ಬಳಸಿ ಜೀವನ ನಡೆಸುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಒಂದು ಬುಡಕಟ್ಟಿಗೆ ಬೇಕಾಗುವಷ್ಟು ಆಹಾರ ಆ ಪ್ರದೇಶದಲ್ಲಿ ಸಿಗದಿದ್ದಾಗ. ಅವರುಗಳು ಆಹಾರವನ್ನು ಹುಡುಕುತ್ತಾ ಮತ್ತೊಂದು ಪ್ರದೇಶಕ್ಕೆ ಸಂಚರಿಸುತ್ತಿದ್ದರು. ಆಗ ಆ ಪ್ರದೇಶದಲ್ಲಿನ ಗುಂಪುಗಳೊಡನೆ ಘರ್ಷಣೆಗಳು ಪ್ರಾರಂಭವಾಗುತ್ತಿದ್ದವು. ಇಂಥಹ ಸಂದರ್ಭದಲ್ಲಿ ಪಶು ಸಂಗೋಪನ ಮತ್ತು ಕೃಷಿ ಪ್ರಾರಂಭವಾಯಿತು. ಬೇಟೆಯ ಸಂದರ್ಭದ ಘರ್ಷಣೆಗಳಲ್ಲಿ ಸೋತ ದುರ್ಬಲ ಗುಂಪಿನವರನ್ನು ತಂದು ಅವರನ್ನು ಕೃಷಿ ಚಟುವಟಿಕೆಗಳಿಗೆ ಬಳಸಲು ಪ್ರಾರಂಭಿಸಿ ಆಹಾರ ಉತ್ಪಾದನೆ ಮತ್ತು ಶ್ರೇಣೀಕರಣ ಪ್ರಾರಂಭವಾಯಿತು. ಇಲ್ಲಿ ಗುಲಾಮ ಪದ್ಧತಿ ಪ್ರಾರಂಭವಾಯಿತು. ಮುಖ್ಯವಾಗಿ ಆಸ್ತಿಯ ಉಗಮವಾಯಿತು. ಶೇಖರಿಸಿಟ್ಟಿದ್ದ ಆಹಾರವನ್ನು ಆಯಾ ಬುಡಕಟ್ಟಿನ ನಾಯಕ ತನ್ನದಾಗಿಸಿಕೊಳ್ಳುವುದರ ಮುಖಾಂತರ ಶೋಷಣೆಯ ವ್ಯವಸ್ಥೆ ಆರಂಭವಾಯಿತು.

ಇದೇ ಸಂದರ್ಭದಲ್ಲಿ ರೋಮ್, ಈಜಿಪ್ಟ್, ಮೆಸಪಟೋಮಿಯಾ ನಾಗರೀಕತೆಗಳಲ್ಲಿ ಗುಲಾಮಿ ಪದ್ಧತಿ ನಿರ್ಮಾಣವಾಯಿತು. ಭಾರತದ ಹರಪ್ಪ ಮಹೇಂಜದಾರೋ ನಾಗರೀಕತೆ ಗಳಲ್ಲಿ ಇದರ ಲಕ್ಷಣಗಳು ಕಾಣಿಸುತ್ತಿದ್ದವು. ಇದೇ ಗುಲಾಮಗಿರಿ ಭಾರತದಾದ್ಯಂತ ಚಾತುರ್ ವರ್ಗಗಳ ಮುಖಾಂತರ ಜಾತಿ ವ್ಯವಸ್ಥೆಯ ಆರಂಭಕ್ಕೆ ಕಾರಣವಾಯಿತು.

ಇಲ್ಲಿಂದಲೇ ಸ್ತ್ರೀಯರ ಶೋಷಣೆಯು ಆರಂಭವಾಯಿತು. ರಾಜ ವ್ಯವಸ್ಥೆಯ ಜೊತೆ ಜೊತೆಗೆ ಸ್ತ್ರೀ-ಪುರುಷರೆಂಬ ಭೇದ ಪ್ರಾರಂಭವಾಯಿತು.

ಜಾತಿವ್ಯವಸ್ಥೆಯ ನಗ್ನ ರೂಪ

ಎಲ್ಲ ಭೂಮಿಯು ರಾಜನ ಹಿಡಿತದಲ್ಲಿದ್ದು, ಶೂದ್ರ, ದಲಿತ, ಅಸ್ಪೃಶ್ಯರೆಲ್ಲರೂ ಈ ಭೂಮಿಯಲ್ಲಿ ದುಡಿಯಬೇಕಾಗಿದ್ದು ಇವರುಗಳಿಗೆ ಆಸ್ತಿಯ ಹಕ್ಕಿರಲಿಲ್ಲ.

ಮನು ಸ್ಮೃತಿಯಲ್ಲೇ ಉಲ್ಲೇಖಿಸಿರುವಂತೆ ಅಸ್ಪೃಶ್ಯರು ಸ್ಮಶಾನಗಳಲ್ಲಿ ವಾಸವಾಗಿರಬೇಕಿತ್ತು. ಸ್ಮಶಾನದಲ್ಲಿ ಬಿಡಿದ ಅಕ್ಕಿ ಮಡಿಕೆ ಚೂರುಗಳನ್ನ ಬಳಸಿ ಅನ್ನ ಮಾಡಿ ತಿನ್ನಬೇಕಿತ್ತು. ಇವರುಗಳ ಹಗಲಿನ ಒತ್ತು ಊರಿನ ಒಳಭಾಗಕ್ಕೆ ಪ್ರವೇಶಿಸುವಂತಿರಲಿಲ್ಲ. ಬಂದರೆ ಕಾಲುಗಳಿಗೆ ಗಂಟೆಗಳನ್ನು ಕಟ್ಟಿ ಶಬ್ದ ಮಾಡಿಕೊಂಡು ಬರಬೇಕಿತ್ತು. ಅದೇ ಮನುಸ್ಮೃತಿಯಲ್ಲಿ 'ನಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದ ಹಾಗೆಯೇ, 'ನಾ ಶೂದ್ರಸ್ಯ ವಿದ್ಯಾದದಾತಿ' ಮತ್ತು 'ನಾ ಶೂದ್ರಸ್ಯ ಮತಿರ್ ದದಾತಿ' ಅಂದರೆ ಯಾವುದೇ ಶೂದ್ರರಿಗೂ ವಿದ್ಯೆ ಕೊಡಬಾರದು ಮತ್ತು



ಯಾವುದೇ ಶೂದ್ರರಿಗೆ ತಿಳುವಳಿಕೆ ಕೊಡಬಾರದು ಎಂದರ್ಥ. 'ವೇದೋಚ್ಚಾರಗೋ ದಿಗ್ವ್ಹಾಚೇದೋ, ವೇದಾಧಾರಣೋ ದೇಹಚ್ಛೇದೋ' ಪದವನ್ನು ಉಚ್ಚರಿಸಿದರೆ ನಾಲಿಗೆಯನ್ನು ಸೀಳು ಮತ್ತು ವೇದವನ್ನು ಕಂಠಪಾಠ ಮಾಡಿದರೆ ದೇಹವನ್ನು ಸೀಳು ಎಂದರ್ಥ.

ಹೋಟೆಲ್‌ಗಳಲ್ಲಿ 2 ಲೋಟದ ಪದ್ಧತಿಗಳು ಜಾತಿ ವ್ಯವಸ್ಥೆಯ ಸಡಿಲತೆ

ಬಸವಣ್ಣ, ಬುದ್ಧ ಇಂತಹವರುಗಳು ಸಾಕಷ್ಟು ಸಮಾಜ ಸುಧಾರಣೆಗಳ ಮೂಲಕ ಜಾತಿ ವ್ಯವಸ್ಥೆಯ ವಿರುದ್ಧ ಕೆಲಸ ಮಾಡಿದರು. ಆದರೆ, ಭಾರತದಲ್ಲಿ ಬಹಳ ಪ್ರಮುಖವಾಗಿ ಕೈಗಾರಿಕೆಗಳು ಮತ್ತು ಶಾಲೆಗಳು ಪ್ರಾರಂಭವೇ ಜಾತಿ ವ್ಯವ್ಥೆಗೆ ಮೊದಲು ಪೆಟ್ಟುಕೊಟ್ಟದ್ದು, ಶಾಲೆಗಳಲ್ಲಿ ಎಲ್ಲಾ ಜಾತಿಯ ಮಕ್ಕಳು ಒಟ್ಟಿಗೆ ಕುಳಿತು ಓದಲಾರಂಭಿಸಿದವು, ಒಟ್ಟಿಗೆ ಬೆರೆತು ಆಟವಾಡುತ್ತಿದ್ದವು: ಈಗ ಕಾರ್ಖಾನೆಗಳಲ್ಲೂ ಒಂದೇ ಯಂತ್ರದೊಂದಿಗೆ ಬೇರೆ ಬೇರೆ ಜಾತಿಯ ಜನ ಒಟ್ಟಿಗೆ ಕೆಲಸ ಮಾಡಬೇಕಾದ ಪರಿಸ್ಥಿತಿಗಳು ನಿರ್ಮಾಣವಾದವು. ಇದರ ಜೊತೆಗೆ ಬಸ್ಸು ಮತ್ತು ರೈಲು ಸಂಚಾರಗಳೂ ಕೂಡ ಈ ಜಾತಿ ವ್ಯವಸ್ಥೆಯ ಸಡಿಲಿಕೆಗೆ ಹೆಚ್ಚು ಕಾರಣವಾಗಿವೆ.

ಜಾತಿ ವ್ಯವಸ್ಥೆಯ ನಿರ್ಮೂಲನೆ

ಯಾವ ಶಾಲೆಗಳು ಮತ್ತು ಕೈಗಾರಿಕೆಗಳು ಜಾತಿ ವ್ಯವಸ್ಥೆಯ ಮೇಲೆ ಮೊದಲು ಪೆಟ್ಟನ್ನು ನೀಡಿದವೋ ಅವುಗಳನ್ನು ದೊಡ್ಡ ಪ್ರಮಾಣದಲ್ಲಿ ಪ್ರಾರಂಭಿಸಿ ಅಭಿವೃದ್ಧಿಪಡಿಸಿದರೆ ಜಾತಿ ವ್ಯವಸ್ಥೆ ಮೇಲೆ ಭಾರೀ ದೊಡ್ಡ ಪೆಟ್ಟನ್ನು ನೀಡಬಹುದು. ಇತ್ತೀಚೆಗೆ ಕೈಗಾರಿಕೆಗಳ ಬೆಳವಣಿಗೆ ಆಗುತ್ತಿರುವುದರಿಂದ ನಿರುದ್ಯೋಗ ಹೆಚ್ಚಾಗುತ್ತಿದ್ದು ಜಾತೀಯತೆ ಹೆಚ್ಚಾಗುತ್ತಿದೆ. ಹಳ್ಳಿ ಪ್ರದೇಶಗಳಲ್ಲಿ ಕೆಲವರ ಒಡೆತನದಲ್ಲಿರುವ ಹೆಚ್ಚು ಭೂಮಿಯನ್ನು ಹಂಚುವುದರ ಮೂಲಕ ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ಒದಗಿಸುವ ಮೂಲಕ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಬಹುದು. ಭೂಸುಧಾರಣೆ ಮತ್ತು ಉದ್ಯೋಗಗಳ ಸೃಷ್ಟಿಗಾಗಿ ಜನಾಂದೋಲನ, ಹೋರಾಟಗಳು ಬೆಳೆದು ಬರಬೇಕು. ಈ ಮೂಲಕ ಬಸವಣ್ಣನವರು ಆರಂಭಿಸಿದ್ದ ಜಾತಿ ವ್ಯವಸ್ಥೆ ನಿರ್ಮೂಲನೆ ಸಾಧ್ಯ.

ವರದಿ - ಯಶವಂತ್

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH